# ವಿಪ್ರನುಡಿ

ಸ್ವಾವಲಂಬನೆ-ಸಂಘಟನೆ-ಸಂಸ್ಕಾರ

ಸಂಪುಟ-34 ಶ್ರೀಶುಭಕೃತ್‌ನಾಮ ಸಂವತ್ಸರ, ಫಾಲ್ಗುಣಮಾಸ ಫೆಬ್ರವರಿ-2023, ಸಂಚಿಕೆ-12, ಪುಟಗಳು-48 ಬೆಲೆ ರೂ.15/-

## ವರ್ಷ ಒಂದು ಕಾರ್ಯಕ್ರಮ ನೂರಾರು





# ಶ್ರೀ ಧನ್ವಂತರಿ ಸೇವಾ ಪ್ರತಿಷ್ಠಾನ (ರಿ)

ಹೊನ್ನೇನಹಳ್ಳಿ ಗ್ರಾಮ, ಗಾವಡಗೆರೆ ಹೋಬಳಿ, ಹುಣಸೂರು ತಾ॥, ಮೈಸೂರು ಜಿಲ್ಲೆ

## ಸರ್ವರೋಗ ನಿವಾರಕ ಮಹಾವಿಷ್ಣು ಸ್ವರೂಪಿ

## ಶ್ರೀ ಧನ್ವಂತರಿಸ್ವಾಮಿಯ "ವೈಭವದ ದೇಗುಲ ನಿರ್ಮಾಣ"



## ಶ್ರೀ ಅಮೃತಬಿಂದು ಕ್ಷೇತ್ರ

ಸಕಲ ರೋಗ ನಿವಾರಕ ಶ್ರೀ ಧನ್ವಂತರಿ ದೇವಾಲಯ ನಿರ್ಮಾಣವು ಅಂದಾಜು ರೂ. 13,82,00,000/- (ರೂ. ಹದಿಮೂರು ಕೋಟಿ ಎಂಬತ್ತೆರಡು ಲಕ್ಷ)ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವುದು. ಈ ಪವಿತ್ರ ವೈಭವದ ದೇವಾಲಯ ನಿರ್ಮಾಣ ಕಾರ್ಯದಲ್ಲಿ ನಾಡಿನ ಕೋಟಿ ಕೋಟಿ ಸಂಖ್ಯೆಯ ಭಕ್ತಾಧಿಗಳು ಅತ್ಯಂತ ಶ್ರದ್ಧಾಭಕ್ತಿಗಳಿಂದ ತಮ್ಮ ತನು-ಮನ-ಧನದ ಮೂಲಕ ತಮ್ಮ ಇಚ್ಛಾನುಸಾರ ಸೇವೆಯನ್ನು ಸ್ವಾಮಿಗೆ ಸಮರ್ಪಿಸಿ ಶ್ರೀ ಭಗವಂತನ ಕೃಪೆಗೆ ಪಾತ್ರರಾಗಬೇಕೆಂದು ವಿನಂತಿ.

**ವಿಶೇಷ ಸೂಚನೆ : ಶ್ರೀ ಧನ್ವಂತರಿ ಸ್ವಾಮಿಯ ದೇಗುಲ ನಿರ್ಮಾಣಕ್ಕಾಗಿ ತಾವು ನೀಡುವ ದೇಣಿಗೆಗೆ ಭಾರತ ಸರ್ಕಾರದ ಆದಾಯ ತೆರಿಗೆ 80 ಕಾಯ್ದೆಯಡಿಯಲ್ಲಿ ತೆರಿಗೆ ವಿನಾಯಿತಿ ಸೌಲಭ್ಯವಿರುತ್ತದೆ.**

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ :

ಬೆಂಗಳೂರು ಕಛೇರಿ : 080-35816865
9880777545 / 9900319932

ಹುಣಸೂರು ಕಛೇರಿ : 08222-295374
9902360398 / 9740132374

ತಮ್ಮ ಅಮೂಲ್ಯ ಕಾಣಿಕೆಯು ಡಿಡಿ / ಚೆಕ್ / ಆನ್‌ಲೈನ್ ರೂಪದಲ್ಲಿರಲಿ

**Bank Details :**

**Account Name : Sri Dhanvantari Seva Pratishtana (R), Name of the Bank : State Bank of India (SBI)**
**Branch : J.P. Nagar 2nd Phase, Bangalore. C A/c. No. : 41100807414 | IFSC : SBIN0017649**

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**

ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ,
ಗಾಯತ್ರಿ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–70
ದೂರವಾಣಿ: 26771695, 26770066
E-mail: info@akbms.com
Website: www.akbms.com

ಅಧ್ಯಕ್ಷರು
**ಅಶೋಕ ಪಾರನಹಳ್ಳಿ**

ಪ್ರಧಾನ ಕಾರ್ಯದರ್ಶಿ
**ಶ್ರೀಧರಮೂರ್ತಿ ಎನ್**

ಖಜಾಂಚಿ
**ವೆಂಕಟೇಶ ಎಸ್, ನಾಯಕ್**

ಸಂಘಟನಾ ಕಾರ್ಯದರ್ಶಿ
**ಡಾ। ಜಿ.ಎಸ್. ರಾಘವೇಂದ್ರ ಭಟ್**

**ವಿಪ್ರನುಡಿ ಪ್ರಕಟಣಾ ಸಮಿತಿ**

ಪ್ರಧಾನ ಸಂಪಾದಕರು
**ಡಾ। ಎಂ.ಕೆ. ಶ್ರೀಧರ್**

ಸಮಿತಿ ಸದಸ್ಯರು
**ಜ್ಯೋತಿಷಿ ಬ॥ ಡಾ। ಮುದ್ರಾಡಿ ವಾಸುದೇವ ಭಟ್**
**ನಾರಾಯಣ ಭಟ್ ಹುಳೇಗಾರು**
**ಪ್ರಭಾಕರ ಕೆ.ಸಿ**
**ಕಾರ್ತಿಕ್ ಬಾಪಟ್**
**ಹೆಚ್.ವಿ. ಸುಬ್ಬರಾವ್**

ಕಛೇರಿ ಸಮಯ : ಮಂಗಳವಾರದಿಂದ ಶನಿವಾರ
ಬೆಳಿಗ್ಗೆ 10.00 ರಿಂದ 2.00
ಸಂಜೆ 4.00 ರಿಂದ 8.00
ಭಾನುವಾರ ಬೆಳಿಗ್ಗೆ 10.00 ರಿಂದ 2.00
ವಾರದ ರಜಾ : ಸೋಮವಾರ

ಮುದ್ರಕರು : ಪರಿಮಳ ಮುದ್ರಣಾಲಯ
ನಂ 184, 14ನೇ ಮುಖ್ಯರಸ್ತೆ, ಹನುಮಂತನಗರ
ಬೆಂಗಳೂರು–560 05. ದೂ : 26606061.

# ನಲ್ನುಡಿ

**ಸುಜೀರ್ಣಮುನ್ನಂ ಸುವಿಚಕ್ಷಣಃ ಸುತಃ ಸಂಶಾಸಿತಾಸ್ತ್ರೀ ನೃಪತಿಃ ಸುಸೇವಿತಾಃ ।**
**ಸುಚಿಂತ್ಯಚೋಕ್ಸಂಸುವಿಚಾರ್ಯಯತ್‌ಕೃತಂ ಸುದೀರ್ಘಕಾಲೇಪಿನಯಾತಿ ವಿಕ್ರಿಯಾಮ್ ॥**

ಇದೊಂದು ಸೊಗಸಾದ ಸುಭಾಷಿತವಿದು. ಆಯುರ್ವೇದ ಸಿದ್ಧಾಂತಗಳ ಪ್ರಕಾರ ನಾವು ಬಹಳ ಕಾಲ ಆರೋಗ್ಯವಂತರಾಗಿರಬೇಕಾದರೆ ನಾವು ಸೇವಿಸುವ ಆಹಾರದಲ್ಲಿ ಎಚ್ಚರದಿಂದರಬೇಕು. ಪ್ರತಿಯೊಬ್ಬ ವ್ಯಕ್ತಿಗೂ ತನಗೆಷ್ಟು ಪ್ರಮಾಣದ ಆಹಾರ ಬೇಕು. ದಿನಕೆಷ್ಟು ಬಾರಿ ಸೇವಿಸಬೇಕು ಎಂದು ತಿಳಿದಿರಬೇಕು. ಸೇವಿಸುವ ಅಹಾರ ಅತಿಯಾದರೆ ಅದೂ ವಿಷವಾಗುತ್ತದೆ. (ಅಜೀರ್ಣಭೋಜನಂ ವಿಷಂ।) ಸಭೆ–ಸಮಾರಂಭಗಳಲ್ಲಿ ಲಜ್ಜೆ–ಸಂಕೋಚವಿಲ್ಲದೆ ಹಿತ–ಮಿತವಾಗಿ ಭೋಜನ ಸವಿಯಬೇಕು. ಈ ಅಂಶವು ನಾವು ಕೈಗೊಳ್ಳುವ ವ್ಯವಹಾರ, ವಾಣಿಜ್ಯಕ್ಕೆ ಅನ್ವಯಿಸುತ್ತಿದೆ. (ಆಹಾರೇ ವ್ಯವಹಾರೇ ಚ ತ್ಯಕ್ತಃ ಲಜ್ಜಃ ಸುಖೀ ಭವೇತಿ।), ಮಕ್ಕಳನ್ನು ಸಂಸ್ಕಾರಶೀಲರನ್ನಾಗಿ, ವಿದ್ಯಾವಂತರಾಗಿ, ವಿನಯವಂತರಾಗಿ ಬೆಳೆಸಬೇಕು. ಒಳ್ಳೆಯ ಮಗನು ಕುಲಕ್ಕೆ ಬೆಳಕಿದ್ದಂತೆ (ಸಪುತ್ರಃ ಕುಲದೀಪಕಃ।) ಅಂತಹ ಮಗನನ್ನು ಪಡೆದ ತಂದೆತಾಯಿಯರೇ ಪುಣ್ಯವಂತರು.

ಹೆಣ್ಣು ತ್ಯಾಗಮಯಿ, ಪ್ರೇಮಮಯಿ, ಕುಟುಂಬ ನಿರ್ವಾಹಿಕಿ, ಉತ್ತಮ ನಡೆಯ ಗೃಹಿಣಿಯಿಂದ ಇಡೀ ಕುಲವೇ ಉದ್ಧಾರವಾಗುತ್ತದೆ. ಭವಿಷ್ಯದಲ್ಲಿ ಅವಳು ಜವಾಬ್ದಾರಿಗಳನ್ನು ವಹಿಸಿಕೊಳ್ಳಲು, ಚೆನ್ನಾಗಿ ನಿಭಾಯಿಸಲು ಚಿಕ್ಕ ವಯಸ್ಸಿನಿಂದ ಮನೆಯ ಹಿರಿಯರು, ತಂದೆತಾಯಿಯರು ಹೆಣ್ಣುಮಕ್ಕಳನ್ನು ಸಂಸ್ಕಾರಶೀಲರನ್ನಾಗಿ, ಸುಶಿಕ್ಷಿತಳನ್ನಾಗಿ ರೂಪಿಸಬೇಕು. ರಾಜ್ಯಾಂಗದಲ್ಲಿ ರಾಜನಿಗೆ ಉತ್ತಮ ಸಲಹೆಗಾರರಿಬೇಕು. ಮಂತ್ರಿಗಳು, ಪ್ರಧಾನ ಮಂತ್ರಿಗಳು, ಸೇನಾಪತಿ, ಗೂಢಚಾರರು, ಅಧಿಕಾರಿಗಳು ವೃತ್ತಿದ್ರೋಹ ಮಾಡದೇ ರಾಜನಿಗೆ ಕರಾರುವಾಕ್ಕಾದ ಮಾಹಿತಿಗಳನ್ನು ನೀಡುತ್ತಿರಬೇಕು. ಎಲ್ಲರೂ ಬರಿಗಣ್ಣಿನಿಂದ ಹೊರಜಗತ್ತನ್ನು ನೋಡಿದರೆ, ರಾಜನು ಗೂಢಚಾರರ ಮೂಲಕ ಹೊರಜಗತ್ತನ್ನು ನೋಡಿ, ರಾಜ್ಯಭಾರ ನಡೆಸುತ್ತಾನೆ. (ಚಾರೈಃ ಪಶ್ಯಂತಿರಾಜನಃ ಚಕ್ಷುಭ್ಯಾಂ ಇತರೇ ಜನಾಃ।) ಎಂಬ ಚಾಣಕ್ಯ ವಾಕ್ಯ, ಸ್ವಾರ್ಥ, ಲೋಭ, ಮೋಹಗಳಿಂದ ಕೂಡಿದ ಮಂತ್ರಿಯು ರಾಜ, ರಾಜ್ಯವನ್ನು ನಾಶ ಮಾಡುತ್ತಾನೆ. ಮದವೇರಿದ ಆನೆಯು ಕಾಡನ್ನು ನಾಶ ಮಾಡಿದಂತೆ (ದುರ್ಮಂತ್ರೀ ರಾಜನಾಶಾಯ ವನನಾಶಾಯ ಕುಂಜರಃ ।) ನಾವು ಮಾತನಾಡುವಾಗ ಚಿಂತಿಸಿ, ಯೋಚಿಸಿ ಮಾತನಾಡಬೇಕು. ಮಾತಿನಿಂದಲೇ ಗೆಳತನ, ಹಗೆತನ ಅಲ್ಲವೇ ! (ಮಾತಿನಿಂ ನಗೆ ನುಡಿಯು ಮಾತಿನಿಂ ಹೊಲೆಯು). ಕವಿ ಭಾರವಿ ತನ್ನ ಕಿರಾತಾರ್ಜುನೀಯಂ ಗ್ರಂಥದಲ್ಲಿ ತಿಳಿಸಿದಂತೆ ಯೋಚಿಸಿ ಕೆಲಸ ಕಾರ್ಯ ಮಾಡುವವನನ್ನು ಸಂಪತ್ತುಗಳು ತಾನಾಗಿಯೇ ಅನುಸರಿಸುತ್ತವೆ. (ಗುಣಲುಬ್ಧಾಃ ಸ್ವಯಂ ಏವ ಸಂಪದಃ।), ಈ ಆರೂ ಕಾರ್ಯಗಳನ್ನು ಯೋಗ್ಯ ರೀತಿಯಿಂದ ಕೈಗೊಂಡಾಗ ಎಲ್ಲವೂ ಫಲಿಸುತ್ತವೆ. ಇವೇ ಉನ್ನತ ಬಾಳ್ವೆಗೆ ಸೋಪಾನಗಳು.

**ಸೂಚನೆ :** ವಿಪ್ರನುಡಿ ಪತ್ರಿಕೆಯಲ್ಲಿ ಮುದ್ರಿತ ವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ – ಮುದ್ರಕರ ಅಭಿಪ್ರಾಯವಲ್ಲ. ವಿಪ್ರನುಡಿಯಲ್ಲಿ ಪ್ರಕಟವಾಗುವ ಯಾವುದೇ ಜಾಹೀರಾತುಗಳಿಗೆ (ರಿಯಲ್ ಎಸ್ಟೇಟ್, ಜ್ಯೋತಿಷ್ಯ, ವಾಣಿಜ್ಯಕ್ಕೆ ಸಂಬಂಧಿಸಿದ್ದು ಮಹಾಸಭೆ ಜವಾಬ್ದಾರರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಾಹಿರಾತುದಾರರನ್ನೇ ಸಂಪರ್ಕಿಸಬೇಕು.

–ಸಂಪಾದಕ ಮಂಡಳಿ

ಹಿಂದಿನ ಸಂಚಿಕೆಯಿಂದ

# ತತ್ವ ಬೋಧ

ಸ್ವಾಮಿ ಶಿವಪ್ರಕಾಶಾನಂದ ಸರಸ್ವತಿ

**ಅಥ ಚತುರ್ವಿಂಶತಿತತ್ತ್ವೋತ್ಪತ್ತಿಪ್ರಕಾರಂ ವಕ್ಷ್ಯಾಮಃ।**

ಅನುವಾದ: ಇನ್ನು ಇಪ್ಪತ್ನಾಲ್ಕು ತತ್ವಗಳ ಉತ್ಪತ್ತಿಯ ಪ್ರಕಾರವನ್ನು ಹೇಳುವೆವು.

**ವಿವರಣೆ:** ಸಾಂಖ್ಯದರ್ಶನದಲ್ಲಿ ಈ ಜಗತ್ತನ್ನು ಇಪ್ಪತ್ನಾಲ್ಕು ತತ್ವಗಳಾಗಿ ವಿಂಗಡಿಸಿದ್ದಾರೆ. ಅದರಂತೆ ಈ ಗ್ರಂಥದಲ್ಲೂ ಇಪ್ಪತ್ನಾಲ್ಕು ತತ್ತ್ವಗಳನ್ನು ಹೇಳಲಾಗಿದೆ. ಆದರೆ ಈ ಇಪ್ಪತ್ನಾಲ್ಕು ತತ್ತ್ವಗಳು ಸಾಂಖ್ಯದ ತತ್ತ್ವಗಳಿಗಿಂತ ಭಿನ್ನವಾಗಿವೆ. ಇಲ್ಲಿ ಪಂಚ ಮಹಾಭೂತಗಳು, ಪಂಚ ಜ್ಞಾನೇಂದ್ರಿಯಗಳು, ಪಂಚ ಕರ್ಮೇಂದ್ರಿಯಗಳು, ಪಂಚ ಪ್ರಾಣಗಳು, ಬುದ್ಧಿ, ಮನಸ್ಸು, ಅಹಂಕಾರ ಹಾಗೂ ಚಿತ್ತ – ಇವುಗಳು ಇಪ್ಪತ್ನಾಲ್ಕು ತತ್ವಗಳು. ಇವುಗಳ ಸೃಷ್ಟಿ ಹೇಗೆ ಆಗುವುದು ಎನ್ನುವುದನ್ನು ವಿವರಿಸಲಾಗುತ್ತದೆ. ಎಲ್ಲವೂ ಬ್ರಹ್ಮದಿಂದಲೇ ಉಂಟಾಗಿದೆ, ಹಾಗಾಗಿ ಬ್ರಹ್ಮಕ್ಕಿಂತ ಬೇರೆಯಾದ ವಸ್ತು ಯಾವುದೂ ಇಲ್ಲ ಎಂದು ತಿಳಿಸುವುದೇ ವೇದಾಂತದಲ್ಲಿ ಸೃಷ್ಟಿಯ ಚರ್ಚೆಯ ಪ್ರಯೋಜನವಾಗಿದೆ.

**ಬ್ರಹ್ಮಾಶ್ರಯಾ ಸತ್ತ್ವರಜಸ್ತಮೋಗುಣಾತ್ಮಿಕಾ ಮಾಯಾ ಅಸ್ತಿ।**

**ಅನುವಾದ:** ಬ್ರಹ್ಮನನ್ನು ಆಶ್ರಿತವಾದ ಸತ್ವ ರಜಸ್ಸು ಹಾಗೂ ತಮಸ್ಸು ಎಂಬ ಗುಣಗಳಿಂದ ಕೂಡಿದ ಮಾಯೆಯು ಇದೆ.

**ವಿವರಣೆ:** ನಿರ್ವಿಕಾರವಾದ ಬ್ರಹ್ಮವು ಸ್ವತಃ ಯಾವುದೇ ಪರಿಣಾಮವನ್ನು ಹೊಂದಲಾರದು. ಆದರೆ ಈ ಜಗತ್ತಿಗೆ ಬ್ರಹ್ಮನೇ ಕಾರಣ ಎಂದು ಶಾಸ್ತ್ರಗಳು ತಿಳಿಸುತ್ತವೆ. ನಿರ್ವಿಕಾರವಾದ ಬ್ರಹ್ಮದಿಂದ ಈ ಜಗತ್ತು ಹೇಗೆ ಉಂಟಾಗುವುದು ಎಂಬ ಪ್ರಶ್ನೆಗೆ ಉತ್ತರವೇ ಮಾಯೆ. ಮಾಯೆಯು ಪರಮಾತ್ಮನಾದ ಬ್ರಹ್ಮವನ್ನೇ ಆಶ್ರಯಿಸಿದೆ. ಇದಕ್ಕೆ ಸ್ವತಂತ್ರವಾಗಿ ಇರಲು ಸಾಧ್ಯವಿಲ್ಲ. ಯಾಕೆಂದರೆ ಇದು ಬ್ರಹ್ಮದಂತೆ ಸತ್ಯ ವಸ್ತುವಲ್ಲ. ಮಾಯೆಯು ಮಿಥ್ಯೆ. ಮಿಥ್ಯೆಯಾದ ಮಾಯೆಯು ಸತ್ಯವಸ್ತುವಿನ ಆಶ್ರಯವಿಲ್ಲದೆ ಇರಲಾರದು. ಈ ಮಾಯೆಯಲ್ಲಿ ಸತ್ತ್ವಾದಿ ಮೂರು ಗುಣಳು ಇವೆ. ಈ ಮಾಯೆಯು ಬ್ರಹ್ಮನ ಸ್ವರೂಪವನ್ನು ಮರೆಯಾಗಿಸಿ ಪ್ರಪಂಚದ ಸೃಷ್ಟಿಗೆ ಕಾರಣವಾಗುತ್ತದೆ.

**ತತಃ ಆಕಾಶಃ ಸಂಭೂತಃ। ಆಕಾಶಾದ್ ವಾಯುಃ।**
**ವಾಯೋಃ ತೇಜಃ। ತೇಜಸಃ ಆಪಃ। ಅದ್ಭ್ಯಃ ಪೃಥಿವೀ।**

**ಅನುವಾದ:** ಅದರಿಂದ ಆಕಾಶವು ಉಂಟಾಯಿತು. ಆಕಾಶದಿಂದ ವಾಯು. ವಾಯುವಿನಿಂದ ತೇಜಸ್ಸು. ತೇಜಸ್ಸಿನಿಂದ ಜಲ. ಜಲದಿಂದ ಪೃಥಿವೀ।

**ವಿವರಣೆ:** ಮಾಯೆಯಿಂದ ಕೂಡಿದ ಬ್ರಹ್ಮವನ್ನೇ ವೇದಾಂತದಲ್ಲಿ ಈಶ್ವರ ಎನ್ನಲಾಗುತ್ತದೆ. ಈ ಈಶ್ವರನಿಂದಲೇ ಜಗತ್ತು ಉಂಟಾಗುತ್ತದೆ. ಜಗತ್ತಿನ ಸೃಷ್ಟಿಯಲ್ಲಿ ಮೊದಲು ಪಂಚಭೂತಗಳು ಇಲ್ಲಿ ಹೇಳಿದ ಕ್ರಮದಲ್ಲಿ ಪ್ರಕಟವಾಗುತ್ತವೆ. ಈ ಅವಸ್ಥೆಯಲ್ಲಿ ಈ ಭೂತಗಳಲ್ಲಿ ತಮ್ಮ ತಮ್ಮ ಗುಣಗಳು ಉದ್ಭೂತವಾಗಿರುವುದಿಲ್ಲ. ಹಾಗಾಗಿ ಇವುಗಳನ್ನು ಸೂಕ್ಷ್ಮಭೂತಗಳು ಎನ್ನುವರು.

**ಏತೇಷಾಂ ಪಂಚತತ್ತ್ವಾನಾಂ ಮಧ್ಯೇ ಆಕಾಶಸ್ಯ ಸಾತ್ತ್ವಿಕಾಂಶಾತ್ ಶ್ರೋತ್ರೇಂದ್ರಿಯಂ ಸಂಭೂತಮ್। ವಾಯೋಃ ಸಾತ್ತ್ವಿಕಾಂಶಾತ್ ತ್ವಗಿಂದ್ರಿಯಂ ಸಂಭೂತಮ್। ಅಗ್ನೇಃ ಸಾತ್ತ್ವಿಕಾಂಶಾತ್ ಚಕ್ಷುರಿಂದ್ರಿಯಂ ಸಂಭೂತಮ್। ಜಲಸ್ಯ ಸಾತ್ತ್ವಿಕಾಂಶಾದ್ ರಸನೇಂದ್ರಿಯಂ ಸಂಭೂತಮ್। ಪೃಥಿವ್ಯಾಃ ಸಾತ್ತ್ವಿಕಾಂಶಾದ್ ಘ್ರಾಣೇಂದ್ರಿಯಂ ಸಂಭೂತಮ್।**

**ಅನುವಾದ:** ಈ ಐದು ತತ್ತ್ವಗಳಲ್ಲಿ ಆಕಾಶದ ಸಾತ್ತ್ವಿಕಾಂಶದಿಂದ ಶ್ರೋತ್ರೇಂದ್ರಿಯವು ಉಂಟಾಯಿತು. ವಾಯುವಿನ ಸಾತ್ತ್ವಿಕಾಂಶದಿಂದ ತ್ವಗಿಂದ್ರಿಯವು ಉಂಟಾಯಿತು. ಅಗ್ನಿಯ ಸಾತ್ತ್ವಿಕಾಂಶದಿಂದ ಚಕ್ಷುರಿಂದ್ರಿಯವು ಉಂಟಾಯಿತು. ಜಲದ ಸಾತ್ತ್ವಿಕಾಂಶದಿಂದ ರಸನೇಂದ್ರಿಯವು ಉಂಟಾಯಿತು. ಪೃಥಿವಿಯ ಸಾತ್ತ್ವಿಕಾಂಶದಿಂದ ಘ್ರಾಣೇಂದ್ರಿಯವು ಉಂಟಾಯಿತು.

**ವಿವರಣೆ:** ಸೂಕ್ಷ್ಮಭೂತಗಳಿಂದ ಸೂಕ್ಷ್ಮಶರಿರದ ಬೇರೆ ಬೇರೆ ಅವಯವಗಳು ಉಂಟಾಗುವ ಪ್ರಕಾರವನ್ನು ತಿಳಿಸಲಾಗುತ್ತಿದೆ. ಪ್ರತಿಯೊಂದು ಭೂತವೂ ತ್ರಿಗುಣಾತ್ಮಕವಾದ ಮಾಯೆಯ ಕಾರ್ಯವಾದ್ದರಿಂದ ಮೂರು ಗುಣಗಳನ್ನೂ ಒಳಗೊಂಡಿರುತ್ತದೆ. ಹಾಗಾಗಿ ಪ್ರತಿಯೊಂದು ಭೂತದಲ್ಲೂ ಸಾತ್ತ್ವಿಕಾಂಶ, ರಾಜಸಾಂಶ ಹಾಗೂ ತಾಮಸಾಂಶ ಎನ್ನುವ ಮೂರು ಅಂಶಗಳು ಇರುವುವು ಎಂದು ತಿಳಿಯಬಹುದು. ಆಕಾಶಾದಿ ಒಂದೊಂದು ಭೂತದ ಸಾತ್ತ್ವಿಕಾಂಶದಿಂದ ಕ್ರಮವಾಗಿ ತ್ವಗಿಂದ್ರಿಯ ಇತ್ಯಾದಿ ಐದು ಜ್ಞಾನೇಂದ್ರಿಯಗಳು ನಿರ್ಮಿತವಾಗಿವೆ.

**ಏತೇಷಾಂ ಪಂಚತತ್ತ್ವಾನಾಂ ಸಮಷ್ಟಿಸಾತ್ತ್ವಿಕಾಂಶಾದ್ ಅಂತಃಕರಣಂ ಸಂಭೂತಮ್। ತಚ್ಚ ವೃತ್ತಿಭೇದಾದ್ ಮನೋಬುದ್ಧ್ಯಹಂಕಾರಚಿತ್ತಾನಿ ಇತಿ ಚತುರ್ಧಾ।**

**ಅನುವಾದ:** ಈ ಪಂಚತತ್ತ್ವಗಳ ಸಮಷ್ಟಿ ಸಾತ್ತ್ವಿಕಾಂಶದಿಂದ ಅಂತಃಕರಣವು ಉಂಟಾಗಿದೆ. ಅದು ವೃತ್ತಿಗಳ ಭೇದದಿಂದ ಮನಸ್ಸು, ಬುದ್ಧಿ, ಅಹಂಕಾರ ಹಾಗೂ ಎಂದು ನಾಲ್ಕು ಬಗೆಯದ್ದಾಗಿದೆ.

**ವಿವರಣೆ:** ಆಕಾಶಾದಿ ಭೂತಗಳು ಪ್ರತ್ಯೇಕವಾಗಿ ಒಂದೊಂದು ಜ್ಞಾನೇಂದ್ರಿಯಕ್ಕೆ ಕಾರಣವಾಗುತ್ತವೆ. ಈ ಐದೂ ಭೂತಗಳ ಸಾತ್ತ್ವಿಕಾಂಶಗಳು ಒಟ್ಟಾಗಿ ಸಮಷ್ಟಿ ಸಾತ್ತ್ವಿಕಾಂಶವಾಗತ್ತದೆ. ಈ ಸಮಷ್ಟಿ ಸಾತ್ತ್ವಿಕಾಂಶದಿಂದ ಅಂತಃಕರಣವು ಉಂಟಾಗುತ್ತದೆ. ಅಂತಃಕರಣವು ಒಂದೇ ಆಗಿದ್ದರೂ ವೃತ್ತಿಗಳ ಭೇದದಿಂದಾಗಿ ಅದು ಮನಸ್ಸು ಇತ್ಯಾದಿ ಹೆಸರುಗಳಿಂದ ಕರೆಯಲ್ಪಡುತ್ತದೆ.

– ಮುಂದುವರಿಯುವುದು



# ಅಧ್ಯಕ್ಷರ ನುಡಿ

**ವಿಪ್ರಬಂಧುಗಳೇ,**

**ತಮಗೆಲ್ಲ ಮಹಾಶಿವರಾತ್ರಿಯ ಹಾರ್ದಿಕ ಶುಭಾಶಯಗಳು.**

ಗಣೇಶ ಚತುರ್ಥಿ ಆದಿಯಾಗಿ ಹಲವು ಹಬ್ಬಹರಿದಿನಗಳನ್ನು ಮಹಾಸಭೆಯ ಆಶ್ರಯದಲ್ಲಿ ನಡೆಸಿಕೊಂಡು ಬಂದಂತೆ ಈ ಬಾರಿ ಹೊಸದಾಗಿ "ಮಹಾಶಿವರಾತ್ರಿ" ಯಂದು ಸಂಜೆ 6.00 ರಿಂದ ಬೆಳಿಗ್ಗೆ 6.00 ರವರೆಗೆ ಅಭಿಷೇಕ – ಪೂಜೆಗೂ ವ್ಯವಸ್ಥೆ ಮಾಡಿದ್ದು, ಆಸಕ್ತ ಆಸ್ತಿಕ ವಿಪ್ರ ಬಂಧುಗಳು ಇದರಲ್ಲಿ ಪಾಲ್ಗೊಂಡು ಆ ಮಹಾದೇವನ ಕೃಪೆಗೆ ಪಾತ್ರರಾದರು. ಯುಗಾದಿಯನ್ನು ಆಚರಿಸಲಾಗುತ್ತಿದ್ದು ಈ ಸಂದರ್ಭದಲ್ಲಿ ಮಹಾಸಭಾದ ಮೊದಲ ಅಧ್ಯಕ್ಷರಾದ ದಿ॥ ಮಾಸ್ಟರ್ ಹಿರಣ್ಣಯ್ಯನವರ ಸ್ಮರಣೆಯಲ್ಲಿ 'ನಗೆ ಹಬ್ಬ' ಆಯೋಜಿಸುವ ವಿಚಾರವಿದೆ.

ಕಳೆದ ಒಂದು ವರ್ಷದಲ್ಲಿ ನಡೆದ ಮಹಾಸಭೆಯ ಕಾರ್ಯಚಟುವಟಿಕೆಗಳ ಕುರಿತ ಸಂಕ್ಷಿಪ್ತ ಮಾಹಿತಿಯನ್ನು ಈ ಸಂಚಿಕೆಯಲ್ಲಿ ನೀಡಲು ವಿಪ್ರನುಡಿ ತಂಡ ಪ್ರಯತ್ನಿಸಿದೆ. ಇದು ಸಮಗ್ರ ವರದಿಯಾಗಿರದಿದ್ದರು ವಿವಿಧ ಸಮಿತಿಗಳು ಮಹಾಸಭೆಯ ವಿವಿಧ ಧ್ಯೇಯೋದ್ದೇಶಗಳನ್ನು ಈಡೇರಿಸುವಲ್ಲಿ ನಡೆಸಿರುವ ಪ್ರಯತ್ನವನ್ನು ದಾಖಲಿಸಲು ಯಶಸ್ವಿಯಾಗಿದೆ ಎಂದು ಭಾವಿಸಿದ್ದೇನೆ. ಮಹಾಸಭೆಯು ಒಂದು ವರ್ಷದಲ್ಲಿ ಸಾಧಿಸಬಹುದಾಗಿದ್ದು ಬಹಳವಿದ್ದರೂ ಕೂಡ ಆಗಿರುವ ಪ್ರಗತಿಯನ್ನು ಧನಾತ್ಮಕವಾಗಿ ತಾವೆಲ್ಲ ಸ್ವೀಕರಿಸಿರುತ್ತೀರೆಂದು ಭಾವಿಸಿದ್ದೇನೆ. ಈ ಮಟ್ಟಿನ ಕಾರ್ಯ ಸಾಧನೆಗೆ ಮಾರ್ಗದರ್ಶನ ನೀಡಿ ಕೈಜೋಡಿಸಿದ ಎಲ್ಲ ಗುರು–ಹಿರಿಯರಿಗೂ, ಸದಸ್ಯರಿಗೂ, ಪದಾಧಿಕಾರಿಗಳಿಗೂ ನನ್ನ ಕೃತಜ್ಞತೆಗಳು. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಉತ್ಸಾಹ ವೇಗದೊಂದಿಗೆ ಸಮಾಜವನ್ನು ಬಲಿಷ್ಠಗೊಳಿಸುವ ಸಂಕಷ್ಟದಲ್ಲಿರುವ ಸಮಾಜ ಬಾಂಧವರಿಗೆ ನೆರವಾಗುವ ಸನಾತನ ಧರ್ಮ ಸಂರಕ್ಷಣೆ ಕಾರ್ಯಕ್ರಮಗಳಿಗೆ ತಮ್ಮ ಪೂರ್ಣ ಸಹಕಾರ, ಬೆಂಬಲ ಇದೆಯೆಂದು ಭಾವಿಸುತ್ತೇನೆ.

ಮಹಾಸಭೆಯು ನಮ್ಮ ಸಮಾಜದ ಆರ್ಥಿಕವಾಗಿ ದುರ್ಬಲರಾದ ಅರ್ಚಕರು, ಅಡಿಗೆಯವರು, ಅಂಗವಿಕಲರು, ವೃದ್ಧರಿಗಾಗಿ ಆದ್ಯತೆಯ ಮೇರೆಗೆ ಕಾರ್ಯಕ್ರಮಗಳನ್ನು ಆರಂಭಿಸಿದೆ. ಸಂಕಷ್ಟದಲ್ಲಿರುವ ಅಂಗವಿಕಲರೂ, ಹಾಗೂ ವೃದ್ಧರಿಗಾಗಿ ಮಾಸಿಕ 500=00 ರೂ. ಗಳ ಮಾಸಾಶನ ನೀಡುವ ಯೋಜನೆಯ ಸದುಪಯೋಗವನ್ನು ಪಡೆದುಕೊಳ್ಳಲು ಕೋರಿದೆ. ಹಾಗೆಯೇ ಇಂತಹವರಿಗಾಗಿ ವೈದ್ಯಕೀಯ ನೆರವು ನೀಡುವ ಯೋಜನೆಗಳನ್ನು ಆರಂಭಿಸಲಾಗಿದ್ದು, ರೋಗ ಪರೀಕ್ಷೆ, ಚಿಕಿತ್ಸೆಗಳನ್ನು ರಿಯಾಯತಿ ದರದಲ್ಲಿ ಒದಗಿಸಲು ಪ್ರಸಿದ್ಧ ಆಸ್ಪತ್ರೆಗಳೊಡನೆ (ನಾರಾಯಣ ಹೃದಯಾಲಯ, ಮಣಿಪಾಲ್ ಆಸ್ಪತ್ರೆ ಮುಂತಾದವು) ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ. ಇತ್ತೀಚೆಗೆ ಈ ಸಂಬಂಧವಾಗಿ ಪ್ರಸಿದ್ಧ ತಜ್ಞ ವೈದ್ಯರುಗಳಿಂದ ಕೂಡಿದ "ವಿಪ್ರ ವೈದ್ಯ ವೇದಿಕೆ" ಯ ಸಹಯೋಗದಲ್ಲಿ ಮುಂಬರುವ ದಿನಗಳಲ್ಲಿ ವಿಪ್ರರಿಗೆ ರಿಯಾಯಿತಿ ದರದಲ್ಲಿ ವೈದ್ಯಕೀಯ ನೆರವು ನೀಡಲು 'ಸಹಾಯವಾಣಿ' ಯನ್ನು ಆರಂಭಿಸಲಾಗುವುದು ಎಂದು ತಿಳಿಸಲು ಹರ್ಷಿಸುತ್ತೇನೆ. ಆಡಳಿತ, ವಾಣಿಜ್ಯೋದ್ಯಮ–ಕೈಗಾರಿಕೆ, ಪರಿಣಿತ ವೃತ್ತಿಪರರನ್ನು ಒಳಗೊಂಡ ಸಮಾಜದ ಸಾಧಕ ಗಣ್ಯಾತಿಗಣ್ಯರ ಮಾರ್ಗದರ್ಶನ ಹಾಗೂ ಸಹಕಾರದಿಂದ ಶಿಕ್ಷಣ – ಉದ್ಯೋಗ, ಆರೋಗ್ಯ ಹಾಗೂ ಸನಾತನ ಧರ್ಮ ರಕ್ಷಣೆ ಆದ್ಯತಾ ವಲಯಗಳಲ್ಲಿ ರಚನಾತ್ಮಕ ಕಾರ್ಯ ಯೋಜನೆಗಳನ್ನು ಈ ಸಾಲಿನಲ್ಲೇ ಆರಂಭಿಸಲಾಗುವುದು.

ಇತ್ತೀಚಿನ ದಿನಗಳಲ್ಲಿ ತಮ್ಮ ಪಾಡಿಗೆ ತಾವಿರುವ ನಿರುಪದ್ರವಿ ಬ್ರಾಹ್ಮಣ ಸಮಾಜವನ್ನು ವಿನಾಕಾರಣ ಟೀಕಿಸುವ ಅವಹೇಳನ ಮಾಡುವ ಪರಿಪಾಠ ಹೆಚ್ಚಾಗುತ್ತಿರುವುದು ಬೇಸರದ ಸಂಗತಿ. ಮಾಜಿ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರು ಕೇಂದ್ರ ಮಂತ್ರಿಗಳಾದ ಪ್ರಹ್ಲಾದ ಜೋಶಿಯವರ ಜಾತಿ ಹಾಗೂ ಚಿತ್ಪಾವನ ಸಮಾಜವನ್ನು ಉಲ್ಲೇಖಿಸಿ ಮಾಡಿರುವ ಟೀಕೆಗೆ ಮಹಾಸಭೆ ಸಮರ್ಥವಾಗಿ, ವ್ಯಾಪಕವಾಗಿ ಖಂಡಿಸಿರುವುದನ್ನು ಮಾಧ್ಯಮಗಳ ಮೂಲಕ ತಾವು ಗಮನಿಸಿರುತ್ತೀರಿ. ವಿಪ್ರ ಸಮಾಜವನ್ನು ಗುರಿಯಾಗಿಸಿ ಮಾಡುತ್ತಿರುವ ಈ ರೀತಿಯ ಅನಪೇಕ್ಷಣೀಯ, ಧೋರಣೆಯನ್ನು ಪ್ರತಿಭಟಿಸಿಲು ವಿಪ್ರ ಸಮಾಜ ಬಲಿಷ್ಠವಾಗಬೇಕಾದ ಅನಿವಾರ್ಯತೆ ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ ಎಂಬುದನ್ನು ನಾವೆಲ್ಲ ಮನಗಾಣಬೇಕು. ಹಾಗೆಯೇ ಇಂತಹ ಸಂದರ್ಭಗಳಲ್ಲಿ ನಮ್ಮ ಸಮಾಜದವರೇ ಆದ ಜನಪ್ರತಿನಿಧಿಗಳ ಮೌನವೂ ಕೂಡ ಪ್ರಶ್ನಾರ್ಹ. ಅಂತೂ ನಾವು ಜಾಗೃತವಾಗಿ, ಒಗ್ಗಟ್ಟಾಗಿ, ಬಲಿಷ್ಠರಾಗಿ ಇಂತಹ ದಾಳಿಗಳನ್ನು ಎದುರಿಸಲು ಸನ್ನದ್ಧರಾಗಬೇಕಾಗಿದೆ.

**ಅಶೋಕ ಹಾರನಹಳ್ಳಿ**
ಮಹಾಸಭಾಧ್ಯಕ್ಷರು.

# ಸಂಪಾದಕೀಯ

**ಆತ್ಮೀಯ ವಿಪ್ರಬಂಧುಗಳೇ,**

ನಮಸ್ಕಾರ. ನಮ್ಮ ದೇಶವು 75ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಿ, 64ನೇ ಗಣರಾಜ್ಯೋತ್ಸವವನ್ನು ಆಚರಿಸಿದ ಸುಸಂದರ್ಭದಲ್ಲಿ ನಮ್ಮ ರಾಜ್ಯದ ಇಬ್ಬರು ಖ್ಯಾತನಾಮರಿಗೆ ಕೇಂದ್ರ ಸರ್ಕಾರದ ಮೂರನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ "ಪದ್ಮಭೂಷಣ" ದೊರೆತಿರುವುದು ಬಹಳ ಹೆಮ್ಮೆಯ ವಿಷಯ. ಪ್ರಸಿದ್ಧ ಚಿಂತಕರೂ, ಖ್ಯಾತ ಕಾದಂಬರಿಕರರಾದ ಡಾ. ಎಸ್.ಎಲ್. ಭೈರಪ್ಪ ಹಾಗೂ ಸಮಾಜ ಸೇವೆಯಲ್ಲಿ ಮಂಚೂಣಿಯಲ್ಲಿರುವ ಡಾ. ಸುಧಾ ಎನ್. ಮೂರ್ತಿಯವರಿಗೆ ಬಂದ ಈ ಪ್ರಶಸ್ತಿಯಿಂದಾಗಿ ಬ್ರಾಹ್ಮಣ ಸಮುದಾಯಕ್ಕೆ, ಕರ್ನಾಟಕಕ್ಕೆ ಕಳಶವಿಟ್ಟಂತಾಗಿದೆ. 92 ವಯಸ್ಸಿನ ಪ್ರೊ: ಭೈರಪ್ಪನವರು ತತ್ತ್ವಶಾಸ್ತ್ರದಲ್ಲಿ ಪದವಿ, ಸ್ನಾತಕೋತ್ತರ, ಪಿ.ಎಚ್.ಡಿ. ಪದವಿಗಳನ್ನು ಪಡೆದು ಹುಬ್ಬಳ್ಳಿ, ಗುಜರಾತ್, ದೆಹಲಿಯಲ್ಲಿ ಅಧ್ಯಾಪಕ ವೃತ್ತಿ ಕೈಗೊಂಡು, ಅಂತಾರಾಷ್ಟ್ರೀಯ ಫೆಲೋಶಿಪ್‌ಗಳನ್ನು ಪಡೆದು, ಸಣ್ಣಕಥೆ, ಸಾಹಿತ್ಯ ವಿಮರ್ಶೆಗಳನ್ನು ಬರೆಯಲು ಆರಂಭಿಸಿ (1955) 'ಭೀಮಕಾಯ' ಎಂಬ ಕಾದಂಬರಿಯ ಮೂಲಕ ಆ ಸಾಹಿತ್ಯ ಲೋಕವನ್ನು ಪ್ರವೇಶಿಸಿದವರು ಇಂದಿಗೂ ಹಿಂತಿರುಗಿ ನೋಡಿಲ್ಲ. ಶ್ರೀಯುತರು ಇಲ್ಲಿಯವರೆಗೂ 25 ಕಾದಂಬರಿಗಳನ್ನು, 4 ಸಾಹಿತ್ಯ ಚಿಂತನಾಗ್ರಂಥಗಳು ಹಾಗೂ 'ಭಿತ್ತಿ' ಎಂಬ ಆತ್ಮಚರಿತ್ರೆಯನ್ನು ಬರೆದು, ಅನುಪಮ ಲೇಖಕರಾಗಿ ಜಗದ್ವಿಖ್ಯಾತರಾಗಿರುವುದು ಅಸಾಮಾನ್ಯ ಸಾಧನೆ. ಅವರ ಬದುಕು–ಬರಹಗಳನ್ನು ಕುರಿತಂತೆ ಕೊಂಡಜ್ಜಿ ಕೆ. ವೆಂಕಟೇಶ್, ಡಾ.ಎಲ್.ವಿ. ಶಾಂತಕುಮಾರಿ, ಪ್ರೊ.ನರಸಿಂಹಮೂರ್ತಿ, ಜಿ.ಎಲ್. ಶೇಖರ್ ಮುಂತಾದ 20ಕ್ಕೂ ಹೆಚ್ಚು ಲೇಖಕರು ಅಧ್ಯಯನ ಮಾಡಿ ಮಹತ್ವಪೂರ್ಣಾ ಗ್ರಂಥಗಳನ್ನು ಸಂಪಾದಿಸಿ, ರಚಿಸಿದ್ದಾರೆ. ಡಾ. ಭೈರಪ್ಪನವರ ಪ್ರತಿಯೊಂದು ಕಥೆ, ವಿಶೇಷವಾಗಿ ಕಾದಂಬರಿಯು ಓದುಗರನ್ನು ಆಳಚಿಂತನೆಗೆ ಹಚ್ಚುತ್ತದೆ. ಬಹುಶಃ ಆಧುನಿಕ ವೇಗೋತ್ಕರ್ಷ ಯುಗದಲ್ಲಿ ವಿಸ್ತಾರವಾದ ವಸ್ತು, ತಂತ್ರ, ವಿನ್ಯಾಸ, ನೂರಾರು ಪಾತ್ರ ಚಿತ್ರಣಗಳನ್ನು ನೀಡಿರುವುದು ಭೈರಪ್ಪನವರೊಬ್ಬರೆ. ಅವರ ಪ್ರತಿಯೊಂದು ಕಾದಂಬರಿಯಲ್ಲಿ ಬರುವ ವಸ್ತುವಿನ ಹರಿವು, ಸಾಂದರ್ಭಿಕ ವರ್ಣನೆಗಳು ಒಂದು ಪ್ರಚಲಿತ ಅಥವಾ ಸಾರ್ವಕಾಲೀನ ವಿಷಯ–ತತ್ತ್ವ–ಸಿದ್ಧಾಂತ ನಿರೂಪಣೆ, ಮನ–ಹೃದಯ ತಟ್ಟುವ ತಿಳಿಯಾದ ಭಾಷೆ ಸೃಜನಾತ್ಮಕ ಕಲೆ ಶೈಲಿ ಎಲ್ಲವೂ ಓದುಗರನ್ನು ಅಚ್ಚರಿಗೊಳಿಸುತ್ತವೆ. ಭಾರತೀಯ ಮೌಲ್ಯ ಪ್ರಜ್ಞೆಯನ್ನು ಸಣ್ಣ ವಯಸ್ಸಿನಲ್ಲೆ ಬೆಳೆಸಿಕೊಂಡ ಪ್ರೊ. ಭೈರಪ್ಪನವರು ಹುಟ್ಟು ಪ್ರವಾಸಿಗರಾಗಿ ನಮ್ಮ ದೇಶದ ಮೂಲೆ–ಮೂಲೆಗಳನ್ನು ನೋಡಿದ್ದರ ಜೊತೆಗೆ, ಮೂವತ್ತಕ್ಕೂ ಹೆಚ್ಚು ರಾಷ್ಟ್ರಗಳಿಗೆ ಭೇಟಿ ಕೊಟ್ಟು, ಅಲ್ಲಿನ ರೀತಿ–ರಿವಾಜು, ನೀತಿ–ನಿಯಮ, ಆರ್ಥಿಕತೆ–ರಾಜಕೀಯತೆ ಮತಧರ್ಮಗಳು, ಸಂಸ್ಕೃತಿಗಳನ್ನು ಬಹಳ ಸೂಕ್ಷ್ಮವಾಗಿ ನೋಡಿ, ಪರಿಶೀಲಿಸಿ, ತಮ್ಮ ಕೃತಿಗಳಲ್ಲಿ ಪ್ರಸ್ತಾಪಿಸಿದ್ದಾರೆ. ಹೀಗಾಗಿ ಅವರ ಬಹಳಷ್ಟು ಕಾದಂಬರಿಗಳು ನಮ್ಮ ದೇಶದ ಹಲವು ಪ್ರಾದೇಶಿಕ ಭಾಷೆಗಳಿಗೆ, ಆಂಗ್ಲ ಭಾಷೆಗೆ ಅನುವಾದವಾಗಿ ಜನಮನ್ನಣೆ ಗಳಿಸಿದ್ದು ಅವರಿಂದು ಅಂತಾರಾಷ್ಟ್ರೀಯ ಕಾದಂಬರಿಕಾರರ ಸಾಲಿನಲ್ಲಿ ನಿಲ್ಲುತ್ತಾರೆ. ಭವಿಷ್ಯದಲ್ಲಿ ಅವರಿಗೆ ಹಲವು ಪ್ರಶಸ್ತಿಗಳು ಬಂದರೂ ಆಶ್ಚರ್ಯವೇನಿಲ್ಲ. ಈಗ ನಮ್ಮ ದೇಶದ ಬಹಳಷ್ಟು ಸಾಹಿತ್ಯ – ಸಾಮಾಜಿಕ ಪ್ರಶಸ್ತಿಗಳು ಸಂದಿದ್ದು, ಅವುಗಳಿಂದ ಬಂದ ಪ್ರಶಸ್ತಿ ಮೊತ್ತವನ್ನು ಸಾಮಾಜಿಕ ಕಾರ್ಯಗಳಿಗೆ ವಿನಿಯೋಗಿಸಲು ವಿನಮ್ರವಾಗಿ ಸಮಾಜಕ್ಕೆ ಹಿಂತಿರುಗಿಸಿರುವುದು ಹಲವರಿಗೆ ತಿಳಿದಿಲ್ಲ. ನಾಡಿನ ಅತ್ಯಂತ ಜನಪ್ರಿಯ ಸಾಹಿತಿಗಳಾದ ಭೈರಪ್ಪನವರನ್ನು ಕೇಂದ್ರ ಸರ್ಕಾರವು ಪದ್ಮಭೂಷಣ ನೀಡಿ ಗೌರವಿಸಿರುವ ಸಂದರ್ಭದಲ್ಲಿ ಮಹಾಸಭೆಯು ಹಾರ್ದಿಕವಾಗಿ ಅಭಿನಂದಿಸುತ್ತದೆ.

ಇನ್ಫೋಸಿಸ್ ಎಂಬ ಬೃಹತ್ ಐಟಿ ಸಂಸ್ಥೆಯ ಬೆಳವಣಿಗೆಯಲ್ಲಿ ಪಾತ್ರವಹಿಸಿದ ವಿಖ್ಯಾತ ಸಮಾಜ ಸೇವಕಿ, ಚಿಂತಕಿ, ಲೇಖಕಿಯಾದ ಡಾ. ಸುಧಾ ಎನ್. ಮೂರ್ತಿಯವರು ತಮ್ಮ ನಡೆ–ನುಡಿ, ಲೇಖನ–ಚಿಂತನೆ, ಸಮಾಜ ಸೇವೆಗಳಿಂದ ದೇಶದಲ್ಲಿಯೇ ಹೆಸರು ವಾಸಿಯಾಗಿದ್ದಾರೆ. ತಮ್ಮ ಪತಿ ನಾರಾಯಣಮೂರ್ತಿಯವರೊಂದಿಗೆ ಸ್ಥಾಪಿಸಿದ ಇನ್ಫೋಸಿಸ್ ಫೌಂಡೇಶನ್ ಮೂಲಕ ಸಾವಿರಾರು ಬಡಮಕ್ಕಳಿಗೆ, ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ವಿದ್ಯಾಭ್ಯಾಸಕ್ಕೆ, ಶಾಲೆಗಳ, ಆಸ್ಪತ್ರೆಗಳ ಮೂಲಭೂತ ಸೌಕರ್ಯಗಳ ಉನ್ನತಿಗೆ ಉದಾರವಾಗಿ ದೇಣಿಗೆ ನೀಡಿದ್ದಾರೆ. ಬರಿದಾಗಿದ್ದ ಜಲಾಶಯಗಳು, ಪಾಳುಬಿದ್ದ ದೇವಾಲಯಗಳನ್ನು ಪುನಶ್ಚೇತಗೊಳಿಸಿದ್ದಾರೆ, ದೇವದಾಸಿಯರಿಗೆ ಪುನರ್ವಸತಿ, ಸ್ವಉದ್ಯೋಗ ರೂಪಿಸಿಕೊಟ್ಟಿದ್ದಾರೆ. ಸ್ತ್ರೀಯರು ಶಿಕ್ಷಿತರಾಗಿ, ವಿದ್ಯಾವಂತರಾಗಿ, ಆರ್ಥಿಕವಾಗಿ ಬಲಿಷ್ಠರಾಗಲು ಹಲವಾರು ಯೋಜನೆಗಳನ್ನು ಹಮ್ಮಿಕೊಂಡು ಕಾರ್ಯಗತಗೊಳಿಸಿದ್ದಾರೆ. ಇನ್ನೊಂದೆಡೆ, ಸಾಹಿತ್ಯಕ ಚಟುವಟಿಕೆಗಳನ್ನು, ಗೋಷ್ಠಿಗಳನ್ನು ನಡೆಸುತ್ತಿರುವ ಸರ್ಕಾರೇತರ ಸಂಘ–ಸಂಸ್ಥೆಗಳಿಗೆ ನೆರವು ನೀಡಿ, ಅವು ತಮ್ಮದೇ ಛಾಪನ್ನು ಮಂಡಿಸಲು ಯಶಸ್ವಿಯಾಗಿದ್ದಾರೆ. ಈ ರೀತಿ ಸಮಾಜಮುಖಿ ಸೇವಾ ಕಾರ್ಯಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿರುವ ಡಾ. ಸುಧಾ ಎನ್. ಮೂರ್ತಿಯವರಿಗೆ ಕೇಂದ್ರ ಸರ್ಕಾರವು ಪದ್ಮಭೂಷಣ ನೀಡಿ ಗೌರವಿಸಿರುವ ಸಂದರ್ಭದಲ್ಲಿ ಮಹಾಸಭೆಯು ಹಾರ್ದಿಕವಾಗಿ ಅಭಿನಂದಿಸುತ್ತದೆ.


## ವಿಪ್ರನುಡಿಯಲ್ಲಿ ಜಾಹೀರಾತಿಗಾಗಿ ಮನವಿ

**ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.**

| | | | | |
|---|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. | 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. | 20,000/= |
| 3. | ಒಳ ಪುಟ (ವರ್ಣ) | .. | ರೂ. | 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. | 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. | 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. | 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. | 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. | 2,000/= |

# ಆಡಳಿತಕ್ಕೆ ವರ್ಷ – ಸಾಧನೆಯ ಹರ್ಷ

ಅಧಿಕಾರ ಸ್ವೀಕರಿಸಿ ಒಂದು ವರ್ಷ ಪೂರ್ಣಗೊಂಡ ಸಂದರ್ಭದಲ್ಲಿ ಸಮಾಜದ ಎಲ್ಲ ವರ್ಗ, ಪಂಗಡಗಳ ಪ್ರೀತಿ ವಿಶ್ವಾಸಕ್ಕೆ ಪಾತ್ರರಾದ ಹಾಗೂ ಸಮಾಜದ ಹಿರಿಮೆ–ಗರಿಮೆಗಾಗಿ ಸದಾ ಕಾರ್ಯೋನ್ಮುಖರಾದ ನಮ್ಮೆಲ್ಲರ ನೆಚ್ಚಿನ ಹೆಮ್ಮೆಯ ಅಶೋಕ ಹಾರನಹಳ್ಳಿಯವರಿಗೆ ಹಾರ್ದಿಕ ಅಭಿನಂದನೆಗಳು.

ಕಳೆದ ಸಾಲಿನ ಆರಂಭದಲ್ಲಿ ಮಹಾಸಭೆಯ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ ಮಹಾಸಭೆಯ ಧ್ಯೇಯೋದ್ದೇಶಗಳನ್ನು ಈಡೇರಿಸುವಲ್ಲಿ ಸಂಘಟನೆಯ ಬಲಗೊಳಿಸುವ ಮೂಲಕ ಬ್ರಾಹ್ಮಣ ಸಮಾಜವು ಎದುರಿಸುತ್ತಿರುವ ಸಮಕಾಲೀನ ಸಮಸ್ಯೆಗಳನ್ನು ಪರಿಹರಿಸುವಲ್ಲಿ, ಸಂಕಷ್ಟದಲ್ಲಿರುವ ಸಮಾಜ ಬಾಂಧವರಿಗೆ ನೆರವಾಗುವಲ್ಲಿ ಕೈಗೊಂಡಿರುವ ಕಾರ್ಯ ಚಟುವಟಿಕೆಗಳ ಸಂಕ್ಷಿಪ್ತ ಮಾಹಿತಿಯನ್ನು ವಿಪ್ರನುಡಿ ತಂಡ ನಿಮ್ಮ ಮುಂದಿಡಲು ಪ್ರಯತ್ನಿಸಿದೆ. ಸ್ಥಳಾವಕಾಶದ ಅಭಾವದಿಂದ ಈ ಸಂಚಿಕೆಯಲ್ಲಿ ನೀಡಲಾಗದ, ಹಲವು ವಿಭಾಗಗಳ ಕಾರ್ಯ ಚಟುವಟಿಕೆಗಳ ಮಾಹಿತಿಯನ್ನು ಮುಂದಿನ ಸಂಚಿಕೆಯಲ್ಲಿ ನೀಡಲಾಗುವುದು.

## ಅಧ್ಯಕ್ಷರಾಗಿ ಆಯ್ಕೆ, ಅಧಿಕಾರ ಸ್ವೀಕಾರ



- ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ನೂತನ ಅಧ್ಯಕ್ಷರಾಗಿ ಚುನಾಯಿತರಾದ ಮಾಜಿ ಅಡ್ವೋಕೇಟ್ ಜನರಲ್ ಶ್ರೀ ಅಶೋಕ ಹಾರನಹಳ್ಳಿ ಅವರಿಂದ ಗುರುವಾರ 06.01.2023 ರಂದು ಸಂಜೆ ಮಹಾಸಭಾದ ಕೇಂದ್ರ ಕಛೇರಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕಾರ.
- ಮಹಾಸಭಾದ ಕಾರ್ಯಾಲಯದಲ್ಲಿ ಶ್ರೀ ಸದ್ಗುರುಗಳ ಪಾದುಕಾ ಪೂಜೆ ಮತ್ತು ಉದಕಶಾಂತಿಯುಕ್ತ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ.
- ಬಸವನಗುಡಿ ಕ್ಷೇತ್ರದ ಶಾಸಕ ರವಿ ಸುಬ್ರಹ್ಮಣ್ಯ, ಚಿಕ್ಕಪೇಟೆ ಶಾಸಕ ಉದಯ್ ಗರುಡಾಚಾರ್, ಬೆಂಗಳೂರಿನ ಮಾಜಿ ಮೇಯರ್ ಕಟ್ಟೆ ಸತ್ಯನಾರಾಯಣ, ಬಿಬಿಎಂಪಿ ಮಾಜಿ ಸದಸ್ಯ ಸಿ.ಕೆ.ರಾಮಮೂರ್ತಿ ಸೇರಿದಂತೆ ಸಮಾಜದ ಅನೇಕ ಹಿರಿಯ ಮುಖಂಡರು ಹಾಗೂ ಅಸಂಖ್ಯ ಅಭಿಮಾನಿಗಳ ಉಪಸ್ಥಿತಿ.
- ಬ್ರಾಹ್ಮಣ ಮಹಾಸಭಾದ ಹಿರಿಯ ಮುಖಂಡ ಹೆಚ್.ಎನ್. ಹಿರಿಯಣ್ಣಸ್ವಾಮಿಯವರಿಂದ ಡಿಸೆಂಬರ್ 12 ಮತ್ತು 19ರಂದು ನಡೆದ ಮಹಾಸಭಾ ಅಧ್ಯಕ್ಷರ ಚುನಾವಣೆಯಲ್ಲಿ ಶ್ರೀ ಅಶೋಕ್ ಹಾರನಹಳ್ಳಿಯವರು ಅಧ್ಯಕ್ಷರಾಗಿ ಆಯ್ಕೆ ಯಾಗಿರುವ ಬಗ್ಗೆ ಚುನಾವಣಾ ಅಧಿಕಾರಿಗಳು ಡಿಸೆಂಬರ್ 19 ರಂದು ಪ್ರಕಟಿಸಿದ ಫಲಿತಾಂಶದ ಪ್ರಕಟಣೆ ದಾಖಲು.



- ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸಂಸ್ಥಾಪಕ ಸದಸ್ಯರೂ ಆದ ಬೆಂಗಳೂರು ಗಾಯನ ಸಮಾಜದ ಅಧ್ಯಕ್ಷ ಡಾ.ಎಂ. ಆರ್.ವಿ.ಪ್ರಸಾದ್ ಹಾಗೂ ಮಂಕುತಿಮ್ಮನ ಕಗ್ಗ ಗಮಕ ಖ್ಯಾತಿಯ ಶ್ರೀ ಎಚ್.ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರಿಂದ ನೂತನ ಅಧ್ಯಕ್ಷರಿಗೆ ಸನ್ಮಾನ ಅಭಿನಂದನೆ.
- "ಅಧ್ಯಕ್ಷ ಪದವಿಯನ್ನು ಅಧಿಕಾರ ಎಂದು ತಾನು ಭಾವಿಸುವುದಿಲ್ಲ ಸಮಾಜದ ಸೇವೆಗೆ ಸಿಕ್ಕಿರುವ ಹೊಸ ಹೊಣೆಗಾರಿಕೆಯಾಗಿದೆ. ಇದನ್ನು ಯಶಸ್ವಿಯಾಗಿ ನಿಭಾಯಿಸಲು ಸಮಾಜಬಾಂಧವರ ಸಹಕಾರ ಅತಿ ಮುಖ್ಯವಾಗಿದ್ದು, ಮಹಾಸಭಾ ಉನ್ನತಿಗೆ ಎಲ್ಲರೂ ಸಹಕರಿಸಬೇಕು" ಎಂದು ನೂತನ ಅಧ್ಯಕ್ಷರಿಂದ ವಿನಂತಿ.

**ನೂತನ ಕಾರ್ಯಕಾರಿ ನೇಮಕ :**

**ನೂತನ ಕಾರ್ಯಕಾರಿ ಸಮಿತಿ ಸಭೆಯ ಪ್ರಮುಖ ಅಂಶಗಳು:**

- ಅಧ್ಯಕ್ಷರಿಂದ ನೇಮಕಗೊಂಡ ಕೇಂದ್ರ ಕಾರ್ಯಕಾರಿ ಸಮಿತಿಯ 155 ಸದಸ್ಯರ ನೇಮಕದ ಪ್ರಕಟಣೆ ಹಾಗೂ ಅನುಮೋದನೆ.
- ಅಧ್ಯಕ್ಷರಿಂದ ಸೂಚಿಸಲ್ಪಟ್ಟ ಈ ಕೆಳಕಂಡ ಪದಾಧಿಕಾರಿಗಳ ಪಟ್ಟಿಗೆ ಅನುಮೋದನೆ.
- ಉಪಾಧ್ಯಕ್ಷರಾಗಿ ಶ್ರೀ ಹೆಚ್.ಆರ್. ಸುರೇಶ್, ಬೆಂಗಳೂರು,

# ಪ್ರಗತಿಯ ಹೆಗ್ಗುರುತುಗಳು

- ಸದಸ್ಯತ್ವ : 42 ಸಾವಿರದಿಂದ 54 ಸಾವಿರಕ್ಕೆ.
- ಡಿಜಿಟಲೀಕರಣ : ಮಹಾ ಸಭೆಯ ವೆಬ್‌ಸೈಟ್ ಹಾಗೂ ಇತರ ಸಮಾಜಿಕ ತಾಣಗಳ ಮೂಲಕ ಮಹಾಸಭೆ ಹಾಗೂ ಸಮುದಾಯಕ್ಕೆ ಸಂಬಂಧಿಸಿದ ಎಲ್ಲ ಚಟುವಟಿಕೆ ಮತ್ತು ಉಪಯುಕ್ತಮಾಹಿತಿಗಳನ್ನು ನೀಡುವ ಸಲುವಾಗಿ ಡಿಜಿಟಲೀಕರಣಕ್ಕಾಗಿ ತಂತ್ರಜ್ಞರ ತಂಡದ ರಚನೆ.
- ನಿಶ್ಚಿತ ಠೇವಣಿ : ಗರಿಷ್ಠ 6 ಕೋಟಿಗೆ ಸನಿಹಕ್ಕೆ.
- ನವೀಕರಣ ಕಾರ್ಯ : ಗಾಯಿತ್ರಿಭವನದಲ್ಲಿ ನೂತನ ಲಿಫ್ಟ್ 3–4ನಾಲ್ಕನೇ ಮಹಡಿ ವಿಸ್ತರಣೆ ಮತ್ತು ವಿದ್ಯಾವಾಸಿನಿ ವಸತಿ ನಿಲಯ ನವೀಕರಣಕ್ಕೆ ರೂ. 40 ಲಕ್ಷ ವೆಚ್ಚ.
- ಮಾದರಿ ವಸತಿ ನಿಲಯ : ಸಕಲ ಸೌಲಭ್ಯಗಳನ್ನು ಕಲ್ಪಿಸಿ ಮಾದರಿ ವಸತಿ ನಿಲಯವಾಗಿ ವಿಪ್ರ ಮಹಿಳಾ ವಸತಿ ನಿಲಯದ ಅಭಿವೃದ್ಧಿ.
- ಕಾರ್ಯಚಟುವಟಿಕೆ ವಿಸ್ತರಣೆ : ರಾಜ್ಯಾದ್ಯಂತ ಹಲವು ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಮಹಾಸಭಾದ ಘಟಕಗಳ ರಚನೆ ಹಾಗೂ ಮಹಿಳಾ ಮತ್ತು ಯುವ ವೇದಿಕೆಗಳ ಸ್ಥಾಪನೆ, ಬೆಂಗಳೂರಿನಿಂದ ಕಾರ್ಯಚಟುವಟಿಕೆಗಳ ರಾಜ್ಯಾದ್ಯಂತ ವಿಸ್ತರಣೆ.
- ಸದ್ಭಾವನಾ ಯಾತ್ರೆ : ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ರಾಷ್ಟ್ರೀಯ ಏಕತೆ ಮತ್ತು ಭಾವೈಕ್ಯತೆಯನ್ನು ಸಾರುವ ಹಾಗೂ ದೇಶಕ್ಕಾಗಿ ಹುತಾತ್ಮರಾದ ಸ್ವಾತಂತ್ರ್ಯ ಯೋಧರಿಗೆ ಗೌರವ ಸಲ್ಲಿಸುವ ಪಕ್ಷಾತೀತ ಮತ್ತು ಜಾತ್ಯತೀತ ವಿಧುರಾಶ್ವತ್ಥಕ್ಕೆ ಬೃಹತ್ ಪಾದಯಾತ್ರೆ ಆಯೋಜನೆ.
- ವೈದ್ಯಕೀಯ ವಿಭಾಗ ಕಲಾ ಮತ್ತು ಸಾಂಸ್ಕೃತಿಕ ವೇದಿಕೆ, ಮಹಿಳಾ ಮತ್ತು ಯುವ ಘಟಕಗಳ ಪ್ರಾರಂಭೋತ್ಸವನ್ನು ವಿಜೃಂಭಣೆಯಿಂದ ನೆಡಸಿ ಆಯಾ ವಿಭಾಗಗಳ ಕಾರ್ಯಚಟುವಟಿಕೆಗಳಿಗೆ ವಿದ್ಯುಕ್ತ ಚಾಲನೆ.
- ಚಾಮರಾಜನಗರ, ಹಾಸನ, ಬೇಲೂರು, ಶಿರಸಿ, ಮಂಗಳೂರು, ಉಡುಪಿ, ಗದಗ, ರಾಯಚೂರ್, ಚಿಂತಾಮಣಿ, ಕೋಲಾರ ಮೈಸೂರು, ಶಿವಮೊಗ್ಗ ಬೆಳಗಾವಿ, ಹುಬ್ಬಳ್ಳಿ, ಹಾವೇರಿ ಮುಂತಾದ ಹಲವು ಸ್ಥಳಗಳಲ್ಲಿ ಮಹಾ ಸಭಾದ ಘಟಕ ಹಾಗೂ ಸ್ಥಳೀಯ ಬ್ರಾಹ್ಮಣರ ಸಂಘಟನೆಗಳ ಹಲವು ವಿಪ್ರ ಸಮಾವೇಶ ಪ್ರತಿಭಾಪುರಸ್ಕಾರ ಯಜ್ಞಯಾಗಾದಿ ಧಾರ್ಮಿಕ ಕಾರ್ಯಕ್ರಗಳ ಮೂಲಕ ನಾಡಿನಾದ್ಯಂತ ಸನಾತನ ಧರ್ಮ ಪರಿಪಾಲನೆ, ವಿಪ್ರ ಸಮಾಜದ ಜಾಗೃತಿ ಹಾಗೂ ಸಂಘಟನೆಗೆ ಚಾಲನೆ.
- ಗುರುವರ್ಯರ ಆಶೀರ್ವಾದ : ಸುಮಾರು 40ಕ್ಕು ಹೆಚ್ಚು ತ್ರಿಮತಸ್ಥ ಮಠಾಧೀಶರು ಹಾಗೂ ಯತಿಗಳಿಗೆ ಚಾತುರ್ಮಾಸದಲ್ಲಿ ಮಹಾಸಭಾದಿಂದ ಭಿಕ್ಷಾಸಮರ್ಪಣೆ ಮಾಡಿ ಆಶೀರ್ವಾದ ಮತ್ತು ಮಾರ್ಗದರ್ಶನ ಪಡೆಯುವ ಹೊಸ ಸಂಪ್ರದಾಯಕ್ಕೆ ಚಾಲನೆ.
- ಅಧ್ಯಕ್ಷರ ಪ್ರಯತ್ನದ ಫಲವಾಗಿ ಶ್ರೀಮಠಗಳಿಗೆ ಸರ್ಕಾರದಿಂದ ತಲಾ ಒಂದು ಕೋಟಿ ಅನುದಾನ :– ಶೃಂಗೇರಿ ಶಿವಗಂಗಾ ಶಾಖಾ ಮಠ, ಎಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತಿ ಮಠ, ಕೆ.ಆರ್.ನಗರ, ಮೈಸೂರು ಜಿಲ್ಲೆ, ಸೋಸಲೆ ವ್ಯಾಸರಾಜ ಮಠ, ಟಿ. ನರಸೀಪುರ, ಮೈಸೂರು ಜಿಲ್ಲೆ, ಭಾರತಿ ಯೋಗಧಾಮ, ಮೈಸೂರು.
- ಜ್ಞಾನವಾಹಿನಿ–ಯೂಟೂಬ್ ಚಾನೆಲ್ ಆರಂಭಿಸುವ ಮೂಲಕ ವೇದ–ಉಪನಿಷತ್ ಸನಾತನ ಧರ್ಮ ತತ್ವಗಳ ಕುರಿತು ನಿರಂತರ ಪ್ರವಚನ ಮಾಲಿಕೆಗೆ ಚಾಲನೆ.
- ಕಾರ್ಯಕಾರಿಣಿ ಹಾಗೂ ಪದಾಧಿಕಾರಿಗಳ ಸಭೆಯನ್ನು ಬೆಂಗಳೂರಿನ ಆಚೆ ಶಿರಸಿ, ಶಿವಮೊಗ್ಗ, ಬೇಲೂರುಗಳಲ್ಲಿ ನೆಡಸಿ ಆಡಳಿತ ವಿಕೇಂದ್ರಿಕರಣಕ್ಕೆ ಚಾಲನೆ
- ರಾಜ್ಯ ಮುಖ್ಯಮಂತ್ರಿಯಾದಿಯಾಗಿ ಹಲವು ರಾಜ್ಯ ಮಂತ್ರಿಗಳು ಹಾಗೂ ಕೇಂದ್ರದ ಮಂತ್ರಿಗಳನ್ನು ಭೇಟಿಮಾಡಿ ಸಮುದಾಯದ ಸಮಸ್ಯೆಗಳನ್ನು ಬಗೆಹರಿಸಲು ಹಕ್ಕೊತ್ತಾಯದ ಪ್ರತಿಪಾದನೆ
- ವೈದ್ಯಕೀಯ ನೆರವು : ನಾಡಿನ ಪ್ರಸಿದ್ಧ ವೈದ್ಯಕೀಯ ಸಂಸ್ಥೆಗಳನ್ನು ಸಂಪರ್ಕಿಸಿ ಬಡ ವಿಪ್ರರಿಗೆ ರಿಯಾತಿ ದರದಲ್ಲಿ ವೈದ್ಯಕೀಯ ನೆರವು ಹಾಗೂ ಆರೋಗ್ಯ ವಿಮೆ ಸೌಲಭ್ಯ ಕಲ್ಪಿಸಲು ವಿಪ್ರ ವೈದ್ಯ ವೇದಿಕೆಯ ಸಹಯೋಗದೊಂದಿಗೆ ವೈದ್ಯಕೀಯ ಸಹಾಯವಾಣಿ ಸ್ಥಾಪನೆಗೆ ಕ್ರಮ.
- ಸಂಕಷ್ಟದಲ್ಲಿರುವ ಬಡ ಅಂಗವಿಕಲ ಹಾಗೂ ವೃದ್ಧರಿಗೆ 500 ರೂ. ಮಾಸಾಶನ ನೀಡುವ ಯೋಜನೆ ಆರಂಭ.
- ಪ್ರತಿಭಾ ಪುರಸ್ಕಾರ ವಿದ್ಯಾರ್ಥಿ ವೇತನ : 98% ಶೇ, ಹೆಚ್ಚು ಅಂಕಪಡೆದ 500ಕ್ಕೂ ಹೆಚ್ಚು ವಿಪ್ರ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ಮತ್ತು ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವ ಯೋಜನೆಗೆ ಚಾಲನೆ.
- ಸಂಘಟನೆಯ ಬಲವರ್ಧನೆ :
- ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ವಿವಿಧ ವಿಪ್ರ ಪಂಗಡಗಳ ಹಾಗೂ ಸಂಘಗಳ ಪದಾಧಿಕಾರಿಗಳ ಸಮಾವೇಶ ಮತ್ತು ಆಡಳಿತ, ವ್ಯಾಪಾರ–ಉದ್ಯಮ, ಕೈಗಾರಿಕೆ ಮತ್ತು ಪರಿಣಿತ ವೃತ್ತಿ ಪರರ ಗಣ್ಯಾತಿಗಣ್ಯ ವಿಪ್ರ ಸಾಧಕರ ಸಭೆಯನ್ನು ಆಯೋಜಿಸಿ ಸಮಾಜದ ಬಲವರ್ಧನೆಗೆ ಹಾಗೂ ಸಮುದಾಯದ ಬಡವರಿಗೆ ಶಿಕ್ಷಣ, ಉದ್ಯೋಗ, ಆರೋಗ್ಯ ಮತ್ತು ಸನಾತನ ಧರ್ಮರಕ್ಷಣೆ ವಿಷಯಗಳ ಆದ್ಯತಾವಲಯಗಳಾಗಿ ಪರಿಗಣಿಸಿ ಕಾರ್ಯಯೋಜನೆಗಳ ಆರಂಭಿಸಲು ಸಮಾಲೋಚನಾ ಸಭೆ ಆಯೋಜನೆ ಹಾಗೂ ಕಾರ್ಯನಿರ್ವಹಣಾ ತಂಡ ರಚನೆಗೆ ಯೋಜನೆ.

ಶ್ರೀ ನಟರಾಜ ಭಾಗವತ್, ಶಿವಮೊಗ್ಗ, ಶ್ರೀ ರಂಗನಾಥ ದೇಸಾಯಿ, ಕಲ್ಬುರ್ಗಿ, ಶ್ರೀ ಸಿ.ಕೆ. ರಾಮಮೂರ್ತಿ, ಬೆಂಗಳೂರು, ಶ್ರೀ ಡಿ.ವಿ. ರಾಜೇಂದ್ರಪ್ರಸಾದ್, ಬೆಂಗಳೂರು

- ಡಾ॥ ಆನಂದತೀರ್ಥ ಫಡ್ನೀಸ್, ರಾಯಚೂರು, ಶ್ರೀ ರವೀಂದ್ರ ಶ್ರೀಪಾದ ಮುತಾಲಿಕ್, ಬೆಳಗಾವಿ,
- ಶ್ರೀಮತಿ ಪುಷ್ಪ ಅಯ್ಯಂಗಾರ್, ಮೈಸೂರು, ಶ್ರೀ ಪ್ರಮೋದ್ ಮನೋಳಿ, ಹುಬ್ಬಳ್ಳಿ, ಶ್ರೀ ಶಶಿಭೂಷಣ್ ಹೆಗಡೆ, ಸಿದ್ದಾಪುರ, ಡಾ॥ ಗಿರೀಶ್ ಆರ್. ಮಸೂರಕರ್, ಬಾಗಲಕೋಟೆ, ಶ್ರೀ ಮಹೇಶ್ ಕಜೆ, ಪುತ್ತೂರು
- ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಶ್ರೀಧರಮೂರ್ತಿ, ಬೆಂಗಳೂರು, ಖಜಾಂಚಿ: ಶ್ರೀ ವೆಂಕಟೇಶ ಎಸ್. ನಾಯಕ್, ಬೆಂಗಳೂರು
- ಸಹ ಖಜಾಂಚಿ: ಶ್ರೀ ಶ್ರೀನಿವಾಸಮೂರ್ತಿ, ಬೆಂಗಳೂರು, ಆಂತರಿಕ ಲೆಕ್ಕಪರಿಶೋಧಕರು: ಶ್ರೀ ಕೆ. ನಾರಾಯಣ್, ಬೆಂಗಳೂರು, ಅಖಿಲ ಭಾರತ ಬ್ರಾಹ್ಮಣ ಒಕ್ಕೂಟಕ್ಕೆ ರಾಜ್ಯದ ಪ್ರತಿನಿಧಿ: ಶ್ರೀ ಕೆ.ಎನ್. ಛಾಯಾಪತಿ, ಬೆಂಗಳೂರು ಸಂಘಟನಾ ಕಾರ್ಯದರ್ಶಿ: ಡಾ। ಬಿ.ಎಸ್. ರಾಘವೇಂದ್ರ ಭಟ್, ಬೆಂಗಳೂರು
- ಸಹ ಕಾರ್ಯದರ್ಶಿಗಳು: ಶ್ರೀ ಹೆಚ್.ಸಿ.ಪುರುಷೋತ್ತಮ, ಬೆಂಗಳೂರು, ಶ್ರೀ ಮುರಳೀಧರ, ಬೆಂಗಳೂರು
- ಶ್ರೀ ಟಿ.ಎಲ್.ಎಸ್. ಕುಮಾರ್, ಬೆಂಗಳೂರು, ಶ್ರೀ ಕಾರ್ತಿಕ್ ಎಸ್. ಬಾಪಟ್, ಬೆಂಗಳೂರು, ಶ್ರೀ ಮುರಳೀಧರ್ ಎಸ್ ಹೊಸಕೋಟೆ, ಶ್ರೀ ರಾಘವೇಂದ್ರ ಕುಲಕರ್ಣಿ, ಗುಲ್ಬರ್ಗಾ, ಶ್ರೀ ಆರ್. ರವಿಕುಮಾರ್, ಬೆಂಗಳೂರು
- ಹಿರಿಯರ ಪರಿಷತ್: ಡಾ॥ ಎಂ.ಆರ್.ವಿ. ಪ್ರಸಾದ್, ಬೆಂಗಳೂರು, ಶ್ರೀ ಡಿ.ಎಸ್. ಹೊನ್ನಪ್ಪ, ಬೆಂಗಳೂರು
- ಶ್ರೀ ಹೆಚ್.ಎನ್. ಹಿರಿಯಣ್ಣಸ್ವಾಮಿ, ಬೆಂಗಳೂರು, ಶ್ರೀಮತಿ ಸೀತಾಸುಬ್ರಹ್ಮಣ್ಯ, ಬೆಂಗಳೂರು
- ಶ್ರೀ ಹೆಚ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಬೆಂಗಳೂರು, ವೇ॥ಬ್ರ॥ ಡಾ। ವಿ. ಭಾನುಪ್ರಕಾಶ್ ಶರ್ಮ, ಶ್ರೀರಂಗಪಟ್ಟಣ, ಶ್ರೀ ಎಂ.ಬಿ. ಭಾನುಪ್ರಕಾಶ್, ಶಿವಮೊಗ್ಗ, ಶ್ರೀ ನರಸಿಂಗರಾವ್ ದೇಶಪಾಂಡೆ, ರಾಯಚೂರು
- ಸಪ್ತರ್ಷಿ ಫೌಂಡೇಷನ್‌ಗೆ ಟ್ರಸ್ಟಿಗಳಾಗಿ: ಹೆಚ್.ಆರ್. ಸುರೇಶ್, ಶ್ರೀ ಗಣೇಶ್ ಟಿ.ಎಸ್. ಕೆ. ದಿವಾಕರ, ಕಾರ್ತಿಕ್ ಎಸ್. ಬಾಪಟ್, ಡಾ। ಎಂ.ಆರ್.ವಿ. ಪ್ರಸಾದ್, ಗುರುರಾಜ್ ಬಿ.ಎಸ್. ಶ್ರೀಮತಿ ವೀಣಾ ಶ್ರೀನಿಧಿ, ಶ್ರೀಮತಿ ವೀಣಾ ರಾಜೇಶ್, ಶ್ರೀನಿವಾಸರಾವ್ ಎಸ್.ಎಸ್ ಶ್ರೀಮತಿ ಅಂಬಿಕಾ ರಾಮಚಂದ್ರ, ಶ್ರೀಪತಿರಾವ್ ಬಿ.ಎಸ್. ಕೆ.ಸಿ. ಪ್ರಕಾಶ್, ಪ್ರದೀಪ್ ಎಸ್. ಸಾವ್‌ಕಾರ್, ಅಬಸೆ ದಿನೇಶ್‌ಕುಮಾರ್ ಎನ್. ಜೋಶಿ, ಆರ್. ರವಿಕುಮಾರ್, ಎಂ.ಆರ್. ಶಿವಶಂಕರ್
- **ನೂತನ ಕಾರ್ಯಕಾರಿಣಿ ಸದಸ್ಯರು ಹಾಗೂ ಪದಾಧಿಕಾರಿಗಳಿಂದ ಮಹಾಸಭೆಯ ಆರ್ಥಿಕ ಸ್ಥಿತಿಯನ್ನು ಉನ್ನತಿಗೊಳಿಸಲು ದೊಡ್ಡ ಮೊತ್ತದ ದೇಣಿಗೆ ಘೋಷಣೆ. ಅಂದಾಜು ಮೊತ್ತ ರೂ.25 ಲಕ್ಷ.**

**ಅಧ್ಯಕ್ಷರಿಂದ ಪ್ರಸ್ತಾವನೆ:**

- ಹೆಚ್ಚು ಹೆಚ್ಚು ಯುವಕರಿಗೆ ಜವಾಬ್ದಾರಿ ನೀಡುವುದು, ರಾಜ್ಯವ್ಯಾಪ್ತಿ ಮಹಿಳಾ ಸಂಘಟನೆ, ಯುವ ಸಂಘಟನೆ, ತಾಲ್ಲೂಕು ಮಟ್ಟದಿಂದ ಮಹಿಳೆಯರನ್ನು ಗುರುತಿಸಿ ಸಂಘಟನೆಗೆ ಒತ್ತುಕೊಡುವುದು, ಆರ್ಥಿಕ ಸಂಪನ್ಮೂಲಗಳ ಸಂಗ್ರಹಣೆ, ಅದರ ವಿನಿಯೋಗ, ಸೇವಾದಳದ ರೀತಿಯಲ್ಲಿ ಯುವ ಸಂಘಟನೆ, ಯುವಕರಿಗೆ ಆದ್ಯತೆ ಇತ್ಯಾದಿ ವಿಷಯಗಳ ಬಗ್ಗೆ ಮಾತನಾಡಿ, ಆದ್ಯತೆಯ ಮೇರೆಗೆ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕೆಂದು ತಿಳಿಸಿದರು. ಮಹಾಸಭೆಯ ಕರೆಗೆ ಸ್ಪಂದಿಸಿ–ಕಾರ್ಯತತ್ಪರರಾಗಬೇಕೆಂದು ಕಾರ್ಯಸೂಚಿ, ಫಲಿತಾಂಶ ದೃಷ್ಟಿ ಇವರೆಡನ್ನು ಗಮನದಲ್ಲಿ ಕಾರ್ಯಪ್ರವೃತ ರಾಗಲು ಕರೆ ನೀಡಿದರು.
- ಪ್ರಾಚೀನ ಭಾಷೆ ಸಂಸ್ಕೃತವನ್ನು ಉತ್ತೇಜಿಸುತ್ತಿರುವುದು, ಸಂಸ್ಕೃತ ಭಾಷೆಯ ಅಧ್ಯಯನ ಮತ್ತು ಬೆಳವಣಿಗೆಗೆ ಸಂಸ್ಕೃತ ವಿಶ್ವ ವಿದ್ಯಾನಿಲಯವನ್ನು ಬಲಗೊಳಿಸಲು ರಾಜ್ಯ ಸರ್ಕಾರ ತೆಗೆದು ಕೊಂಡ ತೀರ್ಮಾನಕ್ಕಾಗಿ ಮಹಾಸಭೆಯಿಂದ ಸರ್ಕಾರಕ್ಕೆ ಅಭಿನಂದನೆ ಸಲ್ಲಿಕೆ.
- ರಾಯಚೂರು – ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉತ್ತರ ಕರ್ನಾಟಕ ಕಾರ್ಯಕಾರಿಣಿ ಸಭೆ – 09 /03 /2022
- ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉತ್ತರ ಕರ್ನಾಟಕ ಕಾರ್ಯಕಾರಿಣಿ ಸಭೆ ರಾಯಚೂರಿನಲ್ಲಿ ಯಶಸ್ವಿಯಾಗಿ ನಡೆಯಿತು.ಬ್ರಾಹ್ಮಣ ಸಮುದಾಯವನ್ನು ಸುಸ್ಥಿತಿಗೆ ತರುವ ನಿಟ್ಟಿನಲ್ಲಿ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದಾಗಿ ಎಕೆಬಿಎಂಎಸ್ ಅಧ್ಯಕ್ಷ ಅಶೋಕ ಹಾರನಹಳ್ಳಿ ಹೇಳಿದರು. ಬ್ರಾಹ್ಮಣ ಸಮಯದಾಯದಲ್ಲಿ ಆರ್ಥಿಕವಾಗಿ ಹಿಂದುಳಿದವರನ್ನು ಮೇಲಕ್ಕೆತ್ತುವುದು ಸೇರಿದಂತೆ ಮಕ್ಕಳ ವಿದ್ಯಾಭ್ಯಾಸಕ್ಕೆ ಯಾವ ರೀತಿ ನೆರವು ಒದಗಿಸಬಹುದು ಎನ್ನುವುದರ ಕುರಿತು ಅವರು ಪ್ರಸ್ತಾಪಿಸಿದರು. ಬ್ರಾಹ್ಮಣ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ವಿದ್ಯಾನಿಧಿ ಸ್ಥಾಪನೆ ಹಾಗೂ ಬರುವ ದಿನಗಳಲ್ಲಿ ಹಮ್ಮಿಕೊಳ್ಳಲಿರುವ ಪ್ರತಿಭಾ ಪುರಸ್ಕಾರದ ಬಗ್ಗೆ ವಿವರಿಸಿದರು.



**ನೂತನ ಜಾಲತಾಣ ಲೋಕಾರ್ಪಣೆ:**

## ಸದಸ್ಯತ್ವ ನೋಂದಣಿಗೆ ಡಿಜಿಟಲ್ ಕಾಯಕಲ್ಪ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.) ದ ನವೀಕೃತ ನೂತನ ವೆಬ್‌ಸೈಟನ್ನು ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರಿಂದ ಬುಧವಾರ ತಾರೀಖು 26.01.2022ರಂದು ಲೋಕಾರ್ಪಣೆ.

ಅತ್ಯಂತ ಕಡಿಮೆ ಸಮಯದಲ್ಲಿ ವೆಬ್‌ಸೈಟನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವರು ಮಾಹಿತಿ ತಂತ್ರಜ್ಞಾನ ತಂಡದ ಕಾರ್ತಿಕ್ ಬಾಪಟ್, ಕೃಷ್ಣಸ್ವಾಮಿ, ಅಮಿತ್, ಶ್ರೀಕಿರಣ್, ರಘು, ಗುರು, ನಿಖಿಲ ಪ್ರವೀಣ್, ವೆಂಕಟೇಶ್, ಸಮುದ್ಯತಾ, ವೇಣು, ಪ್ರಸನ್ನ, ಕಿರಣ್ ನಾಡಿಗ್, ಹಿರಿಯಣ್ಣ ಹಾಗೂ ಉಮೇಶ್ ಮೊದಲಾದವರು. ಮಹಾಸಭೆಯ ಕೇಂದ್ರ ಕಛೇರಿ ಗಾಯತ್ರೀ ಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ಶ್ರೀ ಅಶೋಕ ಹಾರನಹಳ್ಳಿ ಅವರು ಮಾತನಾಡಿ ನೂತನ ಜಾಲತಾಣದಿಂದ ಮಹಾಸಭಾದ ಸಮಸ್ತ ಚಟುವಟಿಕೆಗಳ ವಿವರಗಳು ಲಭ್ಯ ಎಂದರು.

**ನೂತನ ವೆಬ್‌ಸೈಟ್ ವೈಶಿಷ್ಟ್ಯಗಳು:**

1. **ಮಹಾಸಭೆಯ ಸಮಸ್ತ ಚಟುವಟಿಕೆಗಳ ವಿವರಗಳ ತತ್‌ಕಾಲದಲ್ಲೇ ಲಭ್ಯ.**
2. **ಆನ್‌ಲೈನ್ ಮೂಲಕ ಸದಸ್ಯತ್ವ ನೋಂದಾವಣೆಗೆ ಅವಕಾಶ**
3. **ಮಹಾಸಭೆಯ ಮುಖ್ಯ ಚಟುವಟಿಕೆಗಳ ಕಾರ್ಯಕ್ರಮಗಳಾದ ವಿದ್ಯಾನಿಧಿ ಯೋಜನೆ, ವೈದ್ಯಕೀಯ ಸೌಲಭ್ಯ, ಅಸಹಾಯಕ ವೃದ್ಧರಿಗೆ ಮಾಸಾಶನ ಸೌಲಭ್ಯ ಮೊದಲಾದವುಗಳ ಬಗ್ಗೆ ಸಮಗ್ರ ಮಾಹಿತಿ.**

---

## ಮಹಾಸಭಾದಿಂದ ಶೃಂಗೇರಿ ಜಗದ್ಗುರುಗಳಿಗೆ ಅಭೂತಪೂರ್ವ ಗುರುವಂದನಾ ಕಾರ್ಯಕ್ರಮ



**ಜಗದ್ಗುರುಗಳಿಗೆ ಅಧ್ಯಕ್ಷರಿಂದ ಫಲ ಸಮರ್ಪಣೆ**

ದಿನಾಂಕ 29.05.2022ರಂದು ಮಹಾಸಭೆಯ ವತಿಯಿಂದ ಶ್ರೀ ಶೃಂಗೇರಿ ಶಾರದಾ ಪೀಠದ ಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀ ಸ್ವಾಮಿಗಳಿಗೆ ಗುರುವಂದನಾ ಕಾರ್ಯಕ್ರಮವು ರಾಜ್ಯದ ನಾನಾ ಭಾಗಗಳಿಂದ ಆಗಮಿಸಿದ ಸಹಸ್ರಾರು ವಿಪ್ರರಿಂದ ಶ್ರದ್ಧಾಭಕ್ತಿ ಸಹಿತ ವಿಜೃಂಭಣೆಯಿಂದ ನಡೆಯಿತು.

ಇದೇ ಸಂದರ್ಭದಲ್ಲಿ ಶ್ರೀಗಳು ವಿಪ್ರನುಡಿಯ ಇಂಗ್ಲಿಷ್ ಆವೃತ್ತಿಯನ್ನು ಬಿಡುಗಡೆಗೊಳಿಸಿದರು. ಸಮಾರಂಭದಲ್ಲಿ ನಿವೃತ್ತ ನ್ಯಾಯಮೂರ್ತಿ ಚಂದ್ರಶೇಖರ್, ಶಾಸಕ ರವಿಸುಬ್ರಹ್ಮಣ್ಯ, ಯು.ಬಿ. ವೆಂಕಟೇಶ್ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮಹೇಶ್ ಜೋಶಿ ಇವರುಗಳು ಜಗದ್ಗುರುಗಳಿಗೆ ತಮ್ಮ ನುಡಿನಮನಗಳನ್ನು ಅರ್ಪಿಸಿದರು. ಮಠದ ಆಡಳಿತಾಧಿಕಾರಿ ಡಾ॥ ವಿ.ಆರ್. ಗೌರೀಶಂಕರ್ ಮಹಾಸಭೆಯ ಪದಾಧಿಕಾರಿಗಳು, ಸದಸ್ಯರು ಹಾಗೂ ಅಪಾರ ಸಂಖ್ಯೆಯ ವಿಪ್ರಬಂಧುಗಳು ಭಾಗವಹಿಸಿದ್ದರು. ಮಹಾಸಭಾ ಸದಸ್ಯರು ನೀಡಿದ ಆರು ಲಕ್ಷ ಎಪ್ಪತ್ತು ಸಾವಿರ ರೂ.ಗಳ ಗುರುಕಾಣಿಕೆಯನ್ನು ಜಗದ್ಗುರುಗಳಿಗೆ ಮಹಾಸಭೆಯ ವತಿಯಿಂದ ಅರ್ಪಿಸಲಾಯಿತು.





## ಸಿರಸಿಯಲ್ಲಿ ವಿಪ್ರ ಸಮಾವೇಶ

ಅಶೋಕ ಹಾರನಹಳ್ಳಿಯವರ ಅಧ್ಯಕ್ಷತೆಯಲ್ಲಿ ನಗರದ ಟಿ.ಆರ್.ಸಿ. ಸಭಾ ಭವನದಲ್ಲಿ ತ್ರಿಮತಸ್ಥ ಬ್ರಾಹ್ಮಣರ "ವಿಪ್ರ ಸಮಾವೇಶ" ಯಶಸ್ವಿಯಾಗಿ ಜರುಗಿತು. ಈ ಸಂದರ್ಭದಲ್ಲಿ ಮಾಜಿ ಸಚಿವರಾದ ಶ್ರೀ ಆರ್.ವಿ. ದೇಶಪಾಂಡೆ, ವಿಧಾನಸಭಾ ಅಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಕಾರ್ಮಿಕ ಸಚಿವರಾದ ಶ್ರೀ ಶಿವರಾಮ ಹೆಬ್ಬಾರ್, ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ ಉಪಾಧ್ಯಕ್ಷರಾದ ಶ್ರೀ ಪ್ರಮೋದ್ ಹೆಗಡೆ, ಸ್ವರ್ಣವಲ್ಲಿ ಮಹಾಸಂಸ್ಥಾನದ ಅಧ್ಯಕ್ಷರಾದ ಶ್ರೀ ವಿ.ಎನ್. ಹೆಗಡೆ, ಟಿ.ಆರ್.ಸಿ. ಬ್ಯಾಂಕ್ ಅಧ್ಯಕ್ಷರಾದ ಶ್ರೀ ರಾಮಕೃಷ್ಣ ಹೆಗಡೆ, ಹವ್ಯಕ ಮಹಾಮಂಡಲದ ಅಧ್ಯಕ್ಷರಾದ ಶ್ರೀ ರಾಮಕೃಷ್ಣ ಹೆಗಡೆ, ಹವ್ಯಕ ಮಹಾಮಂ<ಡಲದ ಅಧ್ಯಕ್ಷರಾದ ಶ್ರೀ ಆರ್.ಎಸ್. ಹೆಗಡೆ ಹರಗಿ, ರಾಜ್ಯ ಉಪಾಧ್ಯಕ್ಷರಾದ ಶ್ರೀ ಶಶಿಭೂಷಣ ಹೆಗಡೆ ಹಾಗೂ ಮಹಾಸಭಾ ಪದಾಧಿಕಾರಿಗಳು ಭಾಗಿಯಾಗಿದ್ದರು.

## ಶಿರಸಿಯಲ್ಲಿ ಮಹಾಸಭೆಯ ಕೇಂದ್ರ ಕಾರ್ಯಕಾರಿಣಿಯ ಎರಡನೆ ಸಭೆ



ದಿನಾಂಕ 21.05.2022ರಂದು ಶಿರಸಿಯಲ್ಲಿ ರಾಜ್ಯ ಕಾರ್ಯಕಾರಿಣಿಯ ಎರಡನೇ ಸಭೆಯು ಮಹಾಸಭಾದ ಅಧ್ಯಕ್ಷರ ನೇತೃತ್ವದಲ್ಲಿ ಯಶಸ್ವಿಯಾಗಿ ನಡೆಯಿತು. 100ಕ್ಕೂ ಹೆಚ್ಚು ಸದಸ್ಯರು ಹಾಗೂ ಪದಾಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡು ಮಹಾಸಭೆಯ ನೂತನ ಅಧ್ಯಕ್ಷರು ಅಧಿಕಾರ ಸ್ವೀಕರಿಸಿದ ನಂತರದ ಸಮಗ್ರ ಕಾ ಂ ು ರ್ ಚ ಟ ು ವ ಟಿ ಕೆ ಗ ಳ ಸಿಂಹಾವಲೋಕನ ಹಾಗೂ ಪರಾಮರ್ಶೆಗಳಲ್ಲಿ ಎಲ್ಲ ಉಪಾಧ್ಯಕ್ಷರು ಹಾಗೂ ಸದಸ್ಯರುಗಳು ಸಕ್ರಿಯವಾಗಿ ಪಾಲ್ಗೊಂಡರು. ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಸ್.ಶ್ರೀಧರಮೂರ್ತಿಗಳು ಹಿಂದಿನ ಕಾರ್ಯಕಾರಿಣಿ ಸಭೆಯ ನಡಾವಳಿಗಳನ್ನು ಮಂಡಿಸಿ ಸಭೆಯ ಅನುಮೋದನೆ ಪಡೆದರು. ಸಂಘಟನಾ ಕಾರ್ಯದರ್ಶಿಗಳಾದ ಡಾ॥ ಬಿ.ಎಸ್. ರಾಘವೇಂದ್ರ ಭಟ್‌ರವರು, ಅಧ್ಯಕ್ಷರು ಇದುವರೆಗೆ ಮಹಾಸಭೆಯ ಸರ್ವತೋಮುಖ ಬೆಳವಣಿಗೆಗೆ ಕೈಗೊಂಡ ಕಾರ್ಯಕ್ರಮಗಳು, ಯೋಜನೆಗಳು ಹಾಗೂ ಅವರು ರಾಜ್ಯಾದಂತ ನಡೆಸಿದ ಸಂಘಟನಾ ಪ್ರವಾಸದ ಯಶಸ್ವಿ ಕುರಿತು ಸಭೆಗೆ ಮಾಹಿತಿ ನೀಡಿದರು. ಸಭೆಯಲ್ಲಿ ಪಾಲ್ಗೊಂಡ ಉಪಾಧ್ಯಕ್ಷರು, ಸಂಘಟನಾ ಕಾರ್ಯದರ್ಶಿಗಳು ಹಾಗೂ ವಿವಿಧ ಸಮಿತಿಗಳ ಸಂಚಾಲಕರು ಆಯಾ ವಿಭಾಗಗಳ ಇದುವರೆಗಿನ ಕಾರ್ಯಚಟುವಟಿಕೆಗಳ ಬಗ್ಗೆ ಸಲ್ಲಿಸಿದ ವರದಿಗಳನ್ನು ಪರಾಮರ್ಶಿಸಲಾಯಿತು. ಸಭೆಯ ಕೊನೆಯಲ್ಲಿ ಮಾತನಾಡಿದ ಅಧ್ಯಕ್ಷರು, 4–5 ತಿಂಗಳ ಅವಧಿಯಲ್ಲಿ ನಡೆದಿರುವ ಅಭಿವೃದ್ಧಿ ಕಾರ್ಯವು ಮೇಲುನೋಟಕ್ಕೆ ದೊಡ್ಡದಾಗಿ ತೋರಿದರೂ ವಾಸ್ತವವಾಗಿ ಸಮುದಾಯದ ಪ್ರತಿಯೊಬ್ಬರಿಗೂ ತಲುಪುವಂತಹ ಕಾರ್ಯಕ್ರಮಗಳು ಹೆಚ್ಚು ಪರಿಣಾಮಕಾರಿ ಹಾಗೂ ಇನ್ನೂ ಹೆಚ್ಚಿನ ವೇಗದೊಂದಿಗೆ ನಡೆಯಬೇಕಾದ ಅಗತ್ಯವನ್ನು ಸದಸ್ಯರಿಗೆ ಮನವರಿಕೆ ಮಾಡಿದರು. ಸಿದ್ಧವಾದ ವೇದಿಕೆಯನ್ನು ಸಮರ್ಪಕವಾಗಿ ಬಳಸಿ, ಕಾರ್ಯಯೋಜನೆಗಳು ರಾಜ್ಯಾದಂತ ವಿಸ್ತಾರಗೊಳಿಸಲು ಎಲ್ಲಾ ಸದಸ್ಯರು, ಪದಾಧಿಕಾರಿಗಳಿಗೆ ಕರೆ ನೀಡಿದರು.

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಪದಾಧಿಕಾರಿಗಳ ಸಭೆ



ಮಹಾಸಭೆಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವ ಅಧ್ಯಕ್ಷತೆಯಲ್ಲಿ ದಿನಾಂಕ 02.07.2022ರಂದು ಹಾಸನ ಜಿಲ್ಲೆ, ಬೇಲೂರಿನ ದ್ವಾರ ಸಮುದ್ರ ರೆಸಾರ್ಟ್‌ನಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಪದಾಧಿಕಾರಿಗಳ ಸಭೆ ನಡೆಯಿತು. ಪ್ರಧಾನ ಕಾರ್ಯದರ್ಶಿ, ಖಜಾಂಚಿಯವರು ಹಲವಾರು ಉಪಾಧ್ಯಕ್ಷರುಗಳು, ರಾಜ್ಯ ಸಂಘಟನಾ ಕಾರ್ಯದರ್ಶಿ, ಸಹಕಾರ್ಯದರ್ಶಿಗಳು, ಹಿರಿಯ ಪರಿಷತ್ತಿನ ಸದಸ್ಯರೂ ಹಾಗೂ ಇತರೆ ಪದಾಧಿಕಾರಿಗಳು ಭಾಗವಹಿಸಿದ ಈ ಸಭೆಯಲ್ಲಿ ಮಹಾಸಭೆಯು ಮುಖ್ಯವಾಗಿ ಬೈಲಾ ತಿದ್ದುಪಡಿ, ಇದುವರೆಗಿನ ಕಾರ್ಯಕ್ರಮಗಳ ಪರಾಮರ್ಶೆ ಮತ್ತು ಮುಂಬರುವ ದಿನಗಳಲ್ಲಿ ಬರುವ ಕಾರ್ಯಯೋಜನೆಗಳ ಸಮಾಲೋಚನೆ ನಡೆಯಿತು.

## ಬೆಂಗಳೂರಿನಲ್ಲಿ ಭವ್ಯ ವಾಣಿಜ್ಯ ಸಂಕೀರ್ಣ ಮತ್ತು ಸಾಂಸ್ಕೃತಿಕ ಭವನಕ್ಕೆ ಸಂಕಲ್ಪ ಫಲಪ್ರದ ಶಿವಮೊಗ್ಗ ಕಾರ್ಯಕಾರಿಣಿ ಸಭೆ

ದಿನಾಂಕ 19.08.22ರಂದು ಶಿವಮೊಗ್ಗ ಜಿಲ್ಲಾ ಬ್ರಾಹ್ಮಣ ಸಂಘದ ಆತಿಥ್ಯದಲ್ಲಿ ನಡೆದ ಮಹಾಸಭೆಯ 3ನೇ ರಾಜ್ಯ ಕಾರ್ಯಕಾರಿಣಿ ಸಭೆ ಅತ್ಯಂತ ಯಶಸ್ವಿಯಾಗಿ ನಡೆಯಿತು. 101 ಸದಸ್ಯರು ಹಾಗೂ ಪದಾಧಿಕಾರಿಗಳು ಭಾಗವಹಿಸಿದ ಈ ಸಭೆಯಲ್ಲಿ ಮುಂದಿನ ಕಾರ್ಯಯೋಜನೆಗಳ ಕುರಿತು ಚರ್ಚಿಸಲಾಯಿತು.




ಮಹಾಸಭೆಯ ಉಪಾಧ್ಯಕ್ಷರು ಹಾಗೂ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಶ್ರೀ ನಟರಾಜ್ ಭಾಗವತ್ ಅವರು ಸ್ವಾಗತ ಮತ್ತು ಪ್ರಾಸ್ತಾವಿಕ ಭಾಷಣ ಮಾಡಿದರು. ಸಭೆಯ ಆರಂಭದಲ್ಲಿ ಇತ್ತೀಚೆಗೆ ನಮ್ಮನ್ನಗಲಿದ ಪ್ರಸಿದ್ಧ ಸುಗಮ ಸಂಗೀತಗಾರರಾದ ಶ್ರೀ ಶಿವಮೊಗ್ಗ ಸುಬ್ಬಣ್ಣವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ಮಹಾಸಭೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಸ್. ಶ್ರೀಧರಮೂರ್ತಿಯುವರು ಶಿರಸಿಯಲ್ಲಿ ನಡೆದ ಕಾರ್ಯಕಾರಿಣಿ ಸಭೆಯ ನಡಾವಳಿಗಳನ್ನು ಓದಿ ಆಗುಮೋದನೆ ಪಡೆದರು.

ನಂತರ ಸಭೆಯಲ್ಲಿ ಸಂಘಟನಾ ಕಾರ್ಯದರ್ಶಿಗಳು ಪದಾಧಿಕಾರಿಗಳು ವಿವಿಧ ಸಮಿತಿಗಳ ಸಂಚಾಲಕರು ಆಯಾ ಸಮಿತಿಗಳ ಕಾರ್ಯಚಟುವಟಿಕೆಗಳನ್ನು ವರದಿ ಮಂಡಿಸಿದರು.

✦ ಜನವರಿಯಿಂದ ಇಲ್ಲಿಯವರೆಗೆ ನೂತನವಾಗಿ 12,000 ಸದಸ್ಯರ ನೊಂದಾವಣೆ.

✦ ನಾಲ್ಕನೆ ಮಹಡಿಯಲ್ಲಿ ಸುಂದರವಾದ ಮಿನಿ ಸಭಾಂಗಣ

ಅಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿಯವರು ಮಹಾಸಭೆಗೆ ನಿಯಮಿತ ಆದಾಯಕ್ಕಾಗಿ ಸಪ್ತರ್ಷಿ ಟ್ರಸ್ಟ್‌ಗೆ ಸೇರಿದ ಜಾಗದಲ್ಲಿ ಭವ್ಯವಾದ ವಾಣಿಜ್ಯ ಸಂಕೀರ್ಣ, ಸಾಂಸ್ಕೃತಿಕ ಭವನ ನಿರ್ಮಾಣದ ಯೋಜನೆಯನ್ನು ಪ್ರಕಟಿಸಿದರು. ಮುಂದಿನ ಜನವರಿಯಲ್ಲಿ ಸಂಕ್ರಾಂತಿಯು ನಂತರ 25 ಕೋಟಿಗಳ ಬೃಹತ್ ಯೋಜನೆಗೆ ಅಡಿಗಲ್ಲು ಸಮಾರಂಭ ನಡೆಸುವುದು ಖಂಡಿತವೆಂದು ಘೋಷಿಸಿದರು.

# ಚಾತುರ್ಮಾಸ್ಯ ವ್ರತನಿರತ ಗುರವರ್ಯರುಗಳಿಗೆ ಭಿಕ್ಷಾ ಸಮರ್ಪಣೆ





ಶ್ರೀ ಯತಿರಾಜ ಮಠ



ಮಹಾಸಭೆಯ ಅಧ್ಯಕ್ಷರಾದ ನೂತನ ಯೋಜನೆಯಾದ ಚಾತುರ್ಮಾಸ್ಯ ಮಹಾಸಭೆ ವತಿಯಿಂದ ಸಮಸ್ತ ವಿಪ್ರ ಫಲ–ಪುಷ್ಪ, ಕಾಣಿಕೆ ಹಾಗೂ ಭಿಕ್ಷಾ ಸಮರ್ಪಣೆಯ ಕಾರ್ಯಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ಈ ನವ ಸಂಪ್ರದಾಯಕ್ಕೆ ಪೂರ್ಣಾಶೀರ್ವಾದೊಂದಿಗೆ ಹರಸಿರುತ್ತಾರೆ. ಸಂಘಟನೆಯ ಕಾರ್ಯದರ್ಶಿ ರಾಘವೇಂದ್ರ ಪದಾಧಿಕಾರಿಗಳು ಸ್ಥಳೀಯ ವಿಪ್ರ ಸಹಕಾರದಿಂದ ವ್ರತನಿರತ ಗುರುವರ್ಯರಿಗೆ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ

ಶ್ರೀ ಅಶೋಕ ಹಾರನಹಳ್ಳಿಯವರ ವ್ರತನಿರತ ಗುರವರ್ಯರುಗಳಿಗೆ ಸಮುದಾಯದ ಪರವಾಗಿ ದವಸ–ಧಾನ್ಯ, ಗೌರವಫಲಕದೊಂದಿಗೆ ಮಾಡಿದ ನಾಡಿನಾದ್ಯಂತ ಯತಿಗಳು ಸ್ವಾಗತಿಸಿ, ಮನ್ನಣೆ ನೀಡಿ, ವಿಪ್ರ ಸಮುದಾಯವನ್ನು ಅಧ್ಯಕ್ಷರ ಮಾರ್ಗದರ್ಶನ ಹಾಗೂ ಭಟ್ ಅವರ ನೇತೃತ್ವದಲ್ಲಿ ಮಹಾಸಭೆಯ ಸಂಘಟನೆಗಳು ಹಾಗೂ ಮುಖಂಡರುಗಳ ಭಕ್ತಿಯಿಂದ ಸಲ್ಲಿಸಿದ ಭಿಕ್ಷಾ ಸಮರ್ಪಣೆಯ ಸಂಪನ್ನವಾಯಿತು. ಈ ಸಂದರ್ಭದಲ್ಲಿ ಪೀಠಾಧೀಶರುಗಳು ಸಂತುಷ್ಟರಾಗಿ ಮಹಾಸಭೆಯು ಆರಂಭಿಸಿದ ಈ ನೂತನ ಸಂಪ್ರದಾಯವನು ಸ್ವಾಗತಿಸಿ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಹಾಗೂ ಮಹಾಸಭೆಯ ಸಮಸ್ತ ವಿಪ್ರರಿಗೆ ಪೂರ್ಣಾಶೀರ್ವಾದವನ್ನು ನೀಡಿ ಸಂದೇಶಗಳನ್ನು ನೀಡಿರುತ್ತಾರೆ.

## ನೂತನ ವಿನ್ಯಾಸದೊಂದಿಗೆ ವಿಪ್ರನುಡಿಗೆ ಮರುಚಾಲನೆ



ದಿನಾಂಕ 11 /02/2022 ಮಹಾಸಭಾದ ಕೇಂದ್ರ ಕಛೇರಿ ಗಾಯತ್ರಿ ಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ಬಸವನಗುಡಿಯ ಶಾಸಕರಾದ ಶ್ರೀ ರವಿಸುಬ್ರಮಣ್ಯ ಅವರು ವಿಪ್ರನುಡಿ ಪತ್ರಿಕೆಗೆ ಮರುಚಾಲನೆ. ಕರ್ನಾಟಕದ ಉದ್ದಗಲಕ್ಕೂ ವಾಸವಾಗಿರುವ ವಿಪ್ರರ ಸಂಸ್ಕತಿ ಮತ್ತು ವಿಪ್ರ ಸಂಸ್ಕೃತಿ ಪೂರಕ ಲೇಖನವನ್ನು ಮನೆಮನೆಗಳಿಗೆ ಪರಿಚಯಿಸುವ ಮುಖವಾಣಿಯಾಗಿ ವಿಪ್ರನುಡಿ ಹೊರಹೊಮ್ಮಲಿದೆ.. ಅಷ್ಟೇ ಅಲ್ಲ ಇದರ "ಇ – ಪತ್ರಿಕೆ" ಯಲ್ಲಿ ಇದೇ ಬರುವ 16 ಫೆಬ್ರವರಿಯಂದು ಎಲ್ಲರಿಗೂ ಲಭ್ಯ.

## ವಿಪ್ರನುಡಿ ಆಂಗ್ಲ ಆವೃತ್ತಿ ಲೋಕಾರ್ಪಣೆ



ಮಹಾಸಭಾ ಹೊರದೇಶದಲ್ಲೂ ತನ್ನ ಕಾರ್ಯಬಾಹುಳ್ಯವನ್ನು ವಿಸ್ತರಿಸ ಬೇಕೆಂದು ಮನಗೊಂಡು, ಸತೀಶ್ ಬೆಳ್ಳೂರು ಅವರ ನೇತೃತ್ವದಲ್ಲಿ "ವಿಪ್ರನುಡಿ" ಇಂಗ್ಲಿಷ್ ಜರ್ನಲ್‌ಗೂ ಚಾಲನೆ ನೀಡಲಾಯಿತು. ಶ್ರೀ ಶೃಗೇರಿ ಶಾರದ ಪೀಠದ ಜಗದ್ಗುರು **ಶ್ರೀ ಶ್ರೀ ವಿಧುಶೇಖರ ಭಾರತಿ ಮಹಾಸ್ವಾಮಿಗಳು** ಪತ್ರಿಕೆಯನ್ನು ಲೋಕಾರ್ಪಣೆಗೊಳಿಸಿದರು.

# ಸದ್ಭಾವನಾ ಯಾತ್ರೆ



ಅಕ್ಟೋಬರ್ 2ರಂದು ಗಾಂಧಿ ಜಯಂತಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿಗಳ ಜನ್ಮ ದಿನದಂದು ಮಹಾಸಭೆಯ ನೇತೃತ್ವದಲ್ಲಿ ನಡೆದ ಪಕ್ಷಾತೀತ ಹಾಗೂ ಜಾತ್ಯತೀತ ಸದ್ಭಾವನಾ ಯಾತ್ರೆಯು ಅತ್ಯಂತ ಯಶಸ್ವಿಯಾಗಿ, ಪರಿಣಾಮಕಾರಿಯಾಗಿ ಜರುಗಿರುವುದು ಮಹಾಸಭೆಯ ಇತಿಹಾಸದಲ್ಲಿ ಅತ್ಯಂತ ವೈಶಿಷ್ಟ್ಯ ಪೂರ್ಣ ಕಾರ್ಯಕ್ರಮ. ಸಮುದಾಯದ ಒಳಗಿನ ಭಿನ್ನಾಭಿಪ್ರಾಯಗಳು ಸಾಮಾಜಿಕ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಮೀರಿ ದೇಶ ಮೊದಲು ಎಂದು ಸಂದೇಶ ಸಾರುವ ಕಾರ್ಯಕ್ರಮವಾಗಿ ಹೊರಹೊಮ್ಮಿದ್ದು ಗಮನಾರ್ಹ ವಿಷಯ. ಇಂತಹ ವಿಶಿಷ್ಟ ಕಾರ್ಯಕ್ರಮದ ನೇತೃತ್ವವನ್ನು ಬ್ರಾಹ್ಮಣ ಮಹಾಸಭೆಯು ವಹಿಸಿಕೊಂಡಿರುವುದೂ ಕೂಡ ಮಹತ್ವದ ಸಂಗತಿ.

ಸದ್ಭಾವನಾ ಪಾದಯಾತ್ರೆಯಲ್ಲಿ ಜಗದ್ಗುರು ಸಿರಿಗೆರೆ ತರಳಬಾಳು ಜಗದ್ಗುರುಗಳಾದ ಶ್ರೀ ಶ್ರೀ ಡಾ॥ ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು, ಕಣ್ವ ಮಠದ ಶ್ರೀ ಶ್ರೀ 1008 ಶ್ರೀ ವಿದ್ಯಾಕಣ್ವವಿರಾಜತೀರ್ಥ ಶ್ರೀಪಾದಂಗಳವರು, ಶ್ರೀ ಶ್ರೀ ತಂಬಿಹಳ್ಳಿ ಮಾಧವತೀರ್ಥ ತೀರ್ಥ ಮಹಾಸ್ವಾಮಿಗಳು ನೇತೃತ್ವ ವಹಿಸಿದ್ದರು.

ಮಹಾಸಭೆಯ ಮಹತ್ವಾಕಾಂಕ್ಷೆಯ ಈ ಬೃಹತ್ ಪಾದಯಾತ್ರೆಗೆ ರಾಜಕೀಯ ನಾಯಕರು, ಮಂತ್ರಿಗಳು, ಶಾಸಕರು, ಸ್ಥಳೀಯ ಜನಪ್ರತಿನಿಧಿಗಳು, ಸಾಮಾಜಿಕ ಕಾರ್ಯಕರ್ತರು, ಸಾಹಿತಿಗಳು, ವಿದ್ಯಾರ್ಥಿಗಳು, ಸಮಾಜದ ಎಲ್ಲಾ ವರ್ಗಗಳ ಜನರು, ಮಹಾಸಭೆಯ ಎಲ್ಲ ಪದಾಧಿಕಾರಿಗಳು, ಸದಸ್ಯರು ಸೇರಿದಂತೆ ಸಹಸ್ರಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು.

'ಸರ್ವೇಜನಾಃ ಸುಖಿನೋ ಭವಂತುಃ' ಎಂಬುದು ಮಹಾಸಭೆಯ ಧ್ಯೇಯವಾಕ್ಯ. ಈ ಬೃಹತ್ ಸದ್ಭಾವನಾ ಯಾತ್ರೆಯು ಮಹಾಸಭೆಯ ಕಾರ್ಯಕ್ಷೇತ್ರವು ಸಮುದಾಯದ ಸಂಘಟನೆ ಹಿತಾಸಕ್ತಿಗೆ ಮಾತ್ರ ಸೀಮಿತವಾಗಿರದೆ ಸಮಾಜದ ಹಿತ ಒಟ್ಟಾರೆ ರಾಷ್ಟ್ರ ಹಿತವೂ ಸೇರಿದೆ ಎಂಬ ಸಂದೇಶವನ್ನು ಬಿಂಬಿಸುವಲ್ಲಿ ಯಶಸ್ವಿಯಾಯಿತು.





# ವಿಜೃಂಭಣೆಯ ಪ್ರತಿಭಾ ಪುರಸ್ಕಾರ–2022



ಬೆಂಗಳೂರಿನಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮತ್ತು ಸಪ್ತರ್ಷಿ ಪ್ರತಿಷ್ಠಾನದ ಸಹಯೋಗದಲ್ಲಿ ನಡೆದ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ ಅತಿಹೆಚ್ಚು ಅಂಕ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳ ಪುರಸ್ಕಾರ ಸಮಾರಂಭವು ಮಹಾಸಭಾಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿಯವರು ಅಧ್ಯಕ್ಷರು ಹಾಗೂ ಮುಖ್ಯ ಅತಿಥಿಗಳಾಗಿ ತುಮಕೂರಿನ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಶ್ರೀ ವೀರೇಶಾನಂದ ಸ್ವಾಮೀಜಿ ಹಾಗೂ ಶಿಕ್ಷಣ ತಜ್ಞ ಡಾ। ಗುರುರಾಜ ಕರ್ಜಗಿ, ಕರ್ನಾಟಕ ಬ್ಯಾಂಕಿನ ಶ್ರೀ ಪ್ರದೀಪ್ ಕುಮಾರ್‌ರವರು ಭಾಗವಹಿಸಿದ್ದರು. ಸಮಾರಂಭದಲ್ಲಿ ವಿದ್ಯಾರ್ಥಿಗಳು, ಪೋಷಕರು ಮತ್ತು ಮಹಾಸಭೆಯ ಪದಾಧಿಕಾರಿಗಳು ಸೇರಿದಂತೆ ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿ, ಕಾರ್ಯಕ್ರಮ ಅತ್ಯಂತ ಯಶಸ್ವಿಗೊಳಿಸಿದರು.



ಸಮಾರಂಭದಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿಯಲ್ಲಿ ಗರಿಷ್ಠ ಅಂಕ ಪಡೆದ 500ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಈ ಪೈಕಿ 200 ಮಂದಿ ಶೇಕಡ ನೂರರಷ್ಟು ಪ್ರತಿಭಾನ್ವಿತರಿದ್ದಿದ್ದು ವಿಶೇಷ.

# ಸಮಾಜದ ಗಣ್ಯಾತಿಗಣ್ಯರ ಸಭೆ



ದಿನಾಂಕ 31.10.22ರಂದು ತಮ್ಮ ತಮ್ಮ ಕ್ಷೇತ್ರದಲ್ಲಿ ಅಪಾರವಾದ ಸಾಧನೆಯನ್ನು ಮಾಡಿ ಮಾದರಿ ಸಂಘ ಸಂಸ್ಥೆಗಳನ್ನು ಕಟ್ಟಿದ ವಿಪ್ರ ಪ್ರಮುಖರ ಸಮಾಲೋಚನ ಸಭೆಯನ್ನು ಸೆಂಚುರಿ ಕ್ಲಬ್‌ನಲ್ಲಿ ಏರ್ಪಡಿಸಲಾಗಿತ್ತು. ಈ ಸಭೆಯಲ್ಲಿ ವಿಪ್ರ ಸಮುದಾಯ ಎದುರಿಸುತ್ತಿರುವ ಸವಾಲುಗಳು ಮತ್ತು ಸಮಸ್ಯೆಗಳ ಬಗ್ಗೆ ಹಾಗೂ ಈ ಬ್ರಾಹ್ಮಣ ಸಂಘಟನೆಯನ್ನು ಬಲಪಡಿಸುವ ಬಗ್ಗೆ ಕೂಲಂಕಷವಾಗಿ ಚರ್ಚಿಸಲಾಯಿತು. ಈ ಸಭೆಯಲ್ಲಿ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ಶ್ರೀ ಹೆಚ್.ವಿ. ಚಂದ್ರಶೇಖರ, ಇನ್ಫೋಸಿಸ್ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಮೋಹನ್ ದಾಸ್ ಪೈ, ಶ್ರೀ ಗುರುರಾಜ್ ದೇಶಪಾಂಡೆ, ರಾಜ್ಯ ಸರ್ಕಾರದ ನಿವೃತ್ತ ಉಪ ಕಾರ್ಯದರ್ಶಿ ಶ್ರೀ ಜೈರಾಜ್, ಶ್ರೀ ಮದನ್‌ಗೋಪಾಲ್, ಶ್ರೀ ಪಿ.ಬಿ. ರಾಮಮೂರ್ತಿ, ಕ.ಸಾ.ಪ. ಅಧ್ಯಕ್ಷರಾದ ನಾಡೋಜ ಮಹೇಶ್ ಜೋಶಿ, ಹಿರಿಯ ಐಪಿಎಸ್ ಅಧಿಕಾರಿಗಳಾದ ಶ್ರೀ ಗೋಪಾಲ್ ಹೊಸೂರ್, ಶ್ರೀ ಗುರುಪ್ರಸಾದ್, ಪಬ್ಲಿಕ್ ಟಿ.ವಿ.ಯ ಖ್ಯಾತ ಪತ್ರಕರ್ತರಾದ ಶ್ರೀ ರಂಗನಾಥ್, ಕೈಗಾರಿಕೋದ್ಯಮಿ ಶ್ರೀ ಎಂ.ವಿ.ಎನ್. ಸತ್ಯನಾರಾಯಣ್ ಸೇರಿದಂತೆ ಹಲವು ಮಾಹಿತಿ ತಂತ್ರಜ್ಞಾನ ಕ್ಷೇತ್ರದದ ದಿಗ್ಗಜರು, ವೈದ್ಯರು, ಶಿಕ್ಷಣ ತಜ್ಞರು, ಉದ್ಯಮಿಗಳು ಒಳಗೊಂಡಂತೆ 35ಕ್ಕೂ ಹೆಚ್ಚು ವಿಪ್ರಗಣ್ಯರು ಭಾಗವಹಿಸಿ ಮುಂದಿನ ದಿನಗಳಲ್ಲಿ ವಿಪ್ರ ಸಮುಇದಾಯವು ತನ್ನ ರಕ್ಷಣೆ ಒಗ್ಗಟ್ಟು ಹಾಗೂ ಸಮುದಾಯದ ಕ್ಷೇಮಾಭಿವೃದ್ಧಿಗೆ ಕೈಗೊಳ್ಳಬೇಕಾದ ಯೋಜನೆಗಳ ಕುರಿತು ಸುಧೀರ್ಘ ಸಮಾಲೋಚನೆಯನ್ನು ನಡೆಸಿದರು.

## ರಾಜ್ಯ ವಿವಿಧ ಬ್ರಾಹ್ಮಣ ಪಂಗಡ ಹಾಗೂ ತಾಲ್ಲೂಕು, ಜಿಲ್ಲಾ ವಿಪ್ರ ಸಂಘಗಳ ಪದಾಧಿಕಾರಿಗಳ ಸಮಾವೇಶ

26.11.2022 ರಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವತಿಯಿಂದ ಇಂದು ನಡೆದ ಜಿಲ್ಲಾ ಸಂಘ, ತಾಲ್ಲೂಕಿನ ಹಾಗೂ ಎಲ್ಲಾ ಬ್ರಾಹ್ಮಣ ಸಂಘಗಳು ಹಾಗೂ ವಿವಿಧ ಬ್ರಾಹ್ಮಣ ಪಂಗಡಗಳ ಪದಾಧಿಕಾರಿಗಳ ಸಮಾವೇಶವನ್ನು ಬೆಂಗಳೂರಿನಲ್ಲಿ ನಡೆಸಲಾಯಿತು. ವಿಪ್ರ ಸಮಾಜವು ಇಂದು ಎದಿರುಸುತ್ತಿರುವ ಸವಾಲುಗಳು ಹಾಗೂ ಸಮುದಾಯದ ಕ್ಷೇಮಾಭಿವೃದ್ಧಿ ಹಾಗೂ ವಿಪ್ರ ಸಂಘಟನೆಯ ಬಲವರ್ಧನೆಗಾಗಿ ಕೈಗೊಳ್ಳಬೇಕಾದ ಕಾರ್ಯ ಯೋಜನೆಗಳ ಬಗ್ಗೆ ಸಮಾಲೋಚನೆಯನ್ನು ಈ ಸಭೆಯಲ್ಲಿ ನಡೆಸಲಾಯಿತು.



# ಅಧ್ಯಕ್ಷರಿಂದ ಗಣ್ಯಾತಿಗಣ್ಯರ ಭೇಟಿ



### ಕೇಂದ್ರ ಸಚಿವರಾದ ಸನ್ಮಾನ್ಯ ಶ್ರೀ ಪ್ರಹ್ಲಾದ್ ಜೋಶಿಯವರೊಡನೆ

ದಿನಾಂಕ 09/05/2022 ರಂದು ಮಹಾಸಭಾದ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರು ಮಹಾಸಭಾದ ಪದಾಧಿಕಾರಿಗಳೊಂದಿಗೆ ಹಾಗೂ ಹುಬ್ಬಳಿಯ ಸ್ಥಳೀಯ ವಿಪ್ರ ಮುಖಂಡರೊಡಗೂಡಿ ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ್ ಜೋಶಿ ಅವರನ್ನು ಭೇಟಿ ಮಾಡಿ ವಿಪ್ರಬಂಧುಗಳ ಕುಂದುಕೊರತೆಗಳ ಬಗ್ಗೆ ಸಮಾಲೋಚಿಸಿದರು.

### ಮುಖ್ಯಮಂತ್ರಿ ಶ್ರೀ ಬಸವರಾಜು ಬೋಮ್ಮಾಯಿ ಭೇಟಿ

ಮಹಾಸಭಾ ಅಧ್ಯಕ್ಷ ಶ್ರೀ ಅಶೋಕ್ ಹಾರನಹಳ್ಳಿ ಯವರು ಶಾಸಕ ಶ್ರೀ ರವಿ ಸುಬ್ರಮಣ್ಯ ಹಾಗೂ ಇತರ ಪದಾಧಿಕಾರಿಗಳೊಡನೆ ಮುಖ್ಯಮಂತ್ರಿ ಶ್ರೀ ಬಸವರಾಜು ಬೋಮ್ಮಾಯಿವರನ್ನು ಭೇಟಿ ಮಾಡಿ ಆರ್ಥಇಕವಾಗಿ ಹಿಂದುಳಿದ ವರ್ಗಕ್ಕೆ ಕೇಂದ್ರ ಸರ್ಕಾರ ಕಲ್ಪಿಸಿದ ಶೇ% 10 ಮಿಸಲಾತಿಯನ್ನು ಅನುಷ್ಠಾನಗೊಳಿಸಲು ವತ್ತಾಯಪೂರ್ವಕ ಮನವಿ ಮಾಡಿದರು. ಮಹಾಸಭಾ ನಿರ್ಮಿಸಲು ಯೋಜಿಸಿದಾ ನೂತನ ಸಭಾಭವನಕ್ಕೆ 10 ಕೋಟಿ ರೂ.ಗಳ ಧನ ಸಹಾಯಕ್ಕಾಗಿ ಈ ಸಂದರ್ಭದಲ್ಲಿ ಮನವಿ ಸಲ್ಲಿಸಿದರು. ಪ್ರಾಥಮಿಕ ಶಿಕ್ಷಣ ಸಚಿವ ಶ್ರೀ ನಾಗೇಶರವರು ಉಪಸ್ಥಿತರಿದ್ದರು.



### ಅಧ್ಯಕ್ಷರಿಂದ ಉನ್ನತ ಶಿಕ್ಷಣ ಸಚಿವರ ಭೇಟಿ



### ವಿರೋಧ ಪಕ್ಷದ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರ ಭೇಟಿ



# ಮಹಾಸಭಾದ ಬೆಂಗಳೂರು ಉತ್ತರ ವಲಯದ ಪ್ರಾರಂಭೋತ್ಸವ

**ದಿನಾಂಕ 06.03.2022ರಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಬೆಂಗಳೂರು ಉತ್ತರ ವಲಯದ ಉದ್ಘಾಟನಾ ಸಮಾರಂಭ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಉತ್ತರ ವಲಯದ ಪ್ರಧಾನ ಸಂಚಾಲಕರಾದ ಶ್ರೀ ಎಲ್. ಜಯಸಿಂಹ, ವೇದಾಂತ ಶಿರೋಮಣಿ ಡಾ|| ಪಾವಗಡ ಪ್ರಕಾಶರಾವ್, ಭಾಸ್ಕರರಾವ್ ಸೇರಿದಂತೆ ಮಹಾಸಭಾ ಪದಾಧಿಕಾರಿಗಳು ಪಾಲ್ಗೊಂಡಿದ್ದರು.**



## ವಿಪ್ರಸಂಘಟನೆ ಬಲಗೊಳಿಸಲು ಒಂದು ವರ್ಷದ

# ಅಧ್ಯಕ್ಷರ ರಾಜ್ಯ ಪ್ರವಾಸದ ಸಂಕ್ಷಿಪ್ತ ಮಾಹಿತಿ

ಡಿಸೆಂಬರ್ ಹತ್ತೊಂಬತ್ತು 2021 ರ ರಾತ್ರಿ ಮಹಾಸಭಾ ಅಧ್ಯಕ್ಷರಾಗಿ. ಅಶೋಕ ಹಾರನಹಳ್ಳಿಯವರನ್ನು ವಿಜಯಶಾಲಿ ಎಂದು ಘೋಷಿಸಿದಾಗ ಅಲ್ಲಿ ನೆರೆದಿದ್ದ ಜನಸ್ತೋಮದ ಹರುಷಕ್ಕೆ ಪಾರವಿಲ್ಲ. ಕರ್ನಾಟಕದ ನಾನಾ ಭಾಗದಿಂದ ಬಂದಂತಹ ಬೆಂಬಲಿಗರೆಲ್ಲರೂ ಹೇಳಿದ್ದು ಒಂದೇ ಮಾತು "ಇನ್ನೇನಿದ್ದರೂ ಡೆವಲೆಂಪ್‌ಮೆಂಟ್". ಹಾರನಹಳ್ಳಿಯವರು ಮಹಾಸಭೆಯನ್ನು ಮತ್ತೊಂದು ಹಂತಕ್ಕೆ ಕೊಂಡೂಯ್ಯಲಿದ್ದಾರೆ. ಇದರಲ್ಲಿ ಯಾವ ಅನುಮಾನವೇ ಇಲ್ಲ – ಇದು ಎಲ್ಲರ ನಿರೀಕ್ಷೆ.

ಎಣಿಕೆಯಂತೆ ನೂತನವಾಗಿ ಅಯ್ಕೆಯಾದ ಅಧ್ಯಕ್ಷರು ಯಾವುದೇ ಪ್ರತಿಷ್ಠಿತ ಕಂಪೆನಿಯ ಸಿ.ಇ.ಓ.ಗೆ ಕಡಿಮೆ ಇಲ್ಲದಂತೆ ಮಹಾಸಭೆಯ ಉನ್ನತಿಗಾಗಿ ಗೆದ್ದ ಮರುದಿನದಿಂದಲೇ ಉನ್ನತವಾದ ತಂಡವನ್ನು ಕಟ್ಟ ತೊಡಗಿದ್ದರು. ಎಲ್ಲರ ಎಣಿಕೆಯನ್ನು ಬುಡಮೇಲು ಮಾಡಿ ಪ್ರಪ್ರಥಮವಾಗಿ ಮಹಾಸಭೆಗೆ ಕರೆತಂದಿದ್ದು ಪ್ರತಿಷ್ಠಿತ ಸಾಫ್ಟ್‌ವೇರ್ ಕಂಪೆನಿಗಳಲ್ಲಿ ಕೆಲಸ ಮಾಡುವ ಯುವಕರನ್ನು. ಆಯಾಕಟ್ಟಿನ ಜಾಗದಲ್ಲಿ ಯಾವ ಹುದ್ದೆ, ಪ್ರಚಾರಗಳ ಅಪೇಕ್ಷೆ ಇಲ್ಲದ "ಡಿಜಟಲ್ ಟ್ರಾನ್ಸ್‌ಫರ್ಮೇಶನ್" ತಂಡವನ್ನು ಕಟ್ಟಿದರು. ಐ.ಟಿ ತಂಡ ಹಗಲಿರಳು ಕೆಲಸ ಮಾಡಿ ಕೇವಲ ಇಪ್ಪತ್ತು ದಿನಗಳ ಅಂತರದಲ್ಲಿ ನೆನೆಗುದಿಗೆ ಬಿದ್ದಿದ್ದ ಮಹಾಸಭೆಯ ವೆಬ್‌ಸೈಟ್ ನವೀಕರಣಗೊಂಡು ಜನವರಿ 26ರಂದು ಲೋಕಾರ್ಪಣೆಗೊಂಡಿತು. ಅಷ್ಟೇ ಅಲ್ಲ ಸದಸ್ಯತ್ವವನ್ನು ಆನ್‌ಲೈನ್ ಮೂಲಕ ಸುಲಭವಾಗಿ ಪಡೆಯುವಂತೆ ಮಾಡುವ ಮೂಲಕ ಮಹಾಸಭೆಗೆ ಡಿಟಿಜಿಲ್ ಸ್ಪರ್ಶ ಕೊಡುವತ್ತ ಮುನ್ನುಡಿ ಬರೆದರು.

ಇದೆಲ್ಲಕ್ಕೂ ಮಿಗಿಲಾದ ಸವಾಲಿದಿದ್ದದ್ದು ಕರ್ನಾಟಕದಾದ್ಯಂತ ನೆಲೆಸಿರುವ ಸಮುದಾಯದ ಪ್ರಭಾವಿ ಮುಖಂಡರನ್ನು ಒಳಗೊಂಡ ತಂಡ ಕಟ್ಟುವುದು. ಎಲ್ಲರ ಆಸಕ್ತಿಗಳು, ನಿರೀಕ್ಷೆಗಳು ಕರ್ನಾಟಕದ ನಾನಾ ವಲಯಗಳಿಂದ ಬಂದಿದ್ದು ಆಶ್ಚರ್ಯವೇನಲ್ಲ. ಮಹಾಸಭೆಗೆ ಬೆಂಗಳೂರಿನ ಮಹನೀಯರನ್ನೆಲ್ಲಾ ಕರೆದು ಮುಂದಿರುವ ಸವಾಲುಗಳು ಮತ್ತು ಕರ್ನಾಟಕದ ಉದ್ದಗಲಕ್ಕೂ ನೆಲೆಸಿರುವ ಬ್ರಾಹ್ಮಣರ ಸಂಘಟನೆಯ ಅಗತ್ಯತೆಯ ಬಗ್ಗೆ ವಿವರಿಸಿದಾಗ, ಹಲವಾರು ಮುಖಂಡರು ಎಲ್ಲ ವಲಯಗಳಿಗೆ ಪ್ರಾತಿನಿಧ್ಯ ಕೊಡಲು ಒಪ್ಪಿಕೊಂಡರು. ಅದರಂತೆ, ಯಾವುದೇ ಹುದ್ದೆಗಳ ಅಪೇಕ್ಷೆ ಇಲ್ಲದ ನಿಮ್ಮೊಂದಿಗೆ ಸದಾ ಮಹಾಸಭೆಯ ಒಳಿತಿಗೆ ಶ್ರಮಿಸುವ ಭರವಸೆ ಕೊಟ್ಟರು. ಹೀಗೆ ಪ್ರತಿಯೊಬ್ಬರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಹಾಸಭೆಯ ಇತಿಹಾಸದಲ್ಲೇ ಮೊಟ್ಟಮೊದಲ ಬಾರಿಗೆ ಹನ್ನೊಂದು ಜನ ಉಪಾಧ್ಯಕ್ಷರಲ್ಲಿ ಎಂಟು ಜನ ಉಪಾಧ್ಯಕ್ಷರು ಬೆಂಗಳೂರಿನಿಂದಾಚೆಯಿಂದ ನಾಮಾಂಕಿತರಾದರು. ಅದೇ ರೀತಿ ಗುಲ್ಬರ್ಗಾವಿಭಾಗದಿಂದಲೂ ಒಬ್ಬ ಸಹಕಾರ್ಯದರ್ಶಿಯನ್ನು ನೇಮಿಸಿದರು. ನಂತರ ಬೆಂಗಳೂರು ನಗರದ ಆಗಾಧತೆಯನ್ನು ಮನಗೊಂಡು ಬೆಂಗಳೂರು ಉತ್ತರ ವಲಯಕ್ಕೆ ಚಾಲನೆ ನೀಡಿ ಸಂಚಾಲಕರನ್ನು ನೇಮಿಸಿದರು. ಅತೀ ಶೀಘ್ರದಲ್ಲಿ ಇನ್ನಷ್ಟು ವಲಯಗಳು ಕಾರ್ಯನಿರ್ವಹಿಸಲಿವೆ. ತದನಂತರ ಮಹಿಳಾ ಸಂಘಟನೆ ಹಾಗೂ ಯುವ ಸಂಘಟನೆಯ ಅಗತ್ಯವನ್ನು ಮನಗೊಂಡು, ರಾಜ್ಯ ಮಹಿಳಾ ವಿಭಾಗ ಹಾಗೂ ರಾಜ್ಯ ಯುವ ಘಟಕಕ್ಕೆ ಚಾಲನೆ ನೀಡಿ ಸಂಚಾಲಕರನ್ನು ನೇಮಿಸಿದರು.

ವಿಪ್ರಬಾಂಧವರ ದಿನನಿತ್ಯದ ನಾನಾ ವಿಭಾಗಗಳ ಸಮಸ್ಯೆಯನ್ನು ಆಲಿಸಲು ಮತ್ತು ಆಯ ವಿಭಾಗಗಳಲ್ಲಿ ಸಹಾಯ ಬಯಸಿ ಬರುವ ಬಾಂಧವರಿಗೆ ಸಹಾಯಹಸ್ತ ಚಾಚಲು, ಮಹಾಸಭೆಯ ಸರ್ವತೋಮುಖ ಬೆಳವಣಿಗೆಗಾಗಿ ಪರಿಣಿತರ ತಂಡವನ್ನು ಕಟ್ಟಲು ಈ ಕೆಳಕಂಡ ಸಮಿತಿಗಳ ರಚನೆಯಾಯಿತು.

ಮಹಾಸಭೆಯು ಹಮ್ಮಿಕೊಂಡಿರುವ ವಿವಿಧ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅಧ್ಯಕ್ಷರು ರಚಿಸಿರುವ ವಿವಿಧ ಸಮಿತಿಗಳು

1. ಪತ್ರಿಕಾ ಮಾಧ್ಯಮ ಸಮಿತಿ
2. ವಿದ್ಯಾವಾಸಿನಿ ವಿಪ್ರ ವಸತಿ ನಿಲಯ ಮೇಲ್ವಿಚಾರಣಾ ಸಮಿತಿ
3. ಸದಸ್ಯತ್ವ ನೋಂದಾವಣೆ ಹಾಗೂ ಸದಸ್ಯತ್ವ ಪಟ್ಟಿ ಪರಿಷ್ಕರಣೆ ಸಮಿತಿ
4. ಬೈಲಾ ತಿದ್ದುಪಡಿ ಸಮಿತಿ
5. ಕಟ್ಟಡ ನಿರ್ಮಾಣ ಸಮಿತಿ
6. ರಾಜ್ಯ ಮಹಿಳಾ ವಿಭಾಗ
7. ರಾಜ್ಯ ಯುವ ವಿಭಾಗ
8. ಅಂತರ್ಜಾಲ ಪರಿವರ್ತನಾ ಸಮಿತಿ
9. ವಧು–ವರ ಮಾಹಿತಿ ಸಮಿತಿ
10. ಕಾನೂನು ಸಲಹಾ ಸಮಿತಿ
11. ಆರೋಗ್ಯ ಮತ್ತು ವೈದ್ಯಕೀಯ ಸಮಿತಿ
12. ವೈದ್ಯಕೀಯ ತುರ್ತುಸೇವೆ, ರಕ್ತದಾನ ಹಾಗೂ ಇತರೆ ಸವಲತ್ತುಗಳ ಸಲಹಾ ಸಮಿತಿ
13. ಸಾಂಸ್ಕೃತಿಕ ಚಟುವಟಿಕೆಗಳ ಸಮಿತಿ
14. ಕೇಂದ್ರ ನಿಧಿ ಮಾಸಾಶನ ಸಮಿತಿ

15. ಧರ್ಮ ಜಾಗೃತಿ ಸಮಿತಿ
16. ಕೈಗಾರಿಕಾ ಮತ್ತು ವಾಣಿಜ್ಯ ಸಮಿತಿ
17. ಕಾನೂನು ಸಲಹಾ ಸಮಿತಿ
18. ಸಮನ್ವಯ ಸಮಿತಿ
19. ಡಿಜಿಟಲ್ ಟ್ರಾನ್ಸ್‌ಫರ್‌ಮೇಶನ್ ಸಮಿತಿ

ಹೀಗೆ ಹತ್ತು ಹಲವು ಸಲಹಾ ಸಮಿತಿಗಳನ್ನು ರಚಿಸಿ ಅವುಗಳ ಹೆಲ್ಪ್‌ಲೈನ್ ಅನ್ನು ರಚಿಸಿ, ಸದಸ್ಯರು ಆಯಾ ಸಮಿತಿಗಳನ್ನು ಸಂಪರ್ಕಿಸಿ, ಮಹಾಸಭೆಯ ಸೇವೆಯನ್ನು ಪಡೆಯಲು ಅನುವು ಮಾಡಿಕೊಟ್ಟರು.

ಅದರಲ್ಲಿ ವೈದ್ಯಕೀಯ ಮತ್ತು ಸಲಹಾ ಸಮಿತಿಯ ಅಡಿಯಲ್ಲಿ ಈಗಾಗಲೇ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ವಿಶೇಷವಾಗಿ ಇಂಜನಿಯರಿಂಗ್ ಓದುತ್ತಿದ್ದ ತರುಣನಿಗೆ ಕಣ್ಣಿನ ತೊಂದರೆ ನಿವಾರಿಸುವಲ್ಲಿ ಮತ್ತು ಮತ್ತೊಬ್ಬ ಚಾಲಕನಿಗೆ ಕೃತಕ ಕಾಲಿನ ಅಗತ್ಯತೆಯನ್ನು ಪೂರೈಸುವಲ್ಲಿ ವೈದ್ಯಕೀಯ ಸಲಹಾ ಸಮಿತಿ ಅತ್ಯಂತ ಶ್ಲಾಘನೀಯ ಕಾರ್ಯವನ್ನು ಮಾಡಿದೆ.

ಅದಷ್ಟೇ ಅಲ್ಲ, ಪ್ರಪ್ರಥಮ ಬಾರಿಗೆ ಪ್ರತಿಷ್ಠಿತ ಆಸ್ಪತ್ರೆಗಳೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡು ರಿಯಾಯಿತಿ ದರದಲ್ಲಿ ಮಹಾಸಭೆಯ ಸದಸ್ಯರಿಗೆ ವೈದ್ಯಕೀಯ ಸೌಲಭ್ಯವನ್ನು ಕೊಡುವ ಮಹತ್ತರವಾದ ಕಾರ್ಯಕ್ಕೆ ಚಾಲನೆ ನೀಡಿದೆ.

ಆಪ್ತ ಸಲಹಾ ಸಮಿತಿ ಮತ್ತು ಕಾನೂನು ಸಲಹ ಸಮಿತಿಗಳು ಕೂಡ ಅತ್ಯಂತ ಉಪಯುಕ್ತವಾದ ಸೇವೆಯನ್ನು ಉಚಿತವಾಗಿ ಒದಗಿಸುತ್ತಿದೆ ಎಂದು ಈ ಸಂದರ್ಭದಲ್ಲಿ ಉಲ್ಲೇಖಿಸುವುದು ಅತ್ಯಗತ್ಯ.

ವಿದ್ಯಾನಿಧಿ ಅಡಿಯಲ್ಲಿ ಬಂದ ಹಲವು ಅರ್ಜಿಗಳನ್ನು ಪರಿಶೀಲಿಸಿ ಆರ್ಥಿಕ ಹಿನ್ನಲೆಯನ್ನು ಮಾನದಂಡವಾಗಿರಿಸಿ ಈಗಾಗಲೇ ಮಹಾಸಭೆ ವಿದ್ಯಾರ್ಜನೆಗೆ ಸಹಾಯ ಬಯಸಿ ಬರುವವರಿಗಾಗಿ ಸಹಾಯಹಸ್ತವನ್ನು ಚಾಚಿದೆ. ಹೀಗೆ ಹಲವು ಸಲಹಾ ಸಮಿತಿಯನ್ನು ರಚಿಸಿ ಖುದ್ದು ಅಧ್ಯಕ್ಷರೇ ಪ್ರತಿ ಸಮಿತಿಯ ಮೇಲ್ವಿಚಾರಣೆಯನ್ನು ನಡೆಸುತ್ತಿದ್ದಾರೆ.

ಇದಿಷ್ಟು ಆಡಳಿತಾತ್ಮಕ ಕಾರ್ಯವೈಖರಿಯಾದರೆ, ಇನ್ನು ಸಂಘಟನೆಯ ವಿಷಯ ಬಂದಾಗ ಅಧ್ಯಕ್ಷರು ಒಂದೇ ದಿನದಲ್ಲಿ ಕರ್ನಾಟಕದ ಉತ್ತರದ ತುತ್ತ ತುದಿಯಿಂದ ದಕ್ಷಿಣದ ತುತ್ತ ತುದಿಯವರೆಗೆ ಸಂಚರಿಸಿದ ನಿದರ್ಶನಗಳಿವೆ.

## ಒಂದು ವರ್ಷದಲ್ಲಿ ಅಧ್ಯಕ್ಷರು ಕೈಗೊಂಡ ಪ್ರಮುಖ 100 ಸಂಘಟನಾ ಕಾರ್ಯಕ್ರಮ ಹಾಗೂ ಪ್ರವಾಸಗಳ ಸಂಕ್ಷಿಪ್ತ ಮಾಹಿತಿ

| ದಿನಾಂಕ – ಸ್ಥಳ | ಕಾರ್ಯಕ್ರಮ |
|---|---|
| 24.12.2021 ಗಾಯತ್ರಿ ಭವನ, ಬೆಂಗಳೂರು | ಅಭಿಮಾನಿಗಳು ಏರ್ಪಡಿಸಿದ್ದ ಅಭಿನಂದನಾ ಸಂಜೆ ಹಾಗೂ ಸಭೆಯ ನಂತರ ಮುಖಂಡರೊಡನೆ ಮಾತುಕತೆ. |
| 30.12.2021 ಶ್ರೀಕ್ಷೇತ್ರ ಶೃಂಗೇರಿ ಕೊಪ್ಪ | ಅ) ಶೃಂಗೇರಿಗೆ ಭೇಟಿ ಕೊಟ್ಟು ತಾಯಿ ಶಾರದಾಂಬೆಯ ದರ್ಶನ ಪಡೆದು ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮೀಜಿ ಅವರಿಂದ ಆಶೀರ್ವಚನ ಹಾಗೂ ಮಹಾಸಭೆಯ ಸಂಘಟನೆಯ ಬಗ್ಗೆ ಸಲಹೆಗಳನ್ನು ಪಡೆದರು.<br>ಆ) ಅಂದೇ ಶೃಂಗೇರಿ ಹಾಗೂ ತಾಲ್ಲೂಕು ಬ್ರಾಹ್ಮಣ ಮಹಾಸಭಾ ಕೊಪ್ಪ ಏರ್ಪಡಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಪದಾಧಿಕಾರಿಗಳೊಂದಿಗೆ ಸಂಘಟನೆ ಬಗ್ಗೆ ಚರ್ಚೆ. |
| 31.12.2021 ಶ್ರೀಕ್ಷೇತ್ರ ಶೃಂಗೇರಿ | ತಾಯಿ ಶಾರದಾಂಬೆಯ ದರ್ಶನ ಹಾಗೂ ಜಗದ್ಗುರು ಶ್ರೀ ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮೀಜಿಯವರ ಆಶೀರ್ವಾದ ಸ್ವೀಕಾರ. |

| ದಿನಾಂಕ – ಸ್ಥಳ | ಕಾರ್ಯಕ್ರಮ |
|---|---|
| 01.01.2022 ಮುಳುಬಾಗಿಲಿನ ಕುರುಡುಮಲೆ ಕೋಲಾರ ಜಿಲ್ಲೆ | ಶ್ರೀಪಾದಮಠಕ್ಕೆ ತೆರಳಿ ಯೋಗಾನರಸಿಂಹದೇವರು ಮತ್ತು ಶ್ರೀಪಾದರಾಜರ ದರ್ಶನ ಹಾಗೂ ಶ್ರೀ ಸುಜಯನಿಧಿತೀರ್ಥರ ಆಶೀರ್ವಾದ ಪಡೆದು ಮಹಾಸಭೆಗೆ ಸಲಹೆಗಳನ್ನು ಪಡೆದು ಹಲವು ಮುಖಂಡರ ಭೇಟಿ.<br>ಜಿಲ್ಲಾ ಬ್ರಾಹ್ಮಣ ಸಂಘದಿಂದ ಅಭಿನಂದನೆ ಸ್ವೀಕಾರ ಹಾಗೂ ಸಂಘಟನೆ ಬಗ್ಗೆ ಚರ್ಚೆ. |
| 02.01.2022 ಮಂಡ್ಯ | ಜಿಲ್ಲಾ ಬ್ರಾಹ್ಮಣ ಸಭಾ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಭಾಗಿ ಹಾಗೂ ಹಲವು ಮುಖಂಡರೊಡನೆ ಚರ್ಚೆ. |
| 06.01.2022 ಗಾಯತ್ರಿ ಭವನ | ಸರಳ ಸಮಾರಂಭದಲ್ಲಿ ಮಹಾಸಭಾಧ್ಯಕ್ಷರಾಗಿ ಅಧಿಕಾರ ಸ್ವೀಕಾರ. |
| 14.01.2022 | ಶ್ರೀ ರೆಸಿಡೆನ್ಸಿಗೆ ಭೇಟಿ, ಮಹಾಸಭೆಗೆ ದೇಣಿಗೆ ಸಂಗ್ರಹ |
| 26.01.2022 ಬೆಂಗಳೂರು | ಕೇಂದ್ರ ಕಾರ್ಯಕಾರಿ ಸಮಿತಿ ಸಭೆ ಹಾಗೂ ಮಹಾಸಭಾ ವೆಬ್‌ಸೈಟ್ ಲೋಕಾರ್ಪಣೆ. |

| ದಿನಾಂಕ – ಸ್ಥಳ | ಕಾರ್ಯಕ್ರಮ |
|---|---|
| 06.02.2022 ಮೈಸೂರು | ಅಭಿನಂದನಾ ಸಮಾರಂಭ ಹಾಗೂ ಸಂಘಟನಾ ಸಭೆ. |
| 07.02.2022 ಮಾಲೂರು – ಕೋಲಾರ | ಎ.ಕೆ.ಎಸ್. ವಿದ್ಯಾಮಾನ್ಯ ಲೋಕಮಾನ್ಯ ಫೌಂಡೇಷನ್ ಗುರುಕುಲಕ್ಕೆ ಭೇಟಿ – ವಿದ್ಯಾರ್ಥಿಗಳೊಡನೆ ವಿಚಾರ ವಿನಿಮಯ |
| 10.02.2022 ಬೆಂಗಳೂರು | ಉನ್ನತ ಶಿಕ್ಷಣ ಇಲಾಖೆಯ ಸಚಿವರ ಭೇಟಿ |
| 11.02.2022 ಬೆಂಗಳೂರು | ವಿಪ್ರನುಡಿ ಮರುಚಾಲನೆ |
| 13.02.2022 ಅರಸೀಕೆರೆ, ಹಾಸನ ಜಿಲ್ಲೆ. | ಅಭಿನಂದನಾ ಸಮಾರಂಭ ಹಾಗೂ ಸಭೆ |
| 20.02.2022 ಬೆಂಗಳೂರು | ರಾಜ್ಯ ಮಹಿಳಾ ವಿಭಾಗ ಉದ್ಘಾಟನೆ |
| 22.02.2022 ಬೆಂಗಳೂರು | ಅಧ್ಯಕ್ಷರ ನೇತೃತ್ವದ ನಿಯೋಗ ಮಾನ್ಯ ಮುಖ್ಯಮಂತ್ರಿಗಳ ಭೇಟಿ |
| 24.02.2022 ಬೆಂಗಳೂರು | Free Super Medical Camp Inauguration Organised by United Hospital, Jayanagar |
| 27.02.2022 ಹರಿಹರಪುರ, ಚಿಕ್ಕಮಗಳೂರು | ಹರಿಹರಪುರದಲ್ಲಿನ ಕುಂಭಾಭಿಷೇಕದ ಬಗ್ಗೆ ಶ್ರೀ ಶ್ರೀಗಳ ಸಮ್ಮುಖದಲ್ಲಿ ಚರ್ಚೆ |
| 28.02.2022 ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ ತಾಲ್ಲೂಕು ಬ್ರಾಹ್ಮಣ ಸಂಘ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರದಲ್ಲಿ ಭಾಗಿ ಹಾಗೂ ಸದಸ್ಯತ್ವ ಅಭಿಯಾನಕ್ಕೆ ಚಾಲನೆ. |
| 01.03.2022 ಪ್ರಮೋದ ಲೇಔಟ್, ಬೆಂಗಳೂರು | ಮಹಾಶಿವರಾತ್ರಿಯಂದು ಸದ್ಗುರು ವೇದಿಕೆ, ನಾಲ್ಕು ಯಾಗಗಳು, ಈಶ್ವರಾಧನೆಯಲ್ಲಿ ಭಾಗಿ. |
| 04.03.2022 ಬೆಂಗಳೂರು | ನೂತನ ಲಿಫ್ಟ್ ಉದ್ಘಾಟನಾ ಸಮಾರಂಭ |
| 06.03.2022 ಬೆಂಗಳೂರು | ಬೆಂಗಳೂರು ಉತ್ತರ ವಲಯದ ಪ್ರಾರಂಭೋತ್ಸವ ಪಿ.ಇ.ಎಸ್. ಕಾಲೇಜಿನಲ್ಲಿ ಹೆಲ್ತ್ ಕ್ಯಾಂಪ್ ಉದ್ಘಾಟನೆ |
| 08.03.2022 ಬೆಂಗಳೂರು | ಕಣ್ಣಿನ ಪರೀಕ್ಷೆ ಶಿಬಿರ – ಮಹಿಳಾ ದಿನದಂದು ಶೇಖರ್ ಐ ಆಸ್ಪತ್ರೆ ಸಹಯೋಗದೊಡನೆ |

| ದಿನಾಂಕ – ಸ್ಥಳ | ಕಾರ್ಯಕ್ರಮ |
|---|---|
| 09.03.2022 ರಾಯಚೂರು ಭೇಟಿ | ಅ) ಬ್ರಾಹ್ಮಣ ಮುಖಂಡರಾದ ಶ್ರೀ ನರಸಿಂಗರಾವ್ ದೇಶಪಾಂಡೆ ಅವರ ನಿವಾಸಕ್ಕೆ ಭೇಟಿ ಹಾಗೂ ಶ್ರೀ ಸತ್ಯಾತ್ಮತೀರ್ಥ ಶ್ರೀಗಳಿಂದ ಆಶೀರ್ವಾದ<br>ಆ) ವೀರಾಂಜನೇಯ ಗುಡಿಯಲ್ಲಿ ಉತ್ತರ ಕರ್ನಾಟಕ ಜಿಲ್ಲಾ ಕಾರ್ಯಕಾರಿಣಿ ಸಭೆ<br>ಇ) ಸಂಜೆ ಜೀಡು ವೀರಾಂಜನೇಯ ಗುಡಿಯಲ್ಲಿ ಜನ ಸಂಪರ್ಕ ಸಭೆ |
| 13.03.2022 ಬೆಂಗಳೂರು | ಅ) ಮಹಿಳಾ ಘಟಕ ನೂತನವಾಗಿ ಆಯೋಜಿಸಿದ್ದ ಬೃಹತ್ ಬೈಕ್ ರ್‍ಯಾಲಿಗೆ ಚಾಲನೆ – ಚಾಮರಾಜಪೇಟೆ ಶ್ರೀ ಶಂಕರ ಮಠದಲ್ಲಿ.<br>ಆ) ಶ್ರೀ ಶಂಕರ ಸೇವಾ ಸಮಿತಿ ಜಾಲಹಳ್ಳಿಗೆ ಭೇಟಿ<br>ಇ) ಶ್ರೀ ಸಹಜಾನಂದ ಧ್ಯಾನಗಂಗಾ ಆಶ್ರಮ, ದೊಡ್ಡಮುದವಾಡಿಗೆ ಭೇಟಿ<br>ಈ) ಮಹಿಳಾ ಘಟಕದ ವಿಪ್ರ ಮಹಿಳೆಯರಿಗೆ ಸನ್ಮಾನ – ಗಾಯನ ಸಮಾಜ |
| 15.03.2022 ಹರಿಹರಪುರ, ಚಿಕ್ಕಮಗಳೂರು | ಹರಿಹರಪುರಕ್ಕೆ ಭೇಟಿ – ಕುಂಭಾಭಿಷೇಕದ ತಯಾರಿಯ ಬಗ್ಗೆ |
| 19.03.2022 ಚನ್ನರಾಯಪಟ್ಟಣ ತಾಲ್ಲೂಕು | ಬ್ರಾಹ್ಮಣ ಮಹಾಸಭಾಗೆ ಭೇಟಿ |
| 20.03.2022 | ಶ್ರೀ ಧನ್ವಂತರಿ ಸೇವಾ ಪ್ರತಿಷ್ಠಾನ ಲೋಕಾರ್ಪಣಾ ಸಮಾರಂಭದಲ್ಲಿ ಭಾಗಿ |
| 20.03.2022 | ಶ್ರೀ ಹವ್ಯಕ ಮಹಾಸಭಾದ ವಿಜಯೀಭವ ಕಾರ್ಯಕ್ರಮದ ಉದ್ಘಾಟನೆ |
| 20.03.2022 ಬೆಂಗಳೂರು | ಆನಂದ ಬಳಗ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಭಾಗಿ |
| 23.03.2022 ಕೊಪ್ಪಳ | ವ್ಯಾಸರಾಜರ ಉತ್ತಾರಾಧನೆ ಪ್ರಯುಕ್ತ ನವವೃಂದಾವನ ಗಂಗಾವತಿಗೆ ಭೇಟಿ |
| 25.03.2022 ಬೆಂಗಳೂರು | "ದಿ ಕಾಶ್ಮೀರ್ ಫೈಲ್ಸ್" ವಿಶೇಷ ಪ್ರದರ್ಶನದಲ್ಲಿ ಭಾಗಿ |
| 26.03.2022 ಬೆಂಗಳೂರು | ಡಾ॥ ಬಿ.ಎನ್.ವಿ. ಜ್ಯೋತಿರತ್ನ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಭಾಗಿ |
| 27.03.2022 ಬೆಂಗಳೂರು | ಮಹಾಲಕ್ಷ್ಮೀಪುರಂನ ಬ್ರಾಹ್ಮಣ ಸಭಾದ 18ನೇ ವಾರ್ಷಿಕೋತ್ಸವದಲ್ಲಿ ಭಾಗಿ |
| 27.03.2022 ಹಾಸನ | ಕಣಕಟ್ಟೆ ಗ್ರಾಮಕ್ಕೆ ಭೇಟಿ (ಅರಸೀಕೆರೆ) |
| 28.03.2022 ಚಿಕ್ಕಮಗಳೂರು | ಚಿಕ್ಕಮಗಳೂರಿನಲ್ಲಿ ಶೃಂಗೇರಿ ಮಠದ ಆಡಳಿತ ಅಧಿಕಾರಿಯಿಂದ ಗೌರವ ಸಮರ್ಪಣೆ |

| ದಿನಾಂಕ – ಸ್ಥಳ | ಕಾರ್ಯಕ್ರಮ |
|---|---|
| 02.04.2022 ಬೆಂಗಳೂರು | ಅ) ಪಂಚಾಂಗ ಶ್ರವಣ ಕಾರ್ಯಕ್ರಮದಲ್ಲಿ ಭಾಗಿ<br>ಆ) ವಿಪ್ರನುಡಿ ಆಂಗ್ಲ ಆವೃತ್ತಿ ಬಿಡುಗಡೆ |
| 03.04.2022 ಚಿಂತಾಮಣಿ | ಅಭಿನಂದನಾ ಸಮಾರಂಭ ಹಾಗೂ ಸಂಘಟನ ಸಭಾ ಮತ್ತು ಸದಸ್ಯತ್ವ ಅಭಿಯಾನ |
| 06.04.2022 ಬಳ್ಳಾರಿ | ಹೊಸಪೇಟೆಯಲ್ಲಿ ಕಂಚಿಶ್ರೀಗಳ ಭೇಟಿ ಹಾಗೂ ಶ್ರೀಗಳಿಂದ ಮಹಾಸಭಾಗೆ ಸಲಹೆ ಸೂಚನೆಗಳ ಸ್ವೀಕಾರ. |
| 08.04.2022 ಬೆಂಗಳೂರು | ಕಾಶ್ಮೀರ ನರಮೇಧದ ಕುರಿತು ಏರ್ಪಡಿಸಿದ್ದ ಸಂವಾದದಲ್ಲಿ ಭಾಗಿ |
| 10.04.2022 ಬೆಂಗಳೂರು | ಉತ್ತರ ರಾಜಾಜಿನಗರ ಬ್ರಾಹ್ಮಣ ಸಭಾ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಭಾಗಿ ಉತ್ತರ ರಾಜಾಜಿನಗರ ಬ್ರಾಹ್ಮಣ ಸಭಾ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಭಾಗಿ |
| 19 ರಿಂದ 29 ಏಪ್ರಿಲ್ 2022 ಚಿಕ್ಕಮಗಳೂರು | ಹರಿಹರಪುರದಲ್ಲಿ ಕುಂಭಾಭಿಷೇಕದಲ್ಲಿ ಭಾಗಿ |
| 17.04.2022 ಗದಗ | ರಟ್ಟಿಹಳ್ಳಿಗೆ ಭೇಟಿ ನೀಡಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ |
| 17.04.2022 ಹಾವೇರಿ | ಹಾವೇರಿ ಜಿಲ್ಲೆಯ ಅಗಡಿ ಆನಂದಾಶ್ರಮಕ್ಕೆ ಭೇಟಿ |
| 27.04.2022 ಶಿವಮೊಗ್ಗ | ಶಿವಮೊಗ್ಗದ ವಿಪ್ರ ಯುವ ಪರಿಷತ್ ಏರ್ಪಡಿಸಿದ್ದ ಮಹಾಗಣಪತಿ ಯಾಗದಲ್ಲಿ ಭಾಗಿ. |
| 23.04.2022 ಶಿವಮೊಗ್ಗ | ಮತ್ತೂರಿನಲ್ಲಿ ವಿಪ್ರರ ಭೇಟಿ ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯರ ಭೇಟಿ (ಮತ್ತೂರು ಪಟ್ಟಾಭಿರಾಮ) |
| 23.04.2022 ಶಿವಮೊಗ್ಗ | ಹೊಸಹಳ್ಳಿಯಲ್ಲಿ ಪದ್ಮಶ್ರೀ ಪುರಸ್ಕೃತರಾದ ಗಮಕ ವಿದ್ವಾನ್ ಶ್ರೀ ಹೆಚ್.ಆರ್.ಕೇಶಮೂರ್ತಿ ಅವರ ಭೇಟಿ ಹಾಗೂ ಗೌರವ ಸಮರ್ಪಣೆ.<br>ಮತ್ತೂರಿನ ಅವಧೂತರ ಭೇಟಿ ಹಾಗೂ ಭಾಜಪ ನಾಯಕರಾದ ಭಾನುಪ್ರಕಾಶ ಶರ್ಮ ಹಾಗೂ ನಟರಾದ ಭಾಗವತರ ಭೇಟಿ ಮತ್ತು ಸಂಘಟನೆಯ ಬಗ್ಗೆ ಸಮಾಲೋಚನೆ.<br>ಹಾಸನ ಜಿಲ್ಲೆ, ಹಾಸನ ತಾಲ್ಲೂಕಿನ ಕಿತ್ತಾನೆ ಗ್ರಾಮದಲ್ಲಿ ವಿಪ್ರ ಭವನ ಉದ್ಘಾಟನೆ |
| 07.05.2022 ಲಕ್ಷ್ಮೇಶ್ವರ, ಗದಗ ಜಿಲ್ಲೆ | ಲಕ್ಷ್ಮೇಶ್ವರದಲ್ಲಿ ವಿಪ್ರ ಮುಖಂಡರ ಸಭೆಯಲ್ಲಿ ಮಹಾಸಭಾಧ್ಯಕ್ಷರು |

| ದಿನಾಂಕ – ಸ್ಥಳ | ಕಾರ್ಯಕ್ರಮ |
|---|---|
| 07.05.2022 ಹಾವೇರಿ | ವಿಪ್ರ ಮುಖಂಡರು ಹಾಗೂ ವಿಪ್ರ ಉದ್ದಿಮೆದಾರರ ಭೇಟಿ |
| 07.05.2022 ಗದಗ | ವಿಪ್ರ ಮುಖಂಡರೊಡನೆ ಭೇಟಿ, ಗದಗನಲ್ಲಿ ಏರ್ಪಡಿಸಿದ್ದ ಬೃಹತ್ ದ್ವಿಚಕ್ರ ವಾಹನ ರ್‍ಯಾಲಿಯಲ್ಲಿ ಪಾಲ್ಗೊಳ್ಳುವಿಕೆ |
| 07.05.2022 ಬೆಳಗಾವಿ | ಬೆಳಿಗ್ಗೆ ಅದ್ಭುತ ಸ್ವಾಗತ, ತೆರೆದ ವಾಹನದಲ್ಲಿ ಮೆರವಣಿಗೆ, ವಿಪ್ರ ಉದ್ದಿಮೆದಾರರ ಭೇಟಿ. ಸಂಜೆ ಬೆಳಗಾವಿಯಲ್ಲಿ ಮಹಾಸಭೆಯ ಶಾಖಾ ಕಛೇರಿ ಉದ್ಘಾಟನೆ |
| 09.05.2022 ಹುಬ್ಬಳ್ಳಿ – ಧಾರವಾಡ | ಮಾನ್ಯ ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ ಜೋಶಿಯವರ ಭೇಟಿ<br>ಧಾರವಾಡದಲ್ಲಿ ವಿಪ್ರ ಮುಖಂಡರೊಡನೆ ಚರ್ಚೆ |
| 10.05.2022 ಚಾಮರಾಜನಗರ | ಜಿಲ್ಲಾಮಟ್ಟದ ಸದಸ್ಯತ್ವ ಅಭಿಯಾನದಲ್ಲಿ ಭಾಗಿ |
| 16.05.2022 ಗಾಯತ್ರಿ ಭವನ, ಬೆಂಗಳೂರು | ಖ್ಯಾತ ಗಾಯಕ ಶ್ರೀ ಅನಂತ ಕುಲಕರ್ಣಿಯವರಿಂದ ಹಾಡುಗಾರಿಕೆ. |
| 17.05.2022 ಶ್ರೀಶೃಂಗೇರಿ ಶಂಕರಮಠ ಬೆಂಗಳೂರು. | ಶ್ರೀ ಶ್ರೀ ವಿಧುಶೇಖರಭಾರತೀ ಮಹಾಸ್ವಾಮಿರವರಿಂದ "ಶ್ರೀ ಕೃಷ್ಣ ಯಜುರ್ವೇದದ ಕನ್ನಡ 13ನೆ ಸಂಪುಟ ಬಿಡುಗಡೆ |
| 21.05.2022 ಶಿರಸಿ, ಉತ್ತರ ಕನ್ನಡ | ಮಹಾಸಭೆಯ ಕೇಂದ್ರ ಕಾರ್ಯಕಾರಿ ಸಮಿತಿ ಸಭೆ ಶಿರಸಿಯಲ್ಲಿ ವಿಪ್ರ ಸಮಾವೇಶ |
| ಬೆಂಗಳೂರು | ಬಡಬ್ರಾಹ್ಮಣರಿಗೆ ವೈದ್ಯಕೀಯ ನೆರವು – ಮೆಡಿಕಲ್ ಸೆಲ್ ಉದ್ಘಾಟನೆ |
| 29.05.2022 ಶ್ರೀ ಶೃಂಗೇರಿ ಶಂಕರ ಮಠ – ಬೆಂಗಳೂರು | ಶ್ರೀ ಶೃಂಗೇರಿ ಜಗದ್ಗುರುಗಳಿಗೆ ಮಹಾಸಭೆಯಿಂದ ಫಲ ಹಾಗೂ ಗುರುಕಾಣಿಕೆ ಸಮರ್ಪಿಸಿ, ಗುರುವಂದನ ಕಾರ್ಯಕ್ರಮ |
| ಹುಬ್ಬಳ್ಳಿ | ಅಧ್ಯಕ್ಷರನ್ನು ಹಳೆ ಹುಬ್ಬಳ್ಳಿಯ ಶ್ರೀ ಕೃಷ್ಣೇಂದ್ರ ಗುರುಗಳ ಸ್ವಾಮಿ ಮಠದಲ್ಲಿ ಸತ್ಕರಿಸಲಾಯಿತು. |
| ಶಿವಗಂಗೆ, ನೆಲಮಂಗಲ ತಾ॥ | ಶಿವಗಂಗೆಯಲ್ಲಿ ಶ್ರೀ ಶಂಕರ ಭಗವತ್ಪಾದರ ನೂತನ ದೇವಾಲಯದ ಪ್ರತಿಷ್ಠಾಪನೆ ಹಾಗೂ ಕುಂಭಾಭೀಷೇಕ. |

| ದಿನಾಂಕ – ಸ್ಥಳ | ಕಾರ್ಯಕ್ರಮ |
|---|---|
| 05.06.2022 ಶ್ರೀ ಯದುವೀರ ಕೃಷ್ಣದತ್ತಚಾಮರಾಜ ಒಡೆಯರ್ ಮೈಸೂರು | ಮೈಸೂರು ಜಿಲ್ಲಾ ವಲಯ ಪದಾಧಿಕಾರಿಗಳ ನೇಮಕ ಹಾಗೂ ಸದಸ್ಯತ್ವ ಅಭಿಯಾನ ಕಾರ್ಯಕ್ರಮದಲ್ಲಿ ಮಹಾಸಭಾಧ್ಯಕ್ಷರಿಗೆ ಸನ್ಮಾನ. |
| 11.06.2022 ಶ್ರೀಮಾತಾ ಮಾಂಗಲ್ಯ ಮಂದಿರ, ಶಿವಮೊಗ್ಗ | ಶಿವಮೊಗ್ಗ ಜಿಲ್ಲಾ ಬ್ರಾಹ್ಮಣ ಸಭಾ ವತಿಯಿಂದ ಮಹಾಸಭಾ ಅಧ್ಯಕ್ಷರಿಗೆ ಅಭೂತಪೂರ್ವ ಸನ್ಮಾನ.<br>ವಿನೋಬನಗರದ ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಸ್ಥೆಗೆ ಅಧ್ಯಕ್ಷರ ಭೇಟಿ. |
| 30.07.2022 ಕಿಂಚ ಸಭಾಂಗಣ, ಭಾರತೀಯ ವಿದ್ಯಾಭವನ, ಬೆಂಗಳೂರು | ಮಹಾಸಭೆಯ ಕಲೆ ಮತ್ತು ಸಾಂಸ್ಕೃತಿ ವೇದಿಕೆ ಉದ್ಘಾಟನೆ |
| 02.07.2022 ದ್ವಾರ ಸಮುದ್ರ ರೆಸಾರ್ಟ್, ಬೇಲೂರು | ಮಹಾಸಭೆಯ ಪದಾಧಿಕಾರಿಗಳ ಸಭೆ<br>ವಿಪ್ರ ಸಮಾವೇಶದಲ್ಲಿ ಅಧ್ಯಕ್ಷರಿಗೆ ಸನ್ಮಾನ |
| ಬೆಂಗಳೂರು | ಪ್ರತಿಭಾ ಪುರಸ್ಕಾರ ಸಮಾರಂಭ – ಜೆ.ಪಿ.ನಗರ, 7ನೇ ಹಾಗೂ 8ನೇ ಹಂತದ ತ್ರಿಮತಸ್ಥ ವಿಪ್ರ ವೃಂದದವರಿಂದ |
| ಬೆಂಗಳೂರು | ಹೊಯ್ಸಳ ಕರ್ನಾಟಕ ಸಂಘದ ದಿನಾಚರಣೆಯಲ್ಲಿ ಮಾನ್ಯ ಅಧ್ಯಕ್ಷರಿಗೆ ಸನ್ಮಾನ –<br>ಪ್ರತಿಭಾ ಪುರಸ್ಕಾರ |
| 04.08.2022 ಗಾಯತ್ರಿ ಭವನ, ಬೆಂಗಳೂರು | ವ್ಯಾಪಾರಿ ಮತ್ತು ಕೈಗಾರಿಕ ಕ್ಷೇತ್ರದ ಪ್ರಮುಖರ ಜೊತೆ ಸಮಾಲೋಚನೆ |
| ಮಾನ್ಯ ಅಧ್ಯಕ್ಷರು ಮತ್ತು ಪದಾಧಿಕಾರಿಗಳು | ಚಾತುರ್ಮಾಸ್ಯ ನಿರತ ಯತಿವರ್ಯರಿಗೆ ಮಹಾಸಭೆಯಿಂದ ಭಿಕ್ಷಾ ಸಮರ್ಪಣೆ |
| 13.08.2022 ಶ್ರೀ ಶೃಂಗೇರಿ ಶಂಕರಮಠದಿಂದ ಗಾಯತ್ರಿ ಭವನದವರೆಗೆ | ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ ಮಹಾಸಭಾದಿಂದ ಬೈಕ್ ರ್‍ಯಾಲಿ |

| ದಿನಾಂಕ – ಸ್ಥಳ | ಕಾರ್ಯಕ್ರಮ |
|---|---|
| 19.08.2022 ಶ್ರೀಮಾತಾ ಮಾಂಗಲ್ಯ ಮಂದಿರ, ಶಿವಮೊಗ್ಗ | ಶಿವಮೊಗ್ಗದಲ್ಲಿ ಮಹಾಸಭೆಯ ಕೇಂದ್ರ ಕಾರ್ಯಕಾರಿಣಿ ಸಭೆ<br>"ವಿಪ್ರಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ"ದಲ್ಲಿ ಭಾಗಿ |
| | ರಾಯಚೂರಿನಲ್ಲಿ ಅದ್ದೂರಿ ಪ್ರತಿಭಾ ಪುರಸ್ಕಾರ, ವಿಪ್ರಶ್ರೀ ಪ್ರಶಸ್ತಿ ಪ್ರದಾನ |
| 28.08.2022 ತೀರ್ಥಹಳ್ಳಿ ಶ್ರೀ ಅರಗ ಜ್ಞಾನೇಂದ್ರ, ಮಾನ್ಯ ಗೃಹ ಸಚಿವರು. | ಮಾನ್ಯ ಅಧ್ಯಕ್ಷರಿಗೆ ತೀರ್ಥಹಳ್ಳಿ ಬ್ರಾಹ್ಮಣ ಸಂಘವು ಏರ್ಪಡಿಸಿದ್ದ ಅಭಿನಂದನಾ ಸಮಾರಂಭ. |
| 26.06.2022 ಸಾಗರ ಕಾನುಕಪಪ್ಪ | ಸಾಕರ ವಿಪ್ರ ಮುಖಂಡರೊಡನೆ ಸಮಲೋಚನಾ ಸಭೆ ಮಾಜಿ ಶಾಸಕ ಹಿರಿಯ ಮುಖಂಡ ಎಲ್.ಬಿ. ತಿಮ್ಮಪ್ಪ ಹೆಗಡೆ 'ನಾನು' ಆತ್ಮಕಥನ ಬಿಡುಗಡೆ ಸಮಾರಂಭ |
| ಕಲ್ಬುರ್ಗಿ | ಕಲ್ಬುರ್ಗಿಯಲ್ಲಿ ಸಂಘಟನಾ ಸಭೆ–ಮಾನ್ಯ ಅಧ್ಯಕ್ಷರಿಗೆ ಸನ್ಮಾನ |
| | ಮಹಾಸಭಾಧ್ಯಕ್ಷರಿಂದ ಶರಾವತಿ ಮೂಲ ಅಂಬುತಿರ್ಥ ಕ್ಷೇತ್ರಕ್ಕೆ ಭೇಟಿ ನೀಡಿ ಅಲ್ಲಿ ಪುನರ್ ನಿರ್ಮಾಣ ಕಾರ್ಯಗಳನ್ನು ವೀಕ್ಷಿಸಿದರು. |
| 02.09.2022 ವಿದುರಾಶ್ವತ್ಥ | ಗೌರೀಬಿದನೂರಿನಿಂದ ವಿದುರಾಶ್ವತ್ಥಕ್ಕೆ "ಸಮನ್ವಯ–ಸಾಮರಸ್ಯದ ಸದ್ಭಾವನಾ ಯಾತ್ರೆ. |
| 01.09.2022 ಗಾಯತ್ರಿ ಭವನ, ಬೆಂಗಳೂರು | ರಾಜ್ಯ ಯುವ ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ. |
| ಬೆಂಗಳೂರು | ಕೂಟ ಮಹಾಜಗತ್ತು ಕೇಂದ್ರ ಸಂಸ್ಥೆಯ ಮಹಾ ಅಧಿವೇಶನದಲ್ಲಿ ಮಹಾಸಭಾಧ್ಯಕ್ಷರಿಗೆ ಸನ್ಮಾನ |
| ಮೈಸೂರು | ಮೈಸೂರಿನಲ್ಲಿ ಮಹಾಸಭಾ ಅಧ್ಯಕ್ಷರಿಗೆ ಬೆಳ್ಳಿ ಕಿರೀಟ ಗೌರವ. |
| ಬೆಂಗಳೂರು | ಬಸವನಗುಡಿ ಬ್ರಾಹ್ಮಣ ಸಭಾದಿಂದ ಸಾಧಕರಿಗೆ ಪ್ರಶಸ್ತಿ. |

| ದಿನಾಂಕ – ಸ್ಥಳ | ಕಾರ್ಯಕ್ರಮ |
|---|---|
| ದಕ್ಷಿಣ ಕನ್ನಡ | ಉಡುಪಿ ಕೃಷ್ಣಮಠಕ್ಕೆ ಅಧ್ಯಕ್ಷರಿಗೆ ಭೇಟಿ. ದಕ್ಷಿಣ ಕನ್ನಡ ಜಿಲ್ಲಾ ಬ್ರಾಹ್ಮಣ ಸಂಘದ ಕಚೇರಿ ಉದ್ಘಾಟನೆ–ಮಹಾಸಭಾಧ್ಯಕ್ಷರಿಗೆ ಸನ್ಮಾನ. |
| 15.102022 ಚಿತ್ರಕಲಾ ಪರಿಷತ್ತು, ಬೆಂಗಳೂರು | ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ವನ್ಯ ಜೀವಿಗಳ ಛಾಯಾಚಿತ್ರ ಪ್ರದರ್ಶನ ವೀಕ್ಷಣೆ. |
| 21.10.2022 ಅರಸೀಕೆರೆ | ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳೊಡನೆ ಸಭೆ. |
| ಹೊರನಾಡು, ಕಳಸ ತಾ॥ | ದೈವ ಬಲದಿಂದ ಉತ್ತಮ ಕೆಲಸ ಸಾಧ್ಯ– ಹೊರನಾಡು ಆದಿಶಕ್ತ್ಯಾತ್ಮಕ ಶ್ರೀ ಅನ್ನಪೂರ್ಣೇಶ್ವರಿ ದೇವಾಲಯದಲ್ಲಿ ಶ್ರೀ ಮಾಹಾಮಾತೆಯ ಪುನಃ ಪ್ರತಿಷ್ಠಾ ಸ್ವರ್ಣ ಮಹೋತ್ಸವ ಕಾರ್ಯಕ್ರಮ. |
| 29.10.2022 ಗಾಯತ್ರಿ ಭವನ, ಬೆಂಗಳೂರು | ರಾಜ್ಯ ಮಹಿಳಾ ವಿಭಾಗದ ಪದಾಧಿಕಾರಿಗಳ: ಪದಗ್ರಹಣ ಸಮಾರಂಭ. |
| ಶ್ರೀ ರಾಧಾಕೃಷ್ಣ ಸಭಾ ಭವನ, ಕಾರ್ಕಳ | ಉಡುಪಿ ಜಿಲ್ಲಾ ವಿಪ್ರ ಸಮ್ಮೇಳನ–2022 |
| 30.10.2022 ಸೆಂಚುರಿ ಕ್ಲಬ್ – ಬೆಂಗಳೂರು | ಬ್ರಾಹ್ಮಣ ಸಮಾಜದ ಬಲ ವರ್ಧನೆ – ವಿಪ್ರ ಗಣ್ಯರ ಸಹಯೋಗ, ವಿಪ್ರ ಪ್ರಮುಖರ ಸಮಾಲೋಚನಾ ಸಭೆ. |
| ಬೆಂಗಳೂರು | ಶ್ರೀ ಹನುಮಗಿರಿ ಬ್ರಾಹ್ಮಣ ಸಭಾ ವಾಷಿಕೋತ್ಸವ ಸಮಾರಂಭ.<br>ಗುರುಪರಂಪರ 15ನೆ ವರ್ಷದ ಸಂಭ್ರಮಗಳಲ್ಲಿ ಭಾಗಿ. |
| 01.11.2022 ಗಾಯತ್ರಿ ಭವನ | ಮಹಾಸಭೆಯಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ. |
| 20.11.2022 | ಮಹಾಸಭೆಯಲ್ಲಿ ವಿಜೃಂಭಣೆಯ ಪ್ರತಿಭಾ ಪುರಸ್ಕಾರ ಸಮಾರಂಭ. –<br>ಸ್ವಾಮಿ ವಿರೇಶಾನಂದ ಸರಸ್ವತಿಯವರು,<br>ಶಿಕ್ಷಣ ತಜ್ಞ ಡಾ। ಗುರುರಾಜ ಕರ್ಜಗಿ,<br>ಪರಮಾನಚಿದ ಸ್ವಾಮೀಜಿ,<br>ಕ್ರಿಕೆಟಿಗ ವಿಜಯ್ ಭಾರದ್ವಾಜ್ |

| ದಿನಾಂಕ – ಸ್ಥಳ | ಕಾರ್ಯಕ್ರಮ |
|---|---|
| 26.11.2022 ಭಾರತೀಯ ವಿದ್ಯಾಭವನ ಬೆಂಗಳೂರು | ಬ್ರಾಹ್ಮಣ ಉಪಪಂಗಡಗಳು ಹಾಗೂ ಸಂಘಗಳ ಅಧ್ಯಕ್ಷರು/ಕಾರ್ಯದರ್ಶಿಗಳ ಸಭೆ. |
| ಶ್ರೀಮಾತಾ ಮಾಂಗಲ್ಯ ಮಂದಿರ, ಶಿವಮೊಗ್ಗ. | ಶಿವಮೊಗ್ಗ ಜಿಲ್ಲಾ ಮಹಿಳಾ ಘಟಕ ಉದ್ಘಾಟನಾ ಸಮಾರಂಭದಲ್ಲಿ ಅಧ್ಯಕ್ಷರು. |
| ಗಾಯತ್ರಿ ಭವನ, ಬೆಂಗಳೂರು | ಶುಕ್ಲ ಯಜುರ್ವೇದಿಗಳ ಸಂಘಟನೆಗೆ ರಾಜ್ಯಮಟ್ಟದ ಮೊದಲ ಬೃಹತ್ ಸಮಾವೇಶಕ್ಕೆ ನಿರ್ಧಾರ –ಸಮಾಲೋಚನಾ ಸಭೆ. |
| ಬೆಳಗಾವಿ | ಬೆಳಗಾವಿಯಲ್ಲಿ ಸಮಾಜ ಸಂಘಟನೆ ಬಗ್ಗೆ ಚರ್ಚೆ. ಕಿತ್ತೂರು ಕರ್ನಾಟಕ ಭಾಗದ ಬ್ರಾಹ್ಮಣ ಸಮಾವೇಶ ಮಾಡುವುದು ಸೇರಿದಂತೆ ಇನ್ನಿತರ ವಿಷಯಗಳ ಬಗ್ಗೆ ಚರ್ಚೆ ನಡೆಸಿದರು. |
| ಬೆಂಗಳೂರು | ಶ್ರೀರಾಮ ಸೇನೆಯ ಮುಖ್ಯಸ್ಥರಾದ ಶ್ರೀ ಪ್ರಮೋದ್ ಮುತಾಲಿಕ್ ಅವರು ಮಹಾಸಭಾ ಅಧ್ಯಕ್ಷರನ್ನು ಭೇಟಿ ಮಾಡಿದರು. |
| 19.12.2022 ಶಿವಮೊಗ್ಗ | ಶಿವಮೊಗ್ಗ ನ್ಯಾಷನಲ್ ಲಾ ಕಾಲೇಜು ಅಮೃತ ಮಹೋತ್ಸವ ಸಮಾರಂಭ. |
| 19.12.2022 | ಮಹಾಸಭಾವ ಶಿವಮೊಗ್ಗ ಜಿಲ್ಲಾ ಮಹಿಳಾ ಘಟಕ ಉದ್ಘಟನಾ ಸಮಾರಂಭ. |
| 26.12.2022 ದ. ಕನ್ನಡ | ಮಹಸಭಾದ ದ.ಕ. ಘಟಕ ಆಯೋಜಿಸಿದ ನಮ್ಮವರು ನಮ್ಮ ಹೆಮ್ಮೆ ಕಾರ್ಯಕ್ರಮ. |
| 25.12.2022 ಅರಸೀಕರೆ | ವಿಪ್ರನೌಕರರ ಸಂಘದ ದಶಮಾನೋತ್ಸವ ಸಮಾರಂಭ. |

## ಸಕಲ ಸೌಲಭ್ಯಗಳ ಮಾದರಿ ಮಹಿಳಾ ವಸತಿ ನಿಲಯ

# ನಮ್ಮ ಹೆಮ್ಮೆಯ ವಿದ್ಯಾವಾಸಿನಿ



2022ನೇ ಸಾಲಿನ ವರ್ಷ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಗೆ ಚರಿತ್ರಾರ್ಹ ಸಮಯ. ಈ ಅವಧಿ ನಾಯಕತ್ವಕ್ಕೆ ಅತ್ಯಧಿಕ ಮತಗಳಿಂದ ಆಕ್ಕೆಯಾಗಿ ಬಂದವರು ನಮ್ಮೆಲ್ಲರ ನೆಚ್ಚಿನ ಶ್ರೀಯುತ ಅಶೋಕ ಹಾರನಹಳ್ಳಿಯವರು. ಇವರು ಮಹಾಸಭೆಯ ಸದಸ್ಯರ ಸರ್ವತೋಮುಖ ಅಭಿವೃದ್ಧಿ ಕಾರ್ಯಗಳತ್ತ ಗಮನಹರಿಸಿದ್ದಾರೆ.

ಸುಮಾರು ವರ್ಷಗಳಿಂದ ಆಗಬೇಕಾಗಿದ್ದ ಅಭಿವೃದ್ಧಿ ಕಾರ್ಯಕ್ರಮ ನೋಡನೋಡುತ್ತಿದ್ದಂತೆ ಪೂರ್ಣಗೊಳ್ಳುತ್ತಿದೆ. ಕರೋನಾ ಕಾರಣಗಳಿಂದ ಕಡಿಮೆ ಆಗಿದ್ದ ವಸತಿ ನಿಲಯದ ವಿದ್ಯಾರ್ಥಿನಿಯರ ಸಂಖ್ಯೆಯು ಈಗ 175 ಸ್ಥಾನಗಳು ಭರ್ತಿಯಾಗಿ ಈಗ 50ಕ್ಕೂ ಹೆಚ್ಚು ವಿದ್ಯಾರ್ಥಿನಿಯವರು ವಸತಿಗಾಗಿ ಸರಧಿಯಲ್ಲಿ ಕಾಯುವಂತಾಗಿರುವುದು ನಿಲಯಕ್ಕೆ ಹೆಚ್ಚಿನ ಬೇಡಿಕೆಗೆ ಸಾಕ್ಷಿ.

ಮಾನ್ಯ ಅಧ್ಯಕ್ಷರು ಸಮರ್ಥ ನಾಯಕರಾಗಿ ಅಧಿಕಾರ ಸ್ವೀಕರಿಸಿದ ಕೆಲವೇ ದಿನಗಳಲ್ಲಿ ಅನೇಕ ಸಮಿತಿಗಳನ್ನು ರಚಿಸಿ ಸೇವಾ ಮನೋಭಾವ ಇರುವ ಬಾಂಧವರಿಗೆ ಬ್ರಾಹ್ಮಣರ ಅಭಿವೃದ್ಧಿ ಕಾರ್ಯದ ಸೇವೆಗೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಮುಖ್ಯವಾಗಿ ವಿದ್ಯಾರ್ಥಿನಿ ನಿಲಯದ ಸಮಿತಿಯ ಸದಸ್ಯರು ತ್ರಿಕರಣಪೂರ್ವಕವಾಗಿ ಸೇವೆಗೆ ತೊಡಗಿಸಿಕೊಂಡಿದ್ದಾರೆ.

### ಆಡಳಿತಾತ್ಮಕ ಬದಲಾವಣೆ :

ವಿದ್ಯಾರ್ಥಿನಿ ನಿಲಯದ ದಾಖಲಾತಿಗೆ ಗಾಯತ್ರೀ ಭವನದ ಕಾರ್ಯಾಲಯದ ಸಮಯದಲ್ಲಷ್ಟೇ ಸಂಪರ್ಕಿಸಬೇಕಾಗಿತ್ತು. ಈಗ ದಾಖಲಾತಿಯ ಪ್ರಕ್ರಿಯೆಯನ್ನು ಗಾಯತ್ರಿ ಭವನದಿಂದ ವರ್ಗಾಯಿಸಿ ವಿದ್ಯಾರ್ಥಿನಿ ನಿಯಲದಲ್ಲಿಯೇ ಅರ್ಜಿ ಸಲ್ಲಿಸಿ ಸಂದರ್ಶನದ ಮೂಲಕ ಅತ್ಯಂತ ಅವಶ್ಯಕತೆಯಿರುವ ವಿದ್ಯಾರ್ಥಿನಿಯರಿಗೆ ಅವಕಾಶ ಸಿಗುವಂತೆ ಮಾಡಿ ದಾಖಲಾತಿಯ ಪ್ರಕ್ರಿಯೆಯನ್ನು ಸುಲಭಗೊಳಿಸಲಾಗಿದೆ. ಮಾಸಿಕ ಶುಲ್ಕ ಪ್ರತಿ ತಿಂಗಳೂ ನಗದು ರೂಪದಲ್ಲಿ ಕಟ್ಟಬೇಕಿತ್ತು. ಈಗ ನಗದಿನ ಗೋಜಿಲ್ಲದೆ ಡಿಜಿಟಲೀಕರಣವಾಗಿದೆ.

### ಸುಣ್ಣ ಬಣ್ಣ :

ವಿದ್ಯಾರ್ಥಿನಿ ನಿಲಯದ ಕಟ್ಟಡ ಸುಮಾರು 9 ವರ್ಷವಾಗಿದ್ದರೂ ಸಾಕಷ್ಟು ಹಾನಿಗೊಳಗಾಗಿತ್ತು. ಪೂರ್ತಿ ಕಟ್ಟಡವನ್ನು ಎಲ್ಲ ರೀತಿಯಲ್ಲಿಯೂ ನವೀಕರಿಸಿ ಪ್ಲಂಬಿಂಗ್ ಹಾಗೂ ಎಲೆಕ್ಟ್ರಿಕಲ್ ರಿಪೇರಿ ಮಾಡಿ, ಎಲ್ಲಾ ಕಿಟಕಿಗಳ ಮೇಲೆ ನೀರು ಬಾರದಂತೆ, ಚಜ್ಜ ಕವರಿಂಗ್ ಹಾಕಿ, ಕಟ್ಟಡಕ್ಕೆ ಹೊಸ ಬಣ್ಣ ಮಾಡಿಸಿ, ಹೊಸದಂತೆ ಕಾಣುವಂತೆ ಮಾಡಲಾಗಿದೆ.

### ಹೆಚ್ಚಿದ ಸೌಲಭ್ಯಗಳು :

ವಿದ್ಯಾರ್ಥಿನಿಯರಿಗೆ ಪ್ರತಿದಿನ ಸ್ನಾನಕ್ಕೆ ಬಿಸಿನೀರಿನ ವ್ಯವಸ್ಥೆ ಎಲ್ಲಾ ರೀತಿಯಲ್ಲಿಯೂ ಇದೆ. ಸೋಲರ್ ಹೀಟರ್ ಎಲೆಕ್ಟ್ರಿಕ್ ಗೀಸರ್, ಗ್ಯಾಸ್ ಗೀಸರ್ ಸಹ ಸುಸ್ಥಿತಿಯಲ್ಲಿದೆ. ಈಗಷ್ಟೆ ಸೋಲರ್ ವಾಟರ್ ಹೀಟರ್ ನಿಲ್ಲದೆ ನೀರು ಒದಗುವಂತೆ ಹೊಸ ಮೋಟಾರುಗಳನ್ನು ಪೈಪ್‌ಗಳನ್ನು ಹಾಕಿಸಿ ಸಿದ್ಧಪಡಿಸಿದೆ. ವಿದ್ಯುತ್ ಕಡಿತವಾದಾಗ ಅನುಕೂಲವಾಗುವಂತೆ ಜನರೇಟರ್ ಬ್ಯಾಕ್ ಅಪ್ ವ್ಯವಸ್ಥೆಯೂ ಇದೆ.



ವಿದ್ಯಾರ್ಥಿನಿಯರಿಗೆ ಎಲ್ಲ ಸೇವೆ ಸೌಲಭ್ಯಗಳೂ ಉತ್ತಮವಾಗಿ ಸದಾಕಾಲ ಲಭಿಸಬೇಕೆಂಬ ಆಶಯದಿಂದ ಅನುಭವಸ್ಥ ಸಿಬ್ಬಂದಿಗಳನ್ನು ನೇಮಿಸಲಾಗಿದೆ.

ಎಲ್ಲ ಆಧುನಿಕ ಸೌಲಭ್ಯದೊಂದಿಗೆ ವಿದ್ಯಾರ್ಥಿನಿಯರ ಸರ್ವತೋಮುಖ ಅಭಿವೃದ್ಧಿಗೆ ಅನುವು ಮಾಡಲಾಗಿದೆ. ಈ ನಿಟ್ಟಿನಲ್ಲಿ ವಸತಿನಿಲಯದ ಸಮಿತಿಯ ಸದಸ್ಯರು ದಾನಿಗಳನ್ನು ಗುರುತಿಸಿ 15 ಗಣಕಯಂತ್ರಗಳನ್ನು, ಸ್ಮಾರ್ಟ್ ಟಿ.ವಿ. ಮತ್ತು ಎಲ್ಲಾ ಹುಡಿಗಿಯರಿಗೂ ಫೈಬ್ರೆ ಆಕ್ಟ್ ನಿಂದ ಉಚಿತ ವೈಫೈ ಸೌಲಭ್ಯ ಕಲ್ಪಿಸಲಾಗಿದೆ.

### ಶುಚಿ ರುಚಿ ಆಹಾರ :

ಸಾಧನೆಗೆ ಶರೀರದ ಆರೋಗ್ಯ ಬಹುಮುಖ್ಯ. ಶರೀರ ಪೋಷಣೆಗೆ ವಿದ್ಯಾರ್ಥಿನಿ ನಿಯಲದಲ್ಲಿ ನುರಿತ ಬಾಣಸಿಗರಿಂದ ಅತ್ಯಂತ ಶುಚಿ ಹಾಗೂ ರುಚಿಯಾದ ವಿಧವಿಧವಾದ ಪೌಷ್ಠಿಕ ಹಾಗೂ ಸಾತ್ವಿಕ ಆಹಾರ ಪ್ರತಿದಿನ ತಯಾರಾಗುತ್ತಿದೆ.

### ಭಜನೆ–ಯೋಗ–ವ್ಯಾಯಾಮ–ಕ್ರೀಡೆ :



ಇದಕ್ಕೆ ಪೂರಕವಾಗಿ ಮಾನಸಿಕ ಸದೃಢತೆಗೆ ಪ್ರತಿದಿನ ಸಂಜೆ ಭಜನೆ ಕಾರ್ಯಕ್ರಮ ನಡೆಯುತ್ತದೆ. ಶಾರೀರಕ ಹಾಗೂ ಮಾನಸಿಕ ಸದೃಢತೆಗೆ ಪುಷ್ಠಿಯಾದ ಆಹಾರವಷ್ಟೇ ಅಲ್ಲದೆ ವ್ಯಾಯಾಮವೂ ಮುಖ್ಯ ಪಾತ್ರವಹಿಸುತ್ತದೆ. ವಸತಿ ನಿಲಯದಲ್ಲಿ ಪ್ರತಿದಿನ ಯೋಗಾಭ್ಯಾಸ, ಟಿ.ಟಿ. ಥ್ರೆಡ್ ಮಿಲ್ ಹಾಗೂ ಈ ವಿವಿಧ ಕ್ರೀಡೆಗಳಿಗೆ (ಬ್ಯಾಡ್‌ಮೆಂಟನ್, ಕೇರಂ, ಥ್ರೋಬಾಲ್) ಅವಕಾಶ ಕಲ್ಪಿಸಲಾಗಿದೆ.

ಎಲ್ಲಾ ವ್ಯವಸ್ಥೆಯಿಂದ ವಿದ್ಯಾರ್ಥಿನಿಯರ ಶರೀರ, ಮನಸ್ಸು, ಉಲ್ಲಾಸ; ಉತ್ಸಾಹದಿಂದ ಕೂಡಿ ಪ್ರತಿದಿನ ಉತ್ಸಾಹವಾಗಿದೆ. ಇದರಿಂದ ವಿದ್ಯಾರ್ಥಿನಿಯರು ಚೆನ್ನಾಗಿ ಓದುವುದಷ್ಟೇ ಅಲ್ಲದೆ ವ್ಯವಸ್ಥಿತ ದಿನಚರಿಯಂತೆ ಶಿಸ್ತಿನ ಜೀವನ ರೂಢಿಸಿಕೊಳ್ಳುತ್ತಿದ್ದಾರೆ.

### ಸುರಕ್ಷತೆ :

ಮತ್ತೊಂದು ಪ್ರಮುಖ ಅಂಶವೆಂದರೆ ವಸತಿ ನಿಲಯದ ಸಹಪಾಠಿಗಳ ಸುರಕ್ಷತೆ ದೃಷ್ಟಿಯಿಂದ ನೂತನ ಟೆಕ್ನಾಲಜಿವುಳ್ಳ ಫಿಂಗರ್ ಪ್ರಿಂಟ್ ಫೇಸ್ ರೆಕಗ್ನೈಝ್ ಬಯೋಮೆಟ್ರಿಕ್ಸ್ ಹಾಗೂ ಫೈಬರ್ ಆಯ್ಕೆ ಸಹಿತ ಹೈ ಎಂಡ್ ಸಿ.ಸಿ.ಟಿ.ವಿ. ಕ್ಯಾಮರ ಅಳವಡಿಸಲಾಗಿದೆ.

### ಹಬ್ಬ ಹರಿದಿನಗಳ ಆಚರಣೆ :



ನಮ್ಮ ಸಂಸ್ಕೃತಿಯ ಪ್ರತೀಕವಾದ ಎಲ್ಲ ಹಬ್ಬಹರಿದಿನಗಳನ್ನು ತಪ್ಪದೆ ಆಚರಿಸಿಕೊಂಡು ಬರಲಾಗುತ್ತಿದೆ. ಜ್ಯೋತಿರ್ಭೀಮೇಶ್ವರ ವ್ರತದ ಶಿವಪಾರ್ವತಿಯರ ಕೆಮ್ಮಣ್ಣಿನ ಬೊಂಬೆಗಳಾಗಲಿ, ವರಸಿದ್ಧಿವಿನಾಯಕ ವ್ರತದ ಮಣ್ಣಿನ ಗಣಪತಿ, ಸ್ವರ್ಣಗೌರಿಯನ್ನು ವಿದ್ಯಾರ್ಥಿನಿಯರು ತಾವೇ ತಯಾರಿಸಿ, ಅಲಂಕರಿಸಿ, ಪೂಜಿಸಿ ಸಂಭ್ರಮಿಸುತ್ತಿದ್ದಾರೆ.

ಸ್ವರ್ಣಗೌರಿ ಹಬ್ಬದ ಪ್ರಯುಕ್ತ ವಿದ್ಯಾಭ್ಯಾಸದ ಸಲುವಾಗಿ ಮನೆಯಿಂದ ದೂರಬಂದು ವಿದ್ಯಾರ್ಥಿನಿಲಯದಲ್ಲಿರುವ ಎಲ್ಲ ಹೆಣ್ಣುಮಕ್ಕಳಿಗೂ ಹಾಗೂ ಸಿಬ್ಬಂದಿಗೂ ಮಾನ್ಯ ಸಮಿತಿಯು ಸದಸ್ಯರು ಬಳೆ, ದಕ್ಷಿಣೆ, ಬಾಗಿನಗಳನ್ನು ನೀಡಿ ಗೌರವಿಸಿದಾಗ ಎಲ್ಲರಿಗೂ ತಮ್ಮ ತವರಿನಲ್ಲಿಯೇ ಇರುವ ಭಾವ ಮನತುಂಬಿತ್ತು.



ವಿಶ್ವವಿಖ್ಯಾತ ದಸರಾ ಹಬ್ಬದ ಒಂಭತ್ತು ದಿನದ ಬೊಂಬೆ ಹಬ್ಬ ಆಚರಿಸಿ, ಪ್ರತಿದಿನ ಪೂಜೆ, ನೈವೇದ್ಯ, ಭಜನೆಯನ್ನು ನಡೆಸಿದ ಹಬ್ಬ ವಾತಾವರಣ ನಿಜಕ್ಕೂ ಸಂಭ್ರಮವಾಗಿತ್ತು. ಸರಸ್ವತಿಯ ಆರಾಧನೆ ಮಾಡಿ ಎಲ್ಲ ಕಲಾವಿದೆಯರು ಕಲಾಸೇವೆಯನ್ನು ಭಗವತಿಗೆ ಅರ್ಪಿಸಿ ಕೃತಾರ್ಥರಾದರು. ಸಮಿತಿಯ ಮಾನ್ಯ ಸದಸ್ಯರು ವಿದ್ಯಾರ್ಥಿನಿಯರ ಶ್ರದ್ಧೆ–ಭಕ್ತಿಗೆ ಮನಸೋತು ಒಂದು ಸಂಜೆ ಎಲ್ಲರಿಗೂ ವಿಶೇಷ ಉಪಹಾರದ ವ್ಯವಸ್ಥೆ ಮಾಡಿದ್ದರು.

**ಕೋಟಿ ಕಂಠ ಗಾಯನ :**

ನಮ್ಮ ಹೆಮ್ಮೆಯ ನಾಡಹಬ್ಬವಾದ ರಾಜ್ಯೋತ್ಸವ ದಿನದಂದು ಮಾತೃಭೂಮಿಗೆ, ಮಾತೃಭಾಷೆಗೆ ಕೋಟಿಕಂಠ ಗಾಯನದ ಮೂಲಕ ನಾಡ ಕವಿಗಳಿಗೆ ನಮನ ಸಲ್ಲಿಸಿದಾಗ ಸನ್ಮಾನ್ಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು, ಸಮಿತಿ ಸದಸ್ಯರು ಹಾಗೂ ಎಲ್ಲಾ ಹಿತೈಷಿಗಳೊಂದಿಗೆ ಕನ್ನಡಾಂಬೆಯ ಧ್ವಜವನ್ನು ಮುಗಿಲೆತ್ತರಕ್ಕೆ ಹಾರಿಸಿದಾಗ ಸಿಕ್ಕ ಆನಂದದ ಕ್ಷಣಗಳನ್ನು ಮರೆಯುವಂತಿಲ್ಲ.

ಕಾರ್ತಿಕ ಮಾಸದ ತುಳಸಿ ಹಬ್ಬದಂದು ದೀಪೋತ್ಸವವನ್ನು ಅದ್ದೂರಿಯಿಂದ ವೇದಿಕೆ, ಸಂಗೀತ ಆದಿಯಾಗಿ ತುಳಸಿ ಮಾತೆಯನ್ನು ಸ್ಥಾಪಿಸಿ ಅಲಂಕರಿಸಿ ಸುತ್ತಲೂ ದೀಪಗಳನ್ನು ಬೆಳಗಿಸಿದ ದೃಶ್ಯ ಮನಮೋಹಕವಾಗಿತ್ತು. ವಿದ್ಯಾರ್ಥಿನಿಯರು ದೀಪ, ನೃತ್ಯ, ದೇವರನಾಮಗಳ ಮೂಲಕ ಭಕ್ತಿ ಸಲ್ಲಿಸಿದರು. ಈ ಶುಭ ಸಂದರ್ಭದಲ್ಲಿ ಸಮಿತಿಯ ಸದಸ್ಯರು ಮಾನ್ಯ ಅಧ್ಯಕ್ಷರ ಸಲಹೆಯಂತೆ ಮಾತಾಜಿ ಅಮೃತಮಯಿಯವರನ್ನು ಆಹ್ವಾನಿಸಿ, ಎಲ್ಲ ವಿದ್ಯಾರ್ಥಿನಿಯರಿಗೆ ಅವರಿಂದ ಆಶೀರ್ವಚನದ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದರು.

**ಕಲರವಗಳ ಕಲರವ :**

ಈ ಸುಸಂದರ್ಭದಲ್ಲಿ ಸನ್ಮಾನ್ಯ ಅಧ್ಯಕ್ಷರು ವಸತಿ ನಿಲಯದ ಸಾಂಸ್ಕೃತಿಕ ತಂಡಕ್ಕೆ "ಸಾಂಸ್ಕೃತಿಕ ಕಲರವ" ಎಂದು ನಾಮಕರಣ ಮಾಡಿ ಹೆಣ್ಣುಮಕ್ಕಳಿಗೆ ಹೊಸ ದಿಸೆಯನ್ನು ತೋರಿದ್ದಾರೆ.

ಇದರ ಅಡಿಯಲ್ಲಿ ಈಗಾಗಲೇ "ನೃತ್ಯ ಕಲರವ", ಯೋಗ ಕಲರವ" ಪ್ರಾರಂಭವಾಗಿದೆ. ಇನ್ನೂ ಹಲವಾರು ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರಲು ಸಮಿತಿಯ ಸದಸ್ಯರು ಶ್ರಮಿಸುತ್ತಿದ್ದಾರೆ.



**ಸಮಿತಿಯ ಸದಸ್ಯರಿಗೆ ಅಭಿನಂದನೆ :**

ಒಂದು ವರ್ಷದಲ್ಲಿ ಈ ರೀತಿಯ ಅಪೂರ್ವ ಸಾಧನೆ ಮಾಡಿದ ವಿದ್ಯಾವಾಸಿನಿ ವಿಪ್ರ ಮಹಿಳಾ ವಸತಿ ನಿಲಯವು ಮುಂಬರುವ ದಿನಗಳಲ್ಲಿ ಇಡೀ ರಾಜ್ಯಕ್ಕೇ ಮಾದರಿಯಾದ ವಸತಿ ನಿಲಯವಾಗಿ ಹೊರಹೊಮ್ಮಲಿದೆ. ಈ ಅಪೂರ್ವ ಸಾಧನೆಗೆ ಕಾರಣರಾದ ವಿಪ್ರ ವಸತಿ ನಿಲಯದ ಸಮಿತಿ ಸದಸ್ಯರು ನಿಜಕ್ಕೂ ಅಭಿನಂದನಾರ್ಹರು.



# ಮಹಾಸಭಾ ರಾಜ್ಯ ಮಹಿಳಾ ವಿಭಾಗದ ಚಟುವಟಿಕೆಗಳ ಸಂಕ್ಷಿಪ್ತ ಮಾಹಿತಿ



ನಮ್ಮ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಹಿಳಾ ವಿಭಾಗದಲ್ಲಿ ಡಾಕ್ಟರ್ ಶುಭಮಂಗಳ ಸುನಿಲ್ ಅವರು ಜೂನ್ 11ನೇ ತಾರೀಕು ರಾಜ್ಯ ಸಂಚಾಲಕಿಯಾಗಿ ಜವಾಬ್ದಾರಿ ಸ್ವೀಕರಿಸಿದ ನಂತರ ನಡೆಸಿದಂತಹ ಕಾರ್ಯಕ್ರಮಗಳ ಸಂಕ್ಷಿಪ್ತ ಪರಿಚಯ.

- 150ಕ್ಕೂ ಹೆಚ್ಚಿನ ಮಹಿಳೆಯರೊಂದಿಗೆ ಗಾಯತ್ರಿ ಭವನದಲ್ಲಿ ಸಭೆ.
- ಈ ಸಭೆಯ ಆನ್‌ಲೈನ್ ಮತ್ತು ಪ್ರತ್ಯಕ್ಷ ಎರಡನ್ನು ಒಳಗೊಂಡಿತು
- ಉಚಿತ ಆರೋಗ್ಯ ಶಿಬಿರ, ರಕ್ತದಾನ ಶಿಬಿರ, ಆರೋಗ್ಯ ಶಿಬಿರ ಹಾಗೂ ರಕ್ತದಾನ ಶಿಬಿರ.
- ಬ್ರೆಸ್ಟ್ ಕ್ಯಾನ್ಸರ್ ಸ್ಕ್ರೀನಿಂಗ್ ಕ್ಯಾಂಪ್ ನಿರಾಮಯಿ ಡಾಕ್ಟರ್ ಹಾಗೂ ಲ್ಯಾಬ್ ನೊಂದಿಗೆ.
- ವೈಯಕ್ತಿಕ ಹಣಕಾಸು ಸಲಹೆ ತರಬೇತಿ ಶಿಬಿರ, ಫೈನಾನ್ಸಿಯಲ್ ಕನ್ಸಲ್ಟೆಂಟ್‌ಗಾಗಿ ಎಎಮ್ ಟ್ರೇನಿಂಗ್ ನೂರಕ್ಕೂ ಹೆಚ್ಚಿನ ಮಹಿಳೆಯರು ಪಾಲ್ಗೊಂಡಿದ್ದರು.
- ಹೆಚ್ ಡಿ ಎಫ್ ಸಿ ವತಿಯಿಂದ ಫೈನಾನ್ಸಿಯಲ್ ಕನ್ಸಲ್ಟೆಂಟ್ ಟ್ರೈನಿಂಗ್.
- ವೀಣಾ ವಾದನ ವಿದುಷಿ ಜ್ಯೋತಿ ಹಾಗೂ ದೀಪ್ತಿ ಅವರಿಂದ.
- ಗೌರಿ ಗಣೇಶ ಹಬ್ಬ ಅದ್ದೂರಿಯಾಗಿ ಆಚರಿಸಲಾಯಿತು.
- ವರಮಹಾಲಕ್ಷ್ಮಿ ಹಬ್ಬವನ್ನು ಎಲ್ಲಾ ಮಹಿಳೆಯರೊಂದಿಗೆ ಅದ್ದೂರಿಯಾಗಿ ಆಚರಿಸಲಾಯಿತು.
- ಇದೇ ಮೊದಲ ಬಾರಿಗೆ ಮಹಾ ಸಭಾದಿಂದ 'ಮನೆಗೊಂದು ಗೊಂಬೆ ದಸರಾ ಗೊಂಬೆ' ಅಂದರೆ ಪ್ರತಿಯೊಂದು ಮನೆಯಿಂದ ಒಂದು ಗೊಂಬೆಯಂತೆ ಅದನ್ನು ಸ್ವೀಕರಿಸಿ ಮಹಾಸಭೆಯ ಗಾಯತ್ರಿ ಭವನದಲ್ಲಿ ಇರಿಸಿ ದಸರಾ ಹಬ್ಬ ಆಚರಣೆ.
- ಪ್ರತಿಯೊಂದು ತಾಲೂಕಿನಲ್ಲೂ ಹಾಗೂ ಜಿಲ್ಲೆಗಳಲ್ಲೂ ಅವರವರ ಮನೆಯ ಹತ್ತಿರದಲ್ಲಿರುವ ದೇವಸ್ಥಾನದ ಶುಚಿತ್ವ ಕಾಪಾಡಲು ದೇವಸ್ಥಾನ ಶುಚಿಗೊಳಿಸುವ ಕಾರ್ಯಕ್ಷಮತೆಯನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುವುದು.
- ಮಾಸಿಕ ಮಹಿಳಾ ಮಾರುಕಟ್ಟೆ ಈ ಹೆಸರಿನ ಅಡಿಯಲ್ಲಿ ವಾಣಿಜ್ಯ ಪ್ರದರ್ಶನ ಹಾಗೂ ಮಳಿಗೆಯನ್ನು ಇದೇ ಡಿಸೆಂಬರ್ ತಿಂಗಳಲ್ಲಿ ಆಯೋಜಿಸಿ ಜನಗಳನ್ನು ಆಕರ್ಷಿಸುವಂತ ಕಾರ್ಯಕ್ರಮ.
- ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮಹಿಳಾ ವಿಭಾಗದ ಪದಗ್ರಹಣ ಕಾರ್ಯಕ್ರಮವನ್ನು 250 ಹೆಚ್ಚು ಮಹಿಳೆಯರು ಪಾಲ್ಗೊಂಡು ಯಶಸ್ವಿ ಕಾರ್ಯಕ್ರಮ.
- ಮಹಿಳೆಯರ ಸಬಲೀಕರಣಕ್ಕಾಗಿ ಸೆಲ್ಫ್ ಸ್ಪೋಕನ್ ಅಕಾಡೆಮಿ ವತಿಯಿಂದ ಇಂಗ್ಲಿಷ್ ಸ್ಪೀಕಿಂಗ್ ಕೋರ್ಸ್ ಅನ್ನು ಯಶಸ್ವಿಯಾಗಿ ಆಯೋಜಿಸಲಾಗಿತ್ತು.
- ಯುವ ಸಮುದಾಯಕ್ಕಾಗಿ ಕರಿಯರ್ ಡೆವಲಪ್ಮೆಂಟ್ ಇಂಗ್ಲಿಷ್ ಸ್ಪೀಕಿಂಗ್ ಹಾಗೂ ವ್ಯಕ್ತಿತ್ವ ವಿಕಸನ ಆಯೋಜನೆ.

**ನಮ್ಮ ಮುಂದಿನ ಕಾರ್ಯಕ್ರಮಗಳ ಪಟ್ಟಿ ಹೀಗಿವೆ.**

- ಮಹಿಳಾ ಸಮಾವೇಶ 2023ನೇ ಮಾರ್ಚ್ ಅಥವಾ ಏಪ್ರಿಲ್ ತಿಂಗಳಲ್ಲಿ ಆಯೋಜಿಸುವುದು.
- ರಾಜ್ಯಮಟ್ಟದಲ್ಲಿ ಉದ್ಯೋಗ ಮೇಳ ಆಯೋಜಿಸುವುದು.
- ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮಹಿಳಾ ವಿಭಾಗ ಹಾಗೂ ಒಂದು ಬ್ಯಾಂಕಿನ ಜೊತೆ ಟೈ ಅಪ್ ಮಾಡಿ ಸ್ಮಾಲ್ ಸ್ಕೇಲ್ ಬಿಸಿನೆಸ್ ಗೆ ಸಾಲ ಸೌಲಭ್ಯ ಮಾಡಿಕೊಡುವುದು.
- ಪರ್ಸನಾಲಿಟಿ ಡೆವಲಪ್ಮೆಂಟ್ ಹಾಗೆ ಬಿಸಿನೆಸ್ ರಿಲೇಟೆಡ್ ಜಾಬ್ ಓರಿಎಂಟೆಡ್ ಟ್ರೈನಿಂಗ್ ಅನ್ನು ಮತ್ತೆ ಮುಂದುವರಿಸುವುದು.
- ವ್ಯಕ್ತಿಗತ ಪ್ರತಿಭೆಗಳನ್ನು ಹುಡುಕಿ ಅವರುಗಳನ್ನು ಪಟ್ಟಿ ಮಾಡಿಸುವುದು.




- ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಾಧ್ಯಮದಲ್ಲಿಯು ವಿಪ್ರ ವ್ಯಾಪಾರೋದ್ಯಮದೊಡನೆ ಮಹಿಳಾ ವ್ಯಾಪಾರೋದ್ಯಮಿಗಳನ್ನು ಪರಸ್ಪರ ಸಂಪರ್ಕ ವ್ಯವಸ್ಥೆ.

- ಸೈಬರ್ ಸೆಕ್ಯೂರಿಟಿ ವಿಭಾಗವನ್ನು ತೆರೆದು ಅದರ ಅಡಿಯಲ್ಲಿ ಎಲ್ಲಾ ಮಹಿಳೆಯರಿಗೆ ಹಾಗೂ ಇತರರಿಗೆ ಸೈಬರ್ ಸೇಫ್ಟಿ ಮತ್ತು ಸೆಕ್ಯೂರಿಟಿಗೆ ಒಂದು ವೇದಿಕೆ ಮಾಡುವುದು.
- ಕಾನೂನು, ವೈದ್ಯಕೀಯ ಸಮಿತಿಗಳ ಸಭೆ ಮಾಡಿ ಎಲ್ಲ ಮಹಿಳೆಯರಿಗೆ ಹಾಗೂ ಇತರರಿಗೆ ಸೌಲಭ್ಯವನ್ನು ಒದಗಿಸುವುದು.
- ಮಾಸಿಕ ಮಹಿಳಾ ಮಾರುಕಟ್ಟೆ ಪ್ರತಿ ತಿಂಗಳು ಎಲ್ಲ ತಾಲೂಕು/ಜಿಲ್ಲೆಗಳಲ್ಲಿ ನಡೆಸುವುದು ಹಾಗೂ ಅದರಲ್ಲಿ ಒಂದು ಭಾಗವನ್ನು ಮಹಾಸಭೆಗೆ ದೇಣಿಗೆಯಾಗಿ ಕೊಡುವುದು
- ಕಂಪನಿಗಳೊಂದಿಗೆ ಟೈ ಅಪ್ ಮಾಡಿ ಇಂಟರ್ನ್ಶಿಪ್ ಅನ್ನು ಮಹಾಸಭಾ ಮೂಲಕ ಕೊಡಿಸುವುದು.
- ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಯಾವುದೇ ಮಹಿಳೆಯರಿಗೆ ಸುರಕ್ಷತೆಗೆ ಮಹಾಸಭೆಯಡಿಯಲ್ಲಿ ಒಂದು ವೇದಿಕೆಯಾಗಿ ಪರಿವರ್ತಿಸುವುದು
- ಮಹಿಳಾ ಉದ್ಯಮಿಗಳಿಗೆ ತರಬೇತಿಗಳನ್ನು ಮಹಾಸಭೆಯಡಿಯಲ್ಲಿ ನಡೆಸುವುದು
- ಅಶಕ್ತ ಹಾಗೂ ಹಿಂದುಳಿದ ಮಹಿಳೆಯರಿಗೆ ಆರ್ಥಿಕ ಸಹಾಯ ಹಾಗೂ ವಿದ್ಯಾರ್ಥಿವೇತನ ನೀಡುವುದು.
- ಅಂತರ್ಜಾಲದಲ್ಲಿ ವಧು ವರ ಅನ್ವೇಷಣೆಯನ್ನು ಶುರು ಮಾಡುವುದು ಮಹಾಸಭೆಯ ಮಹಿಳಾ ವಿಭಾಗದಡಿಯಲ್ಲಿ.
- ಆನ್ಲೈನ್ ಈ ಕಾಮರ್ಸ್ ವೆಬ್ಸೈಟ್ ಮಾಡಿ ಅದರ ಅಡಿಯಲ್ಲಿ ಎಲ್ಲಾ ಮಹಾಸಭೆಯ ಎಲ್ಲಾ ಸದಸ್ಯರನ್ನು ಸಂಪರ್ಕಿಸುವುದು.
- ಲವ್ ಜಿಹಾದ್ ಬಗ್ಗೆ ಆನ್ಲೈನ್‌ನಲ್ಲಿ ಹಾಗೂ ಪ್ರತ್ಯೇಕವಾಗಿ ಜಾಗೃತಿ ಕಾರ್ಯಕ್ರಮಗಳನ್ನು ಅಲ್ಲಲ್ಲಿ ವ್ಯವಸ್ಥೆ ಆಡುವುದು.
- ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮಹಿಳಾ ವಿಭಾಗದ ಅಡಿಯಲ್ಲಿ ಯೂಟ್ಯೂಬ್ ಚಾನೆಲ್ ಶುರು ಮಾಡಿ ಅದರ ಅಡಿಯಲ್ಲಿ ಅವರವರ ಪ್ರತಿಭೆಯ ಅನುಸಾರವಾಗಿ ವಿಡಿಯೋಗಳನ್ನು ಮಾಡಿ ಅಪ್ಲೋಡ್ ಮಾಡುವುದು



- ನಮ್ಮ ಸಮಾಜದ ಆಚಾರ ವಿಚಾರಗಳನ್ನು ಕುರಿತು ವಿಡಿಯೋಗಳನ್ನು ಮಾಡಿ ಅಪ್ಲೋಡ್ ಮಾಡುವುದು



**ಶಿವಮೊಗ್ಗ ಜಿಲ್ಲಾ ಮಹಿಳಾ ವಿಭಾಗದ ಉದ್ಘಾಟನೆ**

## ರಾಜ್ಯ ಯುವ ವಿಭಾಗ

### ರಾಜ್ಯ ಯುವ ವಿಭಾಗದ ಸಂಚಾಲಕರಾಗಿ ಸಂದೀಪ್ ರವಿ ನೇಮಕ



ಮಹಾಸಭಾ ಅಧ್ಯಕ್ಷರಿಂದ
ಮಹಾಸಭಾದ ಯುವ ವಿಭಾಗದ ರಾಜ್ಯ ಸಂಚಾಲಕರಾಗಿ ವಕೀಲರಾದ ಶ್ರೀ ಸಂದೀಪ್ ಅವರನ್ನು ನೇಮಕ ಮಾಡಲಾಯಿತು.



### ವಿಪ್ರ ಯುವಜನ ಸಮಾವೇಶ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರ ಸನ್ಮಾನ ಸಮಾರಂಭಕ್ಕೆ ಪೂರಕವಾಗಿ ಅಧ್ಯಕ್ಷರ ಸಲಹೆ ಮತ್ತು ಮಾರ್ಗದರ್ಶನದಲ್ಲಿ ದಿನಾಂಕ 11.06.2023ರ ಶನಿವಾರದಂದು ಶ್ರೀಮಾತಾ ಮಾಂಗಲ್ಯ ಮಂದಿರ, ಬಿ.ಹೆಚ್. ರಸ್ತೆ, ಶಿವಮೊಗ್ಗದಲ್ಲಿ "ವಿಪ್ರ ಯುವಜನ ಸಮಾವೇಶ" ಆಯೋಜಿಲಾಗಿತ್ತು.

(ಹೆಚ್ಚಿನ ಮಾಹಿತಿ ಮುಂದಿನ ಸಂಚಿಕೆಯಲ್ಲಿ)

# ಕಲೆ ಮತ್ತು ಸಾಂಸ್ಕೃತಿಕ ವೇದಿಕೆ





ಅಖಿಲ ಕರ್ನಾಟಕ ಮಹಾಸಭಾ ವತಿಯಿಂದ "ಕಲೆ ಮತ್ತು ಸಾಂಸ್ಕೃತಿಕ ವೇದಿಕೆ" ಉದ್ಘಾಟನೆ 30.7.2022 ರಂದು ಭಾರತೀಯ ವಿದ್ಯಾ ಭವನದಲ್ಲಿ ನಡೆಯಿತು. ಸುರಮಣಿ ಪಂಡಿತ್ ಶ್ರೀ ಪ್ರವೀಣ್ ಗೋಡ್ಖಿಂಡಿ ದೀಪ ಬೆಳಗಿ ಉದ್ಘಾಟಿಸಿದರು. ಈ ಸಮಯದಲ್ಲಿ ಸುಪ್ರಸಿದ್ಧ ಸಂಗೀತಕಾರ ಚಿ॥ ರಾಹುಲ್ ಆರ್ ವೆಲ್ಲಾಲ್, ಶ್ರೀ ಕೆ.ಜಿ. ರಾಘವನ್ ಅಧ್ಯಕ್ಷರು ಭಾರತೀಯ ವಿದ್ಯಾ ಭವನ್, ಶ್ರೀ ಹೆಚ್.ಎನ್. ಸುರೇಶ್ ನಿರ್ದೇಶಕರು ಭಾರತೀಯ ವಿದ್ಯಾ ಭವನ್, ಶ್ರೀ ಅಶೋಕ್ ಹಾರನಹಳ್ಳಿ – ಅಧ್ಯಕ್ಷರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಶ್ರೀಮತಿ ನಾಗಲಕ್ಷ್ಮಿ ಕೆ. ರಾವ್ – ಸಂಚಾಲಕರು – ಕಲೆ ಮತ್ತು ಸಾಂಸ್ಕೃತಿಕ ವೇದಿಕೆ, ಎ.ಕೆ.ಬಿ.ಎಮ್.ಎಸ್. ಮತ್ತು ಸತೀಶ ಎನ್.ಎಸ್. ಸಹ ಸಂಚಾಲಕರು, ಕಲೆ ಮತ್ತು ಸಾಂಸ್ಕೃತಿಕ ವೇದಿಕೆ, ಎ.ಕೆ.ಬಿ.ಎಮ್.ಎಸ್. ಉಪಸ್ಥಿತರಿದ್ದರು.

ಚಿಕ್ಕಪೇಟೆ ವಿಧಾನ ಸಭೆ ಕ್ಷೇತ್ರ ಮತ್ತು ಶ್ರೀಮತಿ ಮೇದಿನಿ ಉದಯ್ ಗರುಡಾಚಾರ ಅವರುಗಳಿಗೆ ಎ.ಕೆ.ಬಿ.ಎಮ್.ಎಸ್. ವತಿಯಿಂದ ಸನ್ಮಾನ ಮಾಡಲಾಯಿತು. ಶ್ರೀ ಅಶೋಕ್ ಹಾರನಹಳ್ಳಿ, ಗೌರವ ಅಧ್ಯಕ್ಷರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅವರಿಗೆ ಭಾರತೀಯ ವಿದ್ಯಾ ಭವನ್ ವತಿಯಿಂದ ಸನ್ಮಾನ. ಎ.ಕೆ.ಬಿ.ಎಮ್.ಎಸ್. ತನ್ನ ಸದಸ್ಯರುಗಳಾದ ಶ್ರೀ ಸುನಿಲ್ ಪುರಾಣಿಕ್, ಶ್ರೀ ಕಿಕ್ಕೇರಿ ಕೃಷ್ಣಮೂರ್ತಿ ಮತ್ತು ಶ್ರೀಮತಿ ವಿದ್ಯಾ ರವಿಶಂಕರ್ ಅವರುಗಳಿಗೆ ಗೌರವಾನ್ವಿತ ಸನ್ಮಾನ ಮಾಡಲಾಯಿತು.

ಆಗಸ್ಟ್ ತಿಂಗಳಲ್ಲಿ ನಮ್ಮ ಭಾರತ ದೇಶದ ಸ್ವಾತಂತ್ರೋತ್ಸವದ ಅಮೃತ ಮಹೋತ್ಸವ ಸಂಧರ್ಭದಲ್ಲಿ ಪ್ರವೀಣ್ ರಾವ್ ಮತ್ತು ಪ್ರದೀಪ್ ರಾವ್ ಅವರಿಂದ ಸುಶ್ರಾವ್ಯ ಸುಗಮ ಸಂಗೀತ ಕಾರ್ಯಕ್ರಮ ಎ.ಕೆ.ಬಿ.ಎಮ್.ಎಸ್. – ಕಲೆ ಮತ್ತು ಸಾಂಸ್ಕೃತಿಕ ವತಿಯಿಂದ ಗಾಯತ್ರಿ ಭವನ್ ಅಲ್ಲಿ ಏರ್ಪಡಿಸಿತ್ತು

ಸೆಪ್ಟೆಂಬರ್ ತಿಂಗಳಲ್ಲಿ ವಿದುಷಿ ಕಲಾನಿಧಿ ಶ್ರೀಮತಿ ವೀಣಾ ಶ್ರೀನಿಧಿ, ಕು॥ ಅದಿತಿ ಶ್ರೀನಿಧಿ ಮತ್ತು ಸುಕೃತಿ ಶ್ರೀನಿಧಿ ರವರಿಂದ ಕಾರ್ಯಕ್ರಮ – ಸಂಸ್ಕೃತಿ ಪುರಾಣ ಮತ್ತು ರೋಗ ಶಾಸ್ತ್ರೀಯ ಕಾರ್ಯಕ್ರಮ ನೀಡಿರುವ

ನೃತ್ಯ ಅಕಾಡೆಮಿ ಸಂಸ್ಥೆಯಿಂದ – ಎ.ಕೆ.ಬಿ.ಎಮ್.ಎಸ್. – ಗಾಯತ್ರಿ ಭವನ್ ಅಲ್ಲಿ ನೆರವೇರಿತು.

ಅಕ್ಟೋಬರ್ ತಿಂಗಳಲ್ಲಿ ದಸರಾ ಹಬ್ಬದ ಪ್ರಯುಕ್ತ ಶ್ರೀ ಕೃಷ್ಣ ಫೌಂಡೇಶನ್ ಸಂಸ್ಥೆ ಇಂದ – ಕು ಟಟ ಸಿಂಧು ಸತ್ಯನಾರಾಯಣ, ಐಶ್ವರ್ಯ ಬಿ ಎಸ್, ಪ್ರಶಸ್ತಿ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಂಗ ಸಂಸ್ಥೆ – ವಿದ್ಯಾ ವಾಸಿನಿ ವಿಪ್ರ ಮಹಿಳಾ ವಸತಿ ನಿಲಯ ವಿದ್ಯಾರ್ಥಿನಿಯರಿಂದ ಭರತನಾಟ್ಯ ಕಾರ್ಯಕ್ರಮ ಎ.ಕೆ.ಬಿ.ಎಮ್.ಎಸ್. – ಗಾಯತ್ರಿ ಭವನ್ ಅಲ್ಲಿ ಏರ್ಪಡಿಸಿತ್ತು.

ನವೆಂಬರ್ ತಿಂಗಳಲ್ಲಿ ಕಾವ್ಯ ವಾಚನ ಕಾರ್ಯಕ್ರಮವನ್ನು ಶ್ರೀಮತಿ ಪೂರ್ಣಿಮ ರಾಮಪ್ರಸಾದ್ ಮತ್ತು ಕೆ.ವಿ. ರಾಮಪ್ರಸಾದ್ ದಂಪತಿಗಳಿಂದ ಎ.ಕೆ.ಬಿ.ಎಮ್.ಎಸ್. –ಕಲೆ ಮತ್ತು ಸಾಂಸ್ಕೃತಿಕ ವೇದಿಕೆ ಇಂದ ಪ್ರಸ್ತುತ ಪಡಿಸಿದರು. ಡಿಸೆಂಬರ್ ತಿಂಗಳಲ್ಲಿ ಶ್ರೀ ಗುರುರಾಜ್ ಅವರಿಂದ – ಇಂಪಾದ ದಾಸ ಸಾಹಿತ್ಯ ಸಂಗೀತ ಕಾರ್ಯಕ್ರಮ ಮತ್ತು ಕುಮಾರಿ ಟಟ ಶಾರ್ವರಿ ಸೋಮಯಾಜಿ ಅವರಿಂದ "ಭಕ್ತ ಪ್ರಹ್ಲಾದ " ಹರಿಕತೆ ಸಭಿಕರ ಮತ್ತು ಎ.ಕೆ.ಬಿ.ಎಮ್.ಎಸ್. ಸದಸ್ಯರುಗಳಿಂದ ಅಪಾರ ಮೆಚ್ಚುಗೆಗೆ ಪಾತ್ರವಾಯಿತು.



# ಮಹಾಸಭಾದ ವಧು–ವರರ ಮಾಹಿತಿ ಕೇಂದ್ರ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವಧು–ವರ ಮಾಹಿತಿ ಕೇಂದ್ರವು ಪ್ರತಿ ಮಂಗಳವಾರ ಮತ್ತು ಶನಿವಾರ ಸಂಜೆ 5.00 ಘಂಟೆಯಿಂದ 7.00 ಘಂಟೆಯವರೆಗೆ ಬೆಂಗಳೂರಿನ ಮಹಾಸಭಾ ಕಾರ್ಯಾಲಯ ಗಾಯತ್ರೀ ಭವನದಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಸಾಲಿನಲ್ಲಿ ಸುಮಾರು 555ಕ್ಕೂ ಹೆಚ್ಚು ವಿವಾಹಾಕಾಂಕ್ಷಿಗಳು ಹೆಸರನ್ನು ನೋಂದಾಯಿಸಿಕೊಂಡಿದ್ದು, ಇವರಿಂದ ಸುಮಾರು ಐದು ಲಕ್ಷ ರೂಪಾಯಿಗಳ ಆದಾಯವು ಮಹಾಸಭೆಗೆ ಬಂದಿರುವುದು ಸಂತಸದ ಸಂಗತಿ.

ಆ ದಿನಗಳಲ್ಲಿ ಸಾಮಾನ್ಯವಾಗಿ 50 ರಿಂದ 60ಮಂದಿ ವಧು–ವರರ ಪೋಷಕರು ಮತ್ತು ಅವರ ಬಂಧುಗಳು ಗಾಯತ್ರೀ ಭವನಕ್ಕೆ ಭೇಟಿ ನೀಡಿ, ವಧು–ವರರ ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ ಮತ್ತು ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ. ಆ ಸಮಯದಲ್ಲಿ ಸ್ವಯಂಸೇವಕರಾದ ಶ್ರೀಮತಿ ಜಯಲತಾ ಸತ್ಯನಾರಾಯಣ್, ಶ್ರೀಮತಿ ಗಾಯತ್ರಿರಾವ್ ಮತ್ತು ಶ್ರೀಮತಿ ನಳಿನಿ ನಟರಾಜ್‌ರವರು ಬೇಕಾದ ಉಪಯುಕ್ತ ಮಾಹಿತಿ ನೀಡುತ್ತಿದ್ದಾರೆ. ಇವರ ಕಾರ್ಯ ಪ್ರಶಂಶಾರ್ಹ.

ಉಳಿದ ದಿನಗಳಲ್ಲಿ ಮಹಾಸಭಾ ಕಾರ್ಯಾಲಯದ ವೇಳೆಯಲ್ಲಿ ವಧು–ವರರ ಹೆಸರನ್ನು ನೋಂದಣಿ ಮಾಡಿಕೊಳ್ಳಲು ಮಾತ್ರ ಅವಕಾಶ ಮಾಡಿಕೊಡಲಾಗುವುದು. ಆದರೆ ವಧು–ವರರ ಮಾಹಿತಿ ನೀಡಲು ಅವಕಾಶವಿರುವುದಿಲ್ಲ.

ಇಲ್ಲಿ ನೋಂದಣಿ ಮಾಡಲು ಪೋಷಕರ ಅಥವಾ ವಧು–ವರರಿಗೆ ಅಖಿಲ ಕರ್ನಾಟಕ ಮಹಾಸಭಾದ ಸದಸ್ಯತ್ವ ಕಡ್ಡಾಯ. ಅನೇಕ ವಧು–ವರರು ಸದಸ್ಯತ್ವ ಪಡೆಯುತ್ತಿರುವುದು ಸಂತೋಷದ ವಿಷಯ. ಮಹಾಸಭೆಯ ಯಶಸ್ವಿ ಸಮಾಜಮುಖಿ ವಿಭಾಗಗಳಲ್ಲಿ ವಧು–ವರರ ಮಾಹಿತಿ ಕೇಂದ್ರವು ಒಂದಾಗಿರುವುದು ಹೆಮ್ಮೆಯ ಸಂಗತಿ.

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ (ರಿ)**

**ಗಾಯಿತ್ರಿ ಭವನ 3070, 9ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070.**

**ಮೊ : 944 26771695**

**ವಿಪ್ರನುಡಿ ಪತ್ರಿಕೆಗೆ ಚಂದಾ ಅರ್ಜಿ**

ಹೆಸರು : ______________________

ವಿಳಾಸ ______________________

______________________

ಸದಸ್ಯತ್ವದ ಸಂಖ್ಯೆ : ______________

ದಯಮಾಡಿ ವಿಪ್ರನುಡಿ ಮಾಸ ಪತ್ರಿಕೆ ಕನ್ನಡ/ಇಂಗ್ಲೀಷ್ – ಅವೃತ್ತಿಗೆ ಮೂರುವರ್ಷದ ಚಂದಾ ಹಣ **ರೂ. 500/– (ಕನ್ನಡ) ರೂ 1500 (ಇಂಗ್ಲೀಷ್)** ಗಳನ್ನು ನಗದು/ಚೆಕ್/ಯು.ಪಿ.ಐ. ವರ್ಗಾವಣೆ ಮೂಲಕ ಪಾವತಿಸುತ್ತಿದ್ದೇನೆ.

ಚಂದಾದಾರರ ಸಹಿ/–

**AKBMS Membership Account Acc Name :** Akhila Karnataka Brahmana Mahasabha
Bank : Karnataka Bank Ltd A/c No : 1072500102058301I
FSC : KARB0000107BRANCH : BANASHANKARI 2ND STAGE

**ವಿ.ಸೂ. : ಹೆಸರು ವಿಳಾಸ, ಹಣ ಪಾವತಿಸಿದ ದಾಖಲೆ/ಸ್ಕ್ರೀನ್‌ಶಾಟ್/ಯು.ಪಿ.ಐ ಸಂಖ್ಯೆಯನ್ನು ಮೊ.ನಂ. 9945850620 ಸಂಖ್ಯೆಗೆ ವಾಟ್ಸ್ಯಾಪ್ ಕಳುಹಿಸಿ ದೂರವಾಣಿ ಮುಖಾಂತರ ತಿಳಿಸುವುದು.**

# ಬ್ರಾಹ್ಮಣ ವಿರೋಧಿ ಹೇಳಿಕೆಗೆ ಮಹಾಸಭೆಯ ಅಸಮಾಧಾನ

ಇತ್ತೀಚಿಗೆ ಮಾನ್ಯ ಮಾಜಿ ಮುಖ್ಯ ಮಂತ್ರಿಗಳಾದ ಶ್ರೀ ಎಚ್.ಡಿ. ಕುಮಾರಸ್ವಾಮಿ ಅವರು ಮಾನ್ಯ ಕೇಂದ್ರ ಮಂತ್ರಿಗಳಾದ ಶ್ರೀ ಪ್ರಹ್ಲಾದ ಜೋಶಿ ಅವರನ್ನು ಟೀಕೆ ಮಾಡುವ ಸಂದರ್ಭದಲ್ಲಿ ಅವರು ಗಾಂಧೀಜಿ ಅವರನ್ನು ಕೊಂದ ಸಮುದಾಯದವರೆಂದು ಹಾಗು ಮಹಾರಾಷ್ಟ ಮೂಲದ ಪೇಶ್ವೆಗಳಾಗಿ ಸೇವೆ ಸಲ್ಲಿಸಿದ ದೇಶಸ್ಥ ಬ್ರಾಹ್ಮಣರೆಂದು ಉಲ್ಲೇಖಿಸಿದ್ದಾರೆ.



ಶ್ರೀ ಪ್ರಹ್ಲಾದ ಜೋಶಿ ಅವರು ಎಲ್ಲರಿಗೂ ತಿಳಿದಿರುವ ಹಾಗೆ ದೇಶಸ್ಥರಲ್ಲ ಅವರು ಮಾಧ್ವ ಸಂಪ್ರದಾಯಕ್ಕೆ ಸೇರಿದ ಉತ್ತರಾಧಿಮಠದ ಅನುಯಾಯಯಿಗಳು. ಇವರು ಉತ್ತರ ಕರ್ನಾಟಕದ ಮೂಲದವರೇ ಆಗಿದ್ದು ಮಹಾರಾಷ್ಟಕ್ಕೆ ಸೇರಿದವರಲ್ಲ. ಜೋಶಿ ಅವರು ರಾಜಕೀಯದಲ್ಲಿ ತಮ್ಮದೇ ಆದ ಗೌರವವನ್ನು ಸಂಪಾದಿಸಿದ್ದಾರೆ, ಅರ್ಹತೆಯೇ ಮಾನದಂಡವಾದಲ್ಲಿ ಜೋಶಿ ಅವರು ಸಹ ಮುಖ್ಯಮಂತ್ರಿ ಸ್ಥಾನಕ್ಕೆ ಸೂಕ್ತ ಅಭ್ಯರ್ಥಿ. ಕೇವಲ ಜಾತಿಯ ಆಧಾರದ ಮೇಲೆ ವೈಯಕ್ತಿಕ ಟೀಕೆ ಸೂಕ್ತವಲ್ಲ ಅವರ ಹಾಗು ಅವರ ಪಕ್ಷದ ರಾಜಕೀಯ ನಿಲುವುಗಳನ್ನು ಪ್ರಶ್ನಿಸಬಹುದು ಆದರೆ ಜಾತಿ ಆಧಾರದ ಮೇಲೆ ವೈಯಕ್ತಿಕ ಟೀಕೆ ಸರಿಯಲ್ಲ.

ಹಿಂದೆ ನಡೆದು ಹೋದ ಗಾಂಧಿ ಹತ್ಯೆಯನ್ನೇ ಗುರಿಯಾಗಿಟ್ಟುಕೊಂಡು ಇಂದಿಗೂ ಚಿತ್ಪಾವನ ಬ್ರಾಹ್ಮಣ ಸಮುದಾಯವನ್ನು ದೂಷಿಸುವುದು ಎಷ್ಟು ಸರಿ? ನೂರಾರು ವರುಷಗಳ ಹಿಂದೆಯೇ ಕರ್ನಾಟಕದ ನಾನಾ ಭಾಗಗಳಲ್ಲಿ ಬಂದು ನೆಲೆಸಿರುವ ಚಿತ್ಪಾವನ ಹಾಗು ದೇಶಸ್ಥ ಬ್ರಾಹ್ಮಣರು ನಮ್ಮ ನಾಡು ನುಡಿಯೊಂದಿಗೆ ಬೆರೆತು ಕನ್ನಡಿಗರೇ ಆಗಿ ಹೋಗಿದ್ದಾರೆ, ಉದಾಹರಣೆಗೆ ಚಿತ್ಪಾವನರಾದ ವರ ಕವಿ ಬೇಂದ್ರೆ ಅವರು ಕನ್ನಡ ಸಾಹಿತ್ಯಕ್ಕೆ ಕೊಟ್ಟಿರುವ ಕೊಡುಗೆಯನ್ನು ನಾವು ಎಂದಿಗೂ ಮರೆಯಲಾರೆವು .ಅಷ್ಟೇ ಅಲ್ಲ ಕರ್ನಾಟಕದ ಏಕೀಕರಣದ ಸಂದರ್ಭದಲ್ಲಿ ಕರ್ನಾಟಕದ ಏಕೀಕರಣಕ್ಕೆ ಆಲೂರ ವೆಂಕಟರಾಯರು ಸಂಕಲ್ಪಿಸಿದಾಗ ಅವರ ಈ ಸಂಕಲ್ಪಕ್ಕೆ ಅಂದು ಸಂಸತ್ತಿನಲ್ಲೇ ಸಂಪೂರ್ಣ ಬೆಂಬಲ ಘೋಷಿಸಿದವರು ಚಿತ್ಪಾವನ ಮುಖಂಡರೇ. ಭೂದಾನದಂತ ಮಹಾ ಯಜ್ನ್ಯವನ್ನು ಕೈಗೊಂಡ ವಿನೋಬಾ ಭಾವೆ ಅವರು ಕೂಡ ಚಿತ್ಪಾವನರೇ. ನಾಥುರಾಂ ಗೋಡ್ಸೆ ಎಂಬ ದಾರಿ ತಪ್ಪಿದ ದೇಶ ಭಕ್ತನೊಬ್ಬ ಗಾಂಧಿಯನ್ನು ಕೊಂದನೆಂದು ಆ ಸಮುದಾಯಕ್ಕೆ ಸೇರಿದ ಎಲ್ಲರನ್ನು ದೋಷಿಗಳಂತೆ ನೋಡುವುದು ಸಮಂಜಸವಲ್ಲ. ಹಾಗೆ ಮಾಡಿದರೆ ಚಿತ್ಪಾವನ ಬ್ರಾಹ್ಮಣ ಸಮಾಜದ ಸ್ವತಂತ್ರ ಹೋರಾಟಗಾರರಾದ ಚಾಪೇಕರ ಸಹೋದರರು , ಬಲವಂತ ಫಡಕೆ , ಸಾವರ್ಕರ್, ಜಸ್ಟಿಸ್ ರಾನಡೆ, ಅಚ್ಚುತ ಪಟವರ್ಧನ್,ಕಾಕಾಸಾಹೇಬ್ ಗಾಡ್ಗಿಳ್, ರಾವ್ ಸಾಹೇಬ್ ಪಟವರ್ಧನ್, ಲಿಮಯೆ, ಸೇನಾಪತಿ ಬಾಪಟ್, ಅನಂತ್ ಕಾನ್ಹೆರೆ, ತಾತ್ಯಾ ಟೋಪೆ, ಮಹದೇವ್ ರಾನಡೆ ಹಾಗು ಗಾಂಧೀಜಿಯವರ ಗುರುಗಳಾದ ಗೋಖಲೆ , ಸ್ವರಾಜ್ಯದ ಕಲ್ಪನೆಯನ್ನು ಬಿತ್ತಿದ ತಿಲಕರು ಇವರೆಲ್ಲರ ರಾಷ್ಟ ಭಕ್ತಿಯನ್ನೇ ಪ್ರಶ್ನಿಸಿದಂತಾಗುತ್ತದೆ.

ಪ್ರಸ್ಥಾನತ್ರಯವನ್ನು ಅರ್ಥೈಸಿಕೊಳ್ಳುವ ಮಾರ್ಗದಲ್ಲಿ ಸ್ಮಾರ್ತರಲ್ಲಿ, ವೈಷ್ಣವರಲ್ಲಿ, ಶ್ರೀ ವೈಷ್ಣವರಲ್ಲಿ ಕೆಲವು ಭಿನ್ನ ಭಿನ್ನ ಅಭಿಪ್ರಾಯಗಳಿರಬಹುದು. ಆದರೂ ಎಲ್ಲಾ ತ್ರಿಮತಸ್ಥ ಆಚಾರ್ಯರು ಸನಾತನ ಧರ್ಮದ ರಕ್ಷಣೆ ಹಾಗು ಪೋಷಣೆಗೆ ಕಾರಣೀಭೂತರಾಗಿದ್ದಾರೆ, ಎಲ್ಲಾ ಆಚಾರ್ಯರು ಸಹ ಸಮಸ್ತ ಮನುಕುಲದ ಶ್ರೇಯಸ್ಸನ್ನೇ ಆಶಿಸಿದ್ದಾರೆ.

ಶ್ರೀ ಕುಮಾರಸ್ವಾಮಿ ಅವರು ಅದರಲ್ಲೂ ದೇವೇಗೌಡರ ಕುಟುಂಬದವರು ಸನಾತನ ಧರ್ಮವನ್ನು ಗೌರವಿಸುವವರಾಗಿದ್ದಾರೆ. ಶೃಂಗೇರಿ ಮಠದ ಪರಂಪರೆಯಲ್ಲಿ ಅತ್ಯಂತ ಭಕ್ತಿ ಹಾಗು ಶ್ರದ್ಧೆಯನ್ನು ಹೊಂದಿದವರಾಗಿದ್ದಾರೆ . ಈ ಹಿಂದೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾಕ್ಕೆ ನಗರದ ಮಧ್ಯ ಭಾಗದಲ್ಲಿ ನಿವೇಶನ ಮಂಜೂರು ಮಾಡುವ ವಿಷಯದಲ್ಲಿ ಹಾಗೂ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ರಚನೆಯಲ್ಲಿ ಕುಮಾರಸ್ವಾಮಿ ಅವರ ಪಾತ್ರ ಮಹತ್ವವಾದದ್ದು ಆದ್ದರಿಂದ ವಿಪ್ರ ಸಮುದಾಯ ಇಂದಿಗೂ ದೇವೇಗೌಡರ ಕುಟುಂಬದ ಬಗ್ಗೆ ಸದಾಶಯವನ್ನು ಹೊಂದಿದೆ. ಆದರೆ ಶ್ರೀ ಕುಮಾರಸ್ವಾಮಿ ಅವರ ಸಮುದಾಯದ ಬಗೆಗಿನ ಟೀಕೆಗಳು ವಿಪ್ರರ ಸಮುದಾಯದಲ್ಲಿ ಅಸಮಾಧಾನವನ್ನುಂಟು ಮಾಡಿದೆ. ರಾಜಕೀಯ ವಿರೋಧಿಗಳ ಟೀಕೆ ಮಾಡುವ ಭರದಲ್ಲಿ ಸಮುದಾಯದ ಹೆಸರನ್ನು ಎಳೆದು ತಂದಿದ್ದು ಅವರ ವ್ಯಕ್ತಿತ್ವಕ್ಕೆ ಗೌರವ ತರುವ ವಿಷಯವಲ್ಲ.

ಮುಂದಿನ ದಿನಗಳಲ್ಲಿ ಮತ್ತೊಮ್ಮೆ ಮುಖ್ಯಮಂತ್ರಿ ಸ್ಥಾನವನ್ನುಅಲಂಕರಿಸುವ ಆಕಾಂಕ್ಷೆ ಹೊಂದಿರುವ ಶ್ರೀ ಕುಮಾರಸ್ವಾಮಿ ಅವರು ಎಲ್ಲಾ ಸಮುದಾಯಗಳನ್ನು ಒಟ್ಟಿಗೆ ತೆಗೆದು ಕೊಂಡು ಹೋಗುವ ಜವಾಬ್ದಾರಿ ಅವರ ಮೇಲಿದೆ ಎಂದು ಮರೆಯಬಾರದು.

**ಅಶೋಕ ಹಾರನಹಳ್ಳಿ,**
ಅಧ್ಯಕ್ಷರು

# ಶೃಂಗೇರಿಯಲ್ಲಿ ಶುಕ್ಲ ಯಜುರ್ವೇದದ ಮಹಾ ಸಮ್ಮೇಳನ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮತ್ತು ರಾಜ್ಯದ ಶುಕ್ಲ ಯಜುರ್ವೇದ ಸಂಘ ಸಂಸ್ಥೆಗಳು 2023 ರ ಏಪ್ರಿಲ್ – ಮೇ ತಿಂಗಳಿನಲ್ಲಿ, ಶ್ರೀ ಯೋಗೀಶ್ವರ ಯಾಜ್ಞವಲ್ಕ್ಯ ಗುರುಗಳ ಮತ್ತು ಅವರು ನೀಡಿದ ಶುಕ್ಲ ಯಜುರ್ವೇದದ ಮಹತ್ವವನ್ನು ಜಗತ್ತಿಗೆ ತಿಳಿಸುವ ನಿಟ್ಟಿನಲ್ಲಿ ರಾಜ್ಯ ಮಟ್ಟದ ಶುಕ್ಲ ಯಜುರ್ವೇದಿಗಳ ಸಮ್ಮೇಳನವನ್ನು ಹುಬ್ಬಳ್ಳಿಯಲ್ಲಿ ನಡೆಸಲು ತೀರ್ಮಾನಿಸಲಾಗಿತ್ತು.

ಇದಕ್ಕೆ ಸಂಬಂಧಪಟ್ಟಂತೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಪದಾಧಿಕಾರಿಗಳು ಹಾಗೂ ಶುಕ್ಲ ಯಜುರ್ವೇದ ಸಂಸ್ಥೆಗಳು, ರಾಜ್ಯಾದ್ಯಂತ ಇರುವ ಶುಕ್ಲ ಯಜುರ್ವೇದ ವಿದ್ಯಾ ಪೀಠಗಳ, ಹಿರಿಯರ ಸಲಹೆ ಸೂಚನೆ ಮನವಿ ಮೇರೆಗೆ ಹುಬ್ಬಳ್ಳಿ ಯಲ್ಲಿ ನಡೆಸಲು ಉದ್ದೇಶಿಸಿದ್ದ ರಾಜ್ಯ ಮಟ್ಟದ ಶುಕ್ಲ ಯಜುರ್ವೇದ ಸಮ್ಮೇಳನದ ಸ್ಥಳವನ್ನು ಶೃಂಗೇರಿಗೆ ಬದಲಿಸಲು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭೆ ಪರಿಗಣಿಸಿ, ಶೃಂಗೇರಿ ಮಹಾಸಂಸ್ಥಾನದ ಸನ್ನಿಧಾನಕ್ಕೆ ಮನವಿ ಪತ್ರವನ್ನು ಸಲ್ಲಿಸಿ ಸನ್ನಿಧಾನದಿಂದ ಒಪ್ಪಿಗೆಯನ್ನು ಪಡೆದಿದೆ.

ಸಮ್ಮೇಳನದ ದಿನಾಂಕವನ್ನು ಶೀಘ್ರದಲ್ಲೇ ಸಮಸ್ತ ವಿಪ್ರ ಬಂಧುಗಳಿಗೆ ತಿಳಿಸಲಾಗುವುದು.



ಜಗದ್ಗುರುಗಳ ದರ್ಶನದ ನಿರೀಕ್ಷೆಯಲ್ಲಿ

## ವಿದುರಾಶ್ವತ್ಥದಲ್ಲಿ ನೂತನ ಕಟ್ಟಡಕ್ಕೆ ಭೂಮಿ ಪೂಜೆ
## ಹಣದ ಹಿಂದೆ ಹೋದರೆ ಮನುಷ್ಯತ್ವ ಮಾಯ–ಅಶೋಕ ಹಾರನಹಳ್ಳಿ



ಮನುಷ್ಯ ಹಣದ ಹಿಂದೆ ಹೋದರೆ ಮನುಷ್ಯತ್ವ ಕಳೆದುಕೊಳ್ಳುತ್ತಾನೆ. ಸ್ವಾರ್ಥ ಎಲ್ಲೆಡೆ ಮೆರೆಯುತ್ತದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಆಶೋಕ ಹಾರನಹಳ್ಳಿ ಅವರು ಹೇಳಿದರು.

ವಿದುರಾಶ್ವತ್ಥದಲ್ಲಿ 26.01.2023ರಂದು ಅಶ್ವತ್ಥನಾರಾಯಣಸ್ವಾಮಿ, ಬ್ರಾಹ್ಮಣ ಸೇವ ಸಂಘದ ನೂತನ ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಮನುಷ್ಯನಿಗೆ ಹಣವೇ ಮುಖ್ಯವಲ್ಲ. ಮಾನವೀಯ ಹಾಗೂ ಸಾಮಾಜಿಕ ಸಂಬಂಧಗಳು ಗಟ್ಟಿಯಾಗಿರಬೇಕು. ಕೆಟ್ಟ ಕೆಲಸಗಳು ನಮಗೆ ಒಳ್ಳೆಯ ಫಲ ನೀಡುವುದಿಲ್ಲ. ಪುಣ್ಯದ ಕೆಲಸಗಳು ಮಾತ್ರ ನಮ್ಮನ್ನು ಕಾಯುತ್ತವೆ. ಆದ್ದರಿಂದ ಕಷ್ಟ ಬಂದಾಗ ದೇವರಿಗೆ ಮೊರೆ ಹೋಗುವ ಬದಲಿಗೆ ಪುಣ್ಯದ ಕೆಲಸ ಮಾಡಬೇಕು ಎಂದರು. ಸಂಘದ ಅಧ್ಯಕ್ಷ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷರಾದ ಶ್ರೀ ಡಿ.ವಿ. ರಾಜೇಂದ್ರಪ್ರಸಾದ್ ಮಾತನಾಡಿ, 1.5 ಕೋಟಿ ರೂ. ವೆಚ್ಚದಲ್ಲಿ ಕಲ್ಯಾಣಮಂಟಪ ನಿರ್ಮಾಣ ಮಾಡಲಾಗುತ್ತಿದ್ದು, ಇದರಿಂದ ಸಮಾಜದ ಕೆಲಸ ಕಾರ್ಯಗಳಿಗೆ ಅನುಕೂಲವಾಗಲಿದೆ ಎಂದರು.

ಕೋಚಿಮುಲ್ ಮಾಜಿ ಅಧ್ಯಕ್ಷ ಎಸ್. ರಮೇಶ್ ಮಾತನಾಡಿ, ಪ್ರಪಂಚದಲ್ಲಿ ಮೀಸಲಾತಿ ಬೇಡ ಎನ್ನುವ ಸಮುದಾಯವಿದ್ದರೆ ಅದು ಬ್ರಾಹ್ಮಣ ಸಮುದಾಯ. ಎಲ್ಲರೊಂದಿಗೆ ವಿಶ್ವಾಸದಿಂದ ಬಾಳುವ ಹಾಗೂ ಶ್ರೇಯಸ್ಸು ಬಯಸುವ ಸಮುದಾಯ ಎಂಬ ಹೆಗ್ಗಳಿಕೆಗೆ ನಮ್ಮದಾಗಿದೆ. ಆದರೆ, ಸಮುದಾಯ ಮತ್ತಷ್ಟು ಸಂಘಟನಾ ಶಕ್ತಿ ಪಡೆಯಬೇಕಿದೆ ಎಂದರು.

ಸಂಘದ ಕಾರ್ಯದರ್ಶಿ ಅಶ್ವತ್ಥನಾರಾಯಣರಾವ್, ಖಜಾಂಚಿ ಗುರುರಾಜರಾವ್, ಸಮುದಾಯದ ಮುಖಂಡರಾದ ಕೈವಾರ ಕೃಷ್ಣಮೂರ್ತಿ, ಎಲ್. ಸತ್ಯನಾರಯಣರಾವ್, ಡಿ.ಜಿ. ಅಶ್ವತ್ಥನಾರಾಯಣರಾವ್, ರಘು ಬಾಬು, ಕುಮಾರಸ್ವಾಮಿ, ಕೆ.ಎಚ್. ಉಪೇಂದ್ರರಾವ್ ಇತರರಿದ್ದರು.

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ದ.ಕ. ಜಿಲ್ಲಾ ಯುವ ಘಟಕದ ಉದ್ಘಾಟನೆ

# ಧರ್ಮ ಮೌಲ್ಯಗಳ ಅರ್ಥೈಸಿ ಪ್ರಗತಿಯತ್ತ ಸಾಗೋಣ

ತ್ರಿಮತಸ್ಥರು ಒಂದಾಗಲೇಬೇಕಾಗಿದೆ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ನೇತೃತ್ವದಲ್ಲಿ ಬ್ರಾಹ್ಮಣ ಸಮಜದ ಎಲ್ಲ ಸ್ವಾಮೀಜಿಗಳನ್ನು ಸೇರಿಸಿ, ಸಮುದಾಯಕ್ಕೆ ಒಗ್ಗಟ್ಟಿನ ಸಂದೇಶ ಕೊಡಿಸುವ ಪ್ರಯತ್ನ ಮಾಡುತ್ತೇವೆ ಎಂದು ಬೆಂಗಳೂರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ ಹಾರನಹಳ್ಳಿಯವರು ಹೇಳಿದರು.

ಅವರು ಭಾನುವಾರ ಕಟೀಲು ದೇವಸ್ಥಾನದ ಪ.ಪೂ.ಕಾಲೇಜಿನ ವಿದ್ಯಾಸದನದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ದಕ್ಷಿಣ ಕನ್ನಡ ಜಿಲ್ಲಾ ಯುವ ಘಟಕ ಹಾಗೂ ಮಹಿಳ ಘಟಕಗಳ ಉದ್ಘಾಟನೆ ಹಾಗೂ ಪದಗ್ರಹಣ ಕಾರ್ಯಕ್ರಮದಲ್ಲಿ ಮಾತನಾಡಿದರು.

**ಬ್ರಾಹ್ಮಣರು ರಾಜಕೀಯವಾಗಿ ಎಚ್ಚೆತ್ತುಕೊಳ್ಳಬೇಕು**

ಬ್ರಾಹ್ಮಣ ಸಮಾಜದ ವಿರುದ್ಧದ ಟೀಕೆಗಳಿಗೆ ಗಮನ ನೀಡದೆ ಸಮಾಜದ ಅಭಿವೃದ್ಧಿ ಒಳಿತಿಗೆ ಕೆಲಸ ಮಾಡೋಣ. ನಮ್ಮ ಧರ್ಮದ ಮೌಲ್ಯಗಳನ್ನು ಅರ್ಥ ಮಾಡಿಕೊಂಡು ಸಾಧನೆಯತ್ತ ಸಾಗೋಣ. ಕೇಂದ್ರ ಸರಕಾರ ಬ್ರಾಹ್ಮಣ ಸಮಾಜಕ್ಕೆ ಘೋಷಣೆ ಮಾಡಿದ ಆರ್ಥಿಕ ಮೀಸಲಾತಿ, ರಾಜ್ಯ ಸರಕಾರ ಮುಂದಾಗಿದ್ದ ದೇವಸ್ಥಾನಗಳ ಸ್ವಾಯತ್ತೆ ಹೀಗೆ ಅನೇಕ ಸಂಗತಿಗಳು ಅನುಷ್ಠಾನವಾಗಿಲ್ಲ ಹಾಗಾಗಿ ಬ್ರಾಹ್ಮಣರು ರಾಜಕೀಯವಾಗಿ ಎಚ್ಚೆತ್ತುಕೊಳ್ಳಬೇಕು ಎಂದರು.

**ಪ್ರತ್ಯೇಕವಾಗದೆ ಒಗ್ಗಟ್ಟಾಗಬೇಕಿದೆ**

ದಕ್ಷಿಣ ಕನ್ನಡ ಯುವ ಘಟಕ ಸಂಚಾಲಕ ಶ್ರೀ ಹರಿನಾರಾಯಣದಾಸ ಅಸ್ರಣ್ಣ ಮಾತನಾಡಿ, ಬ್ರಾಹ್ಮಣ ಸಮಾಜದ ಶಿಕ್ಷಣಕ್ಕೆ ಸಹಕರಿಸುವ ವಿದ್ಯಾ ವಿಪ್ರ ಕಲ್ಯಾಣ, ಅಂತ್ಯಸಂಸ್ಕಾರದ ಸಂದರ್ಭ ಸಹಕರಿಸುವ ಅಂತ್ಯೇಷ್ಠಿ ಧರ್ಮ, ಅನಾರೋಗ್ಯದ ಸಂದರ್ಭ ಸಹಾಯ ಮಾಡುವ ಯೋಗಕ್ಷೇಮ ಯೋಜನೆಗಳನ್ನು ಹಮ್ಮಿಕೊಳ್ಳಲಾಗುವುದು. ಬ್ರಾಹ್ಮಣರು ಶಿವಳ್ಳಿ, ಕೋಟ, ಹವ್ಯಕ ಎಂದು ಪ್ರತ್ಯೇಕವಾಗದೆ ಒಂದಾಗಬೇಕಾಗಿದೆ ಎಂದರು.

ಮಹಿಳಾ ಘಟಕದಿಂದ ಸ್ವಚ್ಛದೇಗುಲ, ಸ್ತನ ಕ್ಯಾನ್ಸರ್ ಅರಿವು, ನವೋಲ್ಲಾಸ ಯೋಜನೆಗಳ ಮಾಹಿತಿ ನೀಡಲಾಯಿತು. ಬ್ರಾಹ್ಮಣ ಮಹಾಸಭಾದ ಜಿಲ್ಲಾ ತಾಲ್ಲೂಕುಗಳ ಯುವ–ಮಹಿಳಾ ಘಟಕಗಳನ್ನು ಉದ್ಘಾಟಿಸಲಾಯಿತು.

ಲಕ್ಷ್ಮೀನಾರಾಯಣ ಅಸ್ರಣ್ಣ, ವೆಂಕಟರಮಣ ಅಸ್ರಣ್ಣ, ಕಮಲಾದೇವಿ ಪ್ರಸಷಾದ ಅಸ್ರಣ್ಣ, ಉದ್ಯಮಿ ರಘುನಾಥ ಸೋಮಯಾಜಿ, ಮಹಿಳಾ ಘಟಕದ ರಾಜ್ಯ ಸಂಚಾಲಕಿ ಡಾ. ಶುಭಮಂಗಳ ಸುನಿಲ್, ಯುವಕ ಪರಿಷತ್ ರಾಜ್ಯ ಸಂಚಾಲಕ ಸಂದೀಪ ರವಿ, ಉಪಾಧ್ಯಕ್ಷ ಮಹೇಶ್ ಕಜೆ, ಸೂರ್ಯನಾರಯಣ ಭಟ್ ಕಶೆಕೋಡಿ, ಗಿರಿಪ್ರಕಾಶ್ ತಂತ್ರಿ ಪೊಳಲಿ, ಹರಿಪ್ರಸಾದ್ ಪೆಡಿಯಾಪು, ರಾಜ್ಯ ಮಹಿಳಾ ಸಹ ಸಂಚಾಲಕಿ ಚೇತನಾ ದತ್ತಾತ್ರೇಯ, ಜಿಲ್ಲಾ ಮಹಿಳಾ ಸಂಚಾಲಕಿ ಉಮಾ ಸೋಮಯಾಜಿ, ಭುವನಾಭಿರಾಮ ಉಡುಪ, ಶಿವಳ್ಳಿ ಸ್ಪಂದನದ ಡಾ. ದಯಾಕರ್ ಮತ್ತಿತರರು ಉಪಸ್ಥಿತರಿದ್ದರು.

**ಸಾಧಕರಿಗೆ ಗೌರವ**

ಅನನ್ಯ ಸಾಧಕ ಡಾ. ಹರಿಕೃಷ್ಣ ಪುನರೂರು, ರಾಷ್ಟ್ರಮಟ್ಟದ ಕಲಾಪರ್ವದಲ್ಲಿ ಪ್ರಶಸ್ತಿ ಪುರಸ್ಕೃತ ಪ್ರಹ್ಲಾದಮೂರ್ತಿ ಕಡಂದಲೆ, ನೃತ್ಯಗಾತಿ ಜ್ಞಾನ ಐತಾಳ್ ಮಂಗಳೂರು, ಸಿಎಯಲ್ಲಿ ರ‍್ಯಾಂಕ್ ಪಡೆದ ರಮ್ಯಶ್ರೀ ಸುರತ್ಕಲ್ ಅವರನ್ನು "ನಮ್ಮವರು ನಮ್ಮ ಹೆಮ್ಮೆ" ಕಾರ್ಯಕ್ರಮದಡಿಯಲ್ಲಿ ಗೌರವಿಸಲಾಯಿತು.

ಅನಂತಪದ್ಮನಾಭ ಶಿಬರೂರು ನಿರೂಪಿಸಿ, ರಾಜ್ಯ ಯುವ ಸಹ ಸಂಚಾಲಕ ಸುಬ್ರಹ್ಮಣ್ಯ ಪ್ರಸಾದ್ ವಂದಿಸಿದರು.



**ಶ್ರೀ ರಾಘವೇಶ್ವರ ಭಾರತಿ ಸ್ವಾಮಿಗಳಿಂದ ಮಾಣಿ ಮಠದಲ್ಲಿ ಅಧ್ಯಕ್ಷರಿಗೆ ಗೌರವ ಸರ್ಮಪಣೆ**

### ವಿಪ್ರನುಡಿಗೆ ಚಂದಾದಾರರಾಗಲು ಮನವಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಮುಖವಾಣಿಯಾದ 'ವಿಪ್ರನುಡಿ' ಹೊಸ ವಿನ್ಯಾಸದೊಂದಿಗೆ ಪ್ರಕಟವಾಗುತ್ತಿದೆ. ಸಂಚಿಕೆ ಇನ್ನಷ್ಟು ಚೆನ್ನಾಗಿ ಮೂಡಿಬರಲು ತಮ್ಮ ಸಲಹೆಗೆ ಸ್ವಾಗತ. ಮುದ್ರಣ ದುಬಾರಿಯಾಗಿರುವ ಈ ಕಾಲದಲ್ಲಿ ಪತ್ರಿಕೆಯನ್ನು ಎಲ್ಲರಿಗೂ ಉಚಿತವಾಗಿ ತಲುಪಿಸಲು ಕಷ್ಟಸಾಧ್ಯ. ಆದ್ದರಿಂದ ತಾವು 'ವಿಪ್ರನುಡಿ'ಗೆ ಚಂದಾದಾರರಾಗಬೇಕೆಂದು ಸಂಪಾದಕ ಮಂಡಳಿಯ ವಿನಂತಿ. ಮೂರು ವರ್ಷಕ್ಕೆ 500/– ರೂ.ಗಳನ್ನು ನೀಡಿ ವಿಪ್ರನುಡಿ ಚಂದಾದಾರರಾಗಲು ವಿನಂತಿಸುತ್ತೇವೆ. ಈ ವಿಪ್ರನುಡಿ ಚಂದಾ ಹಣವನ್ನು ಪ್ರತ್ಯೇಕವಾಗಿ ತೆಗೆದಿಡ ಲಾಗುತ್ತದೆ. ದಯವಿಟ್ಟು ತಾವು ಹಾಗೂ ತಮ್ಮ ಬಂಧುಗಳು ಶೀಘ್ರವೇ ಚಂದಾದಾರರಾಗಬೇಕೆಂದು ಸಂಪಾದಕ ಮಂಡಲಿ ವಿನಂತಿಸುತ್ತದೆ.**



ಮಂಗಳೂರಿನ ಶಂಕರಮಠದ ಧರ್ಮಾಧಿಕಾರಿಗಳು ಆದ ಶ್ರೀ ಬೊಳ್ಳಾವೆ ಸತ್ಯಶಂಕರ್ ಅವರನ್ನು ಗುರು ಸೇವಾ ಧುರೀಣ, ಪದ್ಮಶ್ರೀ ಪುರಸ್ಕತ ಶ್ರೀ ಗೌರಿಶಂಕರ್ ಅವರ ಅಧ್ಯಕ್ಷತೆಯಲ್ಲಿ 22 ಜನವರಿಯಂದು ಮಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರ ಜೀವಮಾನದ ಸಾಧನೆಗೆ ಅಭಿನಂದಿಸಲಾಯಿತು. ಅಖಿಲ ಕರ್ನಾಟಕ ಮಹಾಸಭಾ ಪರವಾಗಿಯೂ ಸಹ ಗೌರವಿಸಲಾಯಿತು. ಈ ಸಮಾರಂಭದಲ್ಲಿ ಕರ್ಣಾಟಕ ಬ್ಯಾಂಕ್ ಅಧ್ಯಕ್ಷರಾದ ಶ್ರೀ ಪ್ರದೀಪ್ ಕುಮಾರ್, ಶ್ರೀ ಟಿ ಶಾಮ್ ಭಟ್ ಮತ್ತು ಅನೇಕ ಪ್ರಮುಖರು ಭಾಗವಹಿಸಿದ್ದರು.

## ವರ್ತೂರು ಬ್ರಹ್ಮರಥೋತ್ಸವ



ದಿನಾಂಕ 28/1/2023 ರಥಸಪ್ತಮಿ ದಿನದಂದು ವರ್ತೂರಿನಲ್ಲಿ ನಡೆದ ಶ್ರೀ ಭೂನಿಳ ಸಮೇತ **ಶ್ರೀ ಚನ್ನರಾಯಸ್ವಾಮಿ ಬ್ರಹ್ಮರಥೋತ್ಸವಕ್ಕೆ** ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಶ್ರೀಯುತ ಅಶೋಕ ಹಾರನಹಳ್ಳಿರವರು ಆಗಮಿಸಿ ಭಗವಂತನ ಆಶೀರ್ವಾದ ಪಡೆದರು. ಇದೇ ಸಮಯದಲ್ಲಿ ವರ್ತೂರಿನ ವಿಪ್ರ ಬಾಂಧವರನ್ನು ಸಂಪರ್ಕಿಸಿ ಹೆಚ್ಚಿನ ಸಂಖ್ಯೆಯಲ್ಲಿ ಅಖಿಲ ಕರ್ನಾಟಕ ಮಹಾಸಭಾದಲ್ಲಿ ಸದಸ್ಯರಾಗಲು ಮನವಿ ಮಾಡಿದರು ಹಾಗೂ ಬ್ರಾಹ್ಮಣರ ಅಭಿವೃದ್ಧಿಗೆ ಶ್ರಮಿಸಲು ತಿಳಿಸಿದರು. ಈ ಸಂದರ್ಭದಲ್ಲಿ ವರ್ತೂರಿನ ಅನೇಕ ವಿಪ್ರ ಬಾಂಧವರು ಹಾಜರಿದ್ದರು.



ಸಾಗರದ ಹವ್ಯಕ ಮಹಿಳೆಯರ ನೇತೃತ್ವದಲ್ಲಿ ನಡೆಯುತ್ತಿರುವ ಅತ್ಮಬಂಧು ಸ್ವಸಹಾಯ ಸಂಘಗಳ ಒಕ್ಕೂಟದ ದಶಮಾನೋತ್ಸವ ಸಮಾರಂಭದ ಉದ್ಘಾಟನೆ ಈ ದಿನ 05.02.2023 ರಂದು ನಡೆಯಿತು




ಇಂದು ನಡೆದ ಚಿತ್ಪಾವನ ಸುವರ್ಣ ಸಂಭ್ರಮ ಕಾರ್ಯಕ್ರಮದಲ್ಲಿ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿ ಅವರು ಭಾಗವಹಿಸಿ ಸ್ವತಂತ್ರ ಸಂಗ್ರಾಮದಲ್ಲಿ ಹಾಗೂ ದೇಶ ಕಟ್ಟುವ ಕಾಯಕದಲ್ಲಿ ಚಿತ್ಪಾವನ ಬ್ರಾಹ್ಮಣರ ಕೊಡುಗೆಯನ್ನು ಸ್ಮರಿಸಿದರು, ಇವರೊಂದಿಗೆ ವಿಪ್ರ ನುಡಿ ಸಂಚಾಲಕರಾದ ಶ್ರೀ ಸುಬ್ಬ ರಾವ್, ಮಹಾಸಭಾ ಸಹಕಾರ್ಯದರ್ಶಿ ಶ್ರೀ ಕಾರ್ತಿಕ್ ಬಾಪಟ್ ಚಿತ್ಪಾವನ ಸಮಾಜದ ಅಧ್ಯಕ್ಷರಾದ ಶ್ರೀ ಗಣಪತಿ ಜೋಶಿ, ಕಾರ್ಯದರ್ಶಿಗಳಾದ ಗಜಾನನ ಗೋಖಲೆ ಭಾಗವಹಿಸಿದ್ದರು.

SARVODAYA LAND DEVELOPERS

# 29/2, 12th Main Road, Near Srinagar Bus Stand, Srinagar, Bangalore - 560 050.
E-mail: sarvodayalanddevelopers.nras@gmail.com

We **Sarvodaya Land Developers, Srinagar, Bangalore,** introduce ourselves as marketing team for Plots/Sites available exclusively for Brahmin Community situated at Chinkurchi Village of Kengeri Hobli, Bengaluru South

The Total area covered is 8.05 acres and comprise of all the basic amenities like electriciy. Sanitary, water etc.,

**Details about the property are as under:-**

1. All the legalities of the documents are scrutinized and verified by a professional.
2. The layout at present is in the formative stage of aforesaid basic amenities.
3. We provide Financial Assistance, through CANFIN HOMES to the interested buyers.
4. All the plots /sites available in the layout are at affordable price
5. The total available plots/sites in the layout at 219.

**Details of the Plots/Sites**

| Sl. No. | PLOT SIZE | NO FO SITE |
|---|---|---|
| 1 | 20 X 30 | 67 |
| 2 | 20 X 40 | 14 |
| 3 | 30 X 30 | 19 |
| 4 | 30 X 40 | 46 |
| 5 | Odd Sites | 73 |
| Total | | 219 |

**For more information, please approach the below contatc :**
**Pavan Kumar-Mob - 9945605677 and Lokesh -Mob - 9986480869**

ಜಾಹಿರಾತು

# ಶ್ರೀ ವಾದಿರಾಜ ವಿಜಯ ಧಾರ್ಮಿಕ ಮಂದಿರ

# 124, 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥ ದೇವಸ್ಥಾನದ ಎದುರು, ಸೀತಾ ಸರ್ಕಲ್,
ಬ್ಯಾಂಕ್ ಕಾಲೋನಿ, ಬೆಂಗಳೂರು–560 050.

## ಸ್ಥಳದ ಬಾಡಿಗೆ ಇರುವುದಿಲ್ಲ

ಉಪನಯನ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮಹವನ,
ಸತ್ಯನಾರಾಯಣ ಪೂಜೆ, ಇನ್ನಿತರ ದೇವತಾ ಕಾರ್ಯಗಳು,
ವೈಕುಂಠ ಸಮಾರಾಧನೆ ಪ್ರಯುಕ್ತ ಅನ್ನದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು
ಇತರ ಶುಭ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.
ಅಡಿಗೆಯನ್ನು ಮಡಿಯಲ್ಲಿ ಮಾಡಲಾಗುವುದು.

**ವಿವರಗಳಿಗೆ ಕಾರ್ಯಾಲಯವನ್ನು ಸಂಪರ್ಕಿಸಿ :**

**ದೂರವಾಣಿ : 080–26793054 ಮೊಬೈಲ್ 8277433666**

# ಡಾ. ಬಿ.ಎನ್.ವಿ. ಜ್ಯೋತಿ ರತ್ನ ಎಲ್ಲ ಪ್ರಶಸ್ತಿಗಿಂತ ಪ್ರತಿಷ್ಠಿತ





ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾಗಿ, ಜ್ಯೋತಿ ಸಮೂಹ ಸಂಸ್ಥೆಗಳ ಸಂಸ್ಥಾಪಕರಾಗಿ, ಹಲವಾರು ಧಾರ್ಮಿಕ ಸಂಸ್ಥೆಗಳಿಗೆ ಸಹಾಯ ಮಾಡಿ ವಿಪ್ರ ಸಮುದಾಯದ ಏಳಿಗೆಗಾಗಿ ತಮ್ಮ ಜೀವನವನ್ನು ಸಮರ್ಪಿಸಿದ ಮಹಾನ್ ವ್ಯಕ್ತಿ ಧಾರ್ಮಿಕ ಪ್ರವರ ಡಾ॥ ಬಿ.ಎನ್.ವಿ. ಸುಬ್ರಹ್ಮಣ್ಯ ಎಂದು ಮಾಜಿ ವಿಧಾನ ಪರಿಷತ್ ಸದಸ್ಯರಾದ ಎಂ.ಬಿ. ಭಾನುಪ್ರಕಾಶ್ ಅವರು ಹೇಳಿದರು.

ಬಿ.ಎನ್.ವಿ. ಅಂತಹ ವ್ಯಕ್ತಿ ಮತ್ತೆ ಸಮಾಜಕ್ಕೆ ಸಿಗಲ್ಲ. ರಾಜ್ಯಾದ್ಯಂತ ಇವತ್ತು ಸಹ ಡಾ॥ ಬಿ.ಎನ್.ವಿ. ಸುಬ್ರಹ್ಮಣ್ಯರವರ ಸೇವೆಯನ್ನು ಸದಾ ಸ್ಮರಿಸಿಕೊಳ್ಳುತ್ತಾರೆ ಎಂದು ತಿಳಿಸಿದರು. ಪ್ರಶಸ್ತಿಗಳಿಗೆ ಮೌಲ್ಯ ಬರುವುದು ಯಾವತ್ತೂ ಸಹ ಪ್ರಶಸ್ತಿಯನ್ನು ಪಡೆಯದ ಸಾಧಕರಿಗೆ ಗೌರವ ನೀಡಿದಾಗ. ಅಂತಹ ಉನ್ನತ ಪ್ರಶಸ್ತಿ

"ಬಿ.ಎನ್.ವಿ. ಜ್ಯೋತಿ ರತ್ನ" ಪುರಸ್ಕಾರ ಆಗಿದೆ ಎಂದು ಹೇಳಿದರು.

ಟ್ರಸ್ಟಿ ಎಂ. ನರಸಿಂಹನ್ ಮಾತನಾಡಿ ಪ್ರತಿ ವರ್ಷದಂತೆ ಪ್ರಶಸ್ತಿಯನ್ನು ಅರ್ಹ ಸಾಧಕರಿಗೆ ನೀಡುತ್ತಿದ್ದು, ಪ್ರಚಾರ ಇಲ್ಲದೆ ಸಾಧನೆ ಮಾಡುವವರನ್ನು ಸ್ವತಃ ಸಂಸ್ಥೆ ಹುಡುಕಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ ಎಂದು ತಿಳಿಸಿ, ಬಿ.ಎನ್.ವಿ. ಜೀವಂತ ಇಲ್ಲದಾಗ್ಯೂ ಸಹ ಇಷ್ಟೊಂದು ಜನ ಬಂದು ಸಹಕರಿಸುತ್ತಿರುವುದಕ್ಕೆ ಕೃಜತ್ಞತೆಗಳನ್ನು ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಜ್ಯೋತಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಸೀತಾ ಸುಬ್ರಹ್ಮಣ್ಯ, ಡಾ॥ ಬಿ.ಎನ್.ವಿ. ಸುಬ್ರಹ್ಮಣ್ಯ ಅಭಿಮಾನಿಗಳ ಬಳಗದ ಹೆಚ್.ಎನ್. ಹಿರಿಯಣ್ಣಸ್ವಾಮಿ, ಡಿ.ಎಸ್. ಹೊನ್ನಪ್ಪ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಅಭಿಮಾನಿಗಳು ಭಾಗವಹಿಸಿದ್ದರು.



**ಮಲೆನಾಡು ಅಭಿವೃದ್ಧಿ ಪ್ರತಿಷ್ಠಾನ ಸಾಗರದಲ್ಲಿ ನಡೆಸುವ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಸಮಾರಂಭದಲ್ಲಿ ಶಾಸಕರಾದ ಹಾಲಪ್ಪನವರು, ಸಂಸ್ಥೆಯ ಅಧ್ಯಕ್ಷರಾದ ಹರನಾಥ ರಾಯರು,ಶ್ರೀ ಅಶ್ವಿನ್ ಕುಮಾರ್ ಶಂಕರ ಮಠದ ಧರ್ಮಾಧಿಕಾರಿಗಳು, ರವಿ ನುಗ್ಗಿಮಕ್ಕಿ ವಕೀಲರು ರಾಘವೇಂದ್ರ ವಕೀಲರು, ಮಾ ಸ ನಂಜುಂಡಸ್ವಾಮಿ ಅವರು ಭಾಗವಹಿಸಿ ಅಖಿಲ ಕರ್ಣಾಟಕ. ಮಹಾ ಸಭೆ ಅಧ್ಯಕ್ಷರಿಗೆ ಗೌರವ ಸಮರ್ಪಣೆ ಮಾಡಿದರು. ನಂತರ ಸಾಗರದಲ್ಲಿ 24, 25, 26ರಂದು ನಡೆಯುವ ಮಹಾ ರುದ್ರ ಯಾಗದ ಸ್ಥಳದ ವೀಕ್ಷಣೆ ಮಾಡಲಾಯಿತು**

## ಎಲ್.ಟಿ. ಹೆಗಡೆರವರಿಗೆ ಶ್ರದ್ಧಾಂಜಲಿ

### ಶ್ರದ್ಧಾಂಜಲಿ



ಸಾಗರ ಕ್ಷೇತ್ರದ ಮಾಜಿ ಶಾಸಕರು ಹಾಗೂ ಸಮಾಜದ ಹಿರಿಯರೂ ಆದ ಎಲ್.ಟಿ. ತಿಮ್ಮಪ್ಪ ಹೆಗಡೆಯವರು ಇತ್ತೀಚೆಗೆ ನಿಧನರಾದರು. ಸಾಗರ ತಾಲ್ಲೂಕಿನ ಲಿಂಗದಹಳ್ಳಿ ಗ್ರಾಮದವರಾದ ಇವರು 94 ವರ್ಷತುಂಬು ಜೀವನವನ್ನು ನಡೆಸಿ, ವಯೋಸಹಜ ಕಾರಣಗಳಿಂದ ತಮ್ಮ ಇಹಲೋಕ ಯಾತ್ರೆಯನ್ನು ಪೂರ್ಣಗೊಳಿಸಿದರು. ಅವಿರತವಾಗಿ ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. 1996ರಲ್ಲಿ ಪೂತ್ತೂರಿನಲ್ಲಿ ನಡೆದ ಪ್ರಥಮ ವಿಶ್ವ ಹವ್ಯಕ ಸಮ್ಮೇಳನದ ಅಧ್ಯಕ್ಷರಾಗಿಯೂ ಸಮಾಜ ಸಂಘಟನೆಯಲ್ಲಿ ನೇತೃತ್ವ ವಹಿಸಿದ್ದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದ ಇವರು, 1978 ಮತ್ತು 1983ರಲ್ಲಿ ಎರಡು ಅವಧಿಗೆ ಸಾಗರ ವಿಧಾನಸಭಾ ಕ್ಷೇತ್ರದಿಂದ ಶಾಸಕರಾಗಿದ್ದರು. ಸಹಕಾರ ಧುರೀಣ, ರೈತ ಬಂಧುಗಳಾಗಿದ್ದ ಇವರು ರಾಜಕೀಯ ಕ್ಷೇತ್ರದಲ್ಲಿದ್ದರೂ ನಮ್ಮ ಸಂಸ್ಕೃತಿ ಹಾಗೂ ಆಚರಣೆಗಳನ್ನು ಉಳಿಸಿಕೊಂಡಿದ್ದ ಹೆಗ್ಗಳಿಕೆಯನ್ನು ಹೊಂದಿದ್ದರು ಹೆಗಡೆಯವರು. ಪತ್ನಿ ಸಾವಿತ್ರಮ್ಮ, ಪುತ್ರರಾದ ತಿಮ್ಮಪ್ಪ ಹಾಗೂ ಅಶೋಕ, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ. ಮೃತರ ಆತ್ಮಕ್ಕೆ ಸಾಯುಜ್ಯವನ್ನು, ಕುಟುಂಬಸ್ಥರಿಗೆ ದುಃಖಭರಿಸುವ ಶಕ್ತಿಯನ್ನೂ ಭಗವಂತನು ಅನುಗ್ರಹಿಸಲಿ ಎಂದು ಮಹಾಸಭಾ ಪರವಾಗಿ ಪ್ರಾರ್ಥಿಸುತ್ತೇವೆ.


IIShri Shankaralinga VijayateII




Reg No:BK-IV 152/19-20

ಆನಂದಾಸ್ ಸೇವಾ ಸದನ ಟ್ರಸ್ಟ್ (ರಿ)

Ananda's Seva Sadana Trust ®

'Senior Citizen Home Geriatric Home & Rehabilitation Centre'

Facilities Available :

- Geriatric/Oldage Care
- Emergency Oxygen Facility
- BIPAP/CPAP Care
- Blood Investigation
- Doctor/Nurses/Physiotherapists
- Television, WiFi, CCTV Surveillance
- Daily activities: Yoga, Bhajans, Meditation
- 24/7 Nursing Care
- Ambulance Facility
- Wheel Chair, walkmate
- RT/PEG Feed

OLD AGE HOME EXCLUSIVE FOR BRAHMINS

Dressing | injections | catheterization | IV Cannulation | RT/PEG Feeding



76762 89023 63625 43616 70906 95002

Anandas Brahmin anandassevasadana@gmail.com

www.anandassevasadana.com

We believe if you want Happiness in Life, Never be a Owner of Love, Always be Donor of Love !!

UNIT - 1 : # 40, 4th Main Road, 3rd Stage, BEML layout, Rajarajeshwari Nagar, Bengaluru - 560 098.

Ph : 080 - 4211 5788

UNIT - 2 : # 4-15, Survey No: 56, Muragappa Layout, Jawaregowda Nagar, Rajarajeshwari Nagar, Bengaluru - 560 098.

Ph : 080 - 4149 6133

# ಶುಕ್ಲಯಜುರ್ವೇದ ದ್ರಷ್ಟಾರರಾದ
# ಶ್ರೀಯೋಗೀಶ್ವರ ಯಾಜ್ಞವಲ್ಕರ ಕೊಡುಗೆ

**– ಕೈವಾರ ಕೃಷ್ಣಮೂರ್ತಿ**

**ಅಖಿಲ ಭಾರತ ಶ್ರೀ ಯಾಜ್ಞವಲ್ಕ್ಯ ಪರಿಷತ್,**



ಆತ್ಮೀಯ ವಿಪ್ರಬಾಂಧವರೇ,

ಆಧ್ಯಾತ್ಮ......

**ಈ ಮಣ್ಣಿನ ಗುಣ. ಮಣ್ಣೇನು, ಇಲ್ಲಿನ ಪಂಚಭೂತಗಳೂ ಅದನ್ನು ಹಾಸುಹೊಕ್ಕಾಗಿಸಿಕೊಂಡಿವೆ. ಇಲ್ಲಿನ ಗಾಳಿ, ಇಲ್ಲಿನ ನೀರು, ಇಲ್ಲಿನ ಮಣ್ಣು ಇಲ್ಲಿನ ತೇಜಸ್ಸು, ಇಲ್ಲಿನ ಆಕಾಶ ಎಲ್ಲವೂ ಆಧ್ಯಾತ್ಮವನ್ನು ಉಸುರುತ್ತವೆ, ಆಧ್ಯಾತ್ಮವನ್ನು ಒಸರುತ್ತವೆ.**

ಆಧ್ಯಾತ್ಮ......

**ಪ್ರತಿ ಜೀವಿಯ ಹಕ್ಕು, ಅದರ ಸಾಧನೆ**
**ಪ್ರತಿ ವ್ಯಕ್ತಿಯ ಕರ್ತವ್ಯ ತನ್ನ ಹಕ್ಕನ್ನು ಜೀವ**
**ತನ್ನದಾಗಿಸಿಕೊಳ್ಳಬೇಕೆಂದರೆ ಅದರ ಅರಿವು ಬೇಕು.**
**ಅದನ್ನು ಅರಿಯಬೇಕು. ಈ ಅರಿವ ಬೋಧಿಸುವವ**
**ಗುರುವಾಗುತ್ತಾನೆ. ಅಥವಾ ಗುರು ಈ ಅರಿವ**
**ಕೃಪೆದೋರುತ್ತಾನೆ. ಇಡಿಯ ಜಗತ್ತಿಗೆ ಈ ಅರಿವ ನೀಡುವ ಗುರು**
**– ಭಾರತ, ಮನು ಇದನ್ನೇ ನುಡಿದದ್ದು.**
**ಇಂದಿನ ನುಡಿ, ನಡೆ, ಹಾಡು, ಪಾಡು ಎಲ್ಲದರಲ್ಲೂ ಆಧ್ಯಾತ್ಮವಿದೆ.**

ದ್ವಾಪರಯುಗದ ಆದಿಯಲ್ಲಿ ಕೃಷ್ಣ ದ್ವೈಪಾಯನವ್ಯಾಸರು ಋಗ್ವೇದ ಯಜುರ್ವೇದ, ಸಾಮವೇದಗಳಲ್ಲಿ ಅಂತರ್ಗತವಾಗಿದ್ದ ಅಥಾರ್ವಾಂಗೀರಸ ವೇದವನ್ನು ಬೇರ್ಪಡಿಸಿ, ನಾಲ್ಕನೆಯ ವೇದವನ್ನಾಗಿ ಮಾಡಿದರು. ಈ ನಾಲ್ಕು ವೇದಗಳ ಪದ್ಧತಿಯಿಂದ ಭಿನ್ನವಾದ ಪದ್ಧತಿಯುಳ್ಳಂಥ ಎಂದರೆ ಮಂತ್ರ ಬ್ರಾಹ್ಮಣಗಳು ಬೇರೆ ಬೇರೆಯಾಗಿರದೆ ಏಕತ್ರವಾಗಿರುವಂತೆ ಮಿಶ್ರರಚನಾಯುಕ್ತವಾದ 'ಕೃಷ್ಣಯಜುರ್ವೇದ' (ಮಿಶ್ರ ಯಜುರ್ವೇದ) ಎಂಬ ನೂತನ ಪದ್ಧತಿಯನ್ನು ಯಜುರ್ವೇದದಿಂದ ಬೇರ್ಪಡಿಸಿದರು. ಅಂದಿನಿಂದ ಈ ಮಿಶ್ರ ಯಜುರ್ವೇದದಿಂದ ಬೇರೆ ಮಾಡಿ ಹೇಳುವುದಕ್ಕೋಸ್ಕರ ಪ್ರಾಚೀನ ಮೂಲವೇದವನ್ನು "ಶುದ್ಧ ಯಜುರ್ವೇದ" ಎಂದರೆ 'ಶುಕ್ಲ ಯಜುರ್ವೇದ' ಎಂಬ ಹೆಸರಿನಿಂದ ಸಂಬೋಧಿಸುವುದು ಕ್ರಮ ಪ್ರಾಪ್ತವಾಯಿತು.

ಶುಕ್ಲ ಯಜುರ್ವೇದದಲ್ಲಿ ದೇವತೆಗಳನ್ನು ಅರ್ಚಿಸುವ ವಿಧಿ ಯಜ್ಞವಿಧಿ ಹೇಳಿಕೊಡುವುದು, ಆದರೆ ಈ ವೇದದಲ್ಲಿ ಮಂತ್ರಗಳು ಮತ್ತು ಬ್ರಾಹ್ಮಣಗಳು ಮಿಶ್ರವಾಗಿರುವುದರಿಂದ ಸಾಧಕರಿಗೆ ಸ್ವಲ್ಪ ತೊಂದರೆಯುಂಟಾಗುತ್ತದೆ. ಈ ಸಂದರ್ಭದಲ್ಲಿ ಶ್ರೀ ಯಾಜ್ಞವಲ್ಕ್ಯರು ಶ್ರೀ ಸೂರ್ಯನಾರಾಯಣನನ್ನು ಕುರಿತು ತಪಸ್ಸು ಮಾಡಿ ಶುಕ್ಲಯಜುರ್ವೇದವನ್ನು ಪಡೆದುಕೊಂಡು ಪ್ರಪಂಚಕ್ಕೆ ಶುದ್ಧವಾಗಿ ಮಂತ್ರ ಮತ್ತು ಬ್ರಾಹ್ಮಣಗಳು ಬೇರೆ ಬೇರೆಯಾಗಿದ್ದು ಸಾಧಕನಿಗೆ ಅದ್ವರ್ಯುವಿಗೆ ಬಹಳ ಅನುಕೂಲವಾಗುವಂತೆ ಮಾಡಿದರು ಈ ರೀತಿ ಶುಕ್ಲ ಯಜುರ್ವೇದಕ್ಕೆ ದ್ರಷ್ಟಾರರಾದರು.

ಶುಕ್ಲ, ಕೃಷ್ಣ ಯಜುರ್ವೇದಗಳ ಬಗ್ಗೆ, ಕೃಷ್ಣಯಜುರ್ವೇದಾನ್ತರ್ಗತ ತೈತ್ತಿರಿಯ ಶಾಖೆ ಬ್ರಾಹ್ಮಣರಾದ ಶ್ರೀ ಶಂಕರಾಚಾರ್ಯರು ಮತ್ತು ಶ್ರೀ ಸಾಯಣಾಚಾರ್ಯರು ಹೀಗೆ ಹೇಳಿದ್ದಾರೆ.

ಶ್ರೀ ಶಂಕರಾಚಾರ್ಯರು, ತಾವು ಬರೆದ **ಬೃಹದಾರಣ್ಯಕೋಪನಿದಿಷದ್ಭಾಷ್ಯದ** ಕೊನೆಯಲ್ಲಿ (ಅ 6, ಬ್ರಾ 5):

**ತಾನೀಮಾನಿಶುಕ್ಲಾ ನೀತ್ಯವ್ಯಾಮಿಶ್ರಾಣಿ ಬ್ರಾಹ್ಮಣೇನ ।**
**ಅಥವಾ ಯಾನಿಮಾನಿ ಯಜೂಂಷಿ ತಾನಿ ಶುಕ್ಲಾನಿ ಶುದ್ಧಾ**
**ನೀತ್ಯೇತತ್ ॥**

ಎಂದು ಕಂಠೋಕ್ತವಾಗಿ ಹೇಳಿದ್ದಾರೆಂದರೆ ಈ ಶುಕ್ಲ ಯಜುರ್ವೇದದ ಸಂಹಿತೆಯು ಬ್ರಾಹ್ಮಣದಿಂದ ವ್ಯಾಮಿಶ್ರವಾಗಿರುವುದಿಲ್ಲ. ಆದ್ದರಿಂದ ಶ್ರೀ ಯಜುರ್ವೇದವು ಶುಕ್ಲ ಯಜುರ್ವೇದವು: ಎಂದರೆ ಶುದ್ಧ ಯಜುರ್ವೇದವೆಂದು ಇತ್ಯರ್ಥ. ಈ ಪ್ರಕಾರ ಶಂಕರಾಚಾರ್ಯರು ಘಂಟಾಘೋಷವಾಗಿಹೇಳಿದ್ದಾರೆ.

ಶ್ರೀ ಸಾಯಣಾಚಾರ್ಯರು ಇನ್ನೊಂದು ದೃಷ್ಟಿಯಿಂದ ಕೃಷ್ಣ ಯಜುರ್ವೇದದ ವ್ಯಾಖ್ಯೆಯನ್ನೂ, ಶುಕ್ಲ ಯಜುರ್ವೇದದ ವ್ಯಾಖ್ಯೆಯನ್ನೂ ಹೇಳಿ ಈ ಉಭಯ ಯಜುರ್ವೇದಗಳ ವಸ್ತುಸ್ಥಿತಿಯನ್ನು ನಿದರ್ಶನಕ್ಕೆ ತಂದುಕೊಟ್ಟಿದ್ದಾರೆ. ಅದು ಹೇಗೆಂದರೆ,

ಶ್ರೀ ಸಾಯಣಾಚಾರ್ಯರು ಶುಕ್ಲ ಯಜುರ್ವೇದ ಕಾಣ್ವ ಸಂಹಿತೆಯ ಭಾಷ್ಯದ ಉಪೋದ್ಘಾತದಲ್ಲಿ ಹೀಗೆ ಹೇಳಿದ್ದಾರೆ.

**ಆದ್ವರ್ಯವಂ ಕ್ವ ಚಿದ್ಧೌತ್ರಂ ಕ್ವಚಿದಿತ್ಯ ವ್ಯವಸ್ಥೆಯಾ ।**
**ಬುದ್ಧಿ ಮಾಲಿನ್ಯ ಹೇತುತ್ವಾದ್ಯಜುಃ ಕೃಷ್ಣಮಿತೀರ್ಯತೇ ॥**

ಅರ್ಥ: ಒಂದು ಸ್ಥಳದಲ್ಲಿ ಆದ್ವರ್ಯುವಿನಿಂದ ಕರ್ಮವಿವೇಚನೆಯು, ಮತ್ತಿನ್ನೆಲ್ಲೋ ಒಂದು ಸ್ಥಳದಲ್ಲಿ ಹೋತೃವಿನ ಕರ್ಮವಿವೇಚನೆಯು ಇದ್ದು, ತಿಳಿದುಕೊಳ್ಳಲು ಕ್ಲೇಶವಾಗುವಷ್ಟು ಅವ್ಯವಸ್ಥಿತವಾಗಿದ್ದಂತಹ ಯಜುರ್ವೇದಕ್ಕೆ ಕೃಷ್ಣ ಯಜುರ್ವೇದವೆಂದು ಹೆಸರು.

**ಯಾಜ್ಞವಲ್ಕ ಸ್ತತಃ ಸೂರ್ಯ ಮಾರಾಧ್ಯಾ ಸ್ಥಾದಧೀತವಾನ್ ।**
**ವ್ಯವಸ್ಥಿತ ಪ್ರಕರಣಂ ಯದ್ಯಜುಃ ಶುಕ್ಲಂತದೀರ್ಯತೇ ॥1॥**

**ಅರ್ಥ :** ಯಾಜ್ಞವಲ್ಕ್ಯರು ಸೂರ್ಯದೇವನನ್ನು ಭಕ್ತಿ ಪುರಸ್ಸರವಾಗಿ ಸೇವಿಸಿ, ಆ ಆದಿತ್ಯ ಋಷಿಯಿಂದ ಅಧ್ಯಯನ ಮಾಡಿದಂಥ ಯಜುರ್ವೇದದಲ್ಲಿ ವ್ಯವಸ್ಥಿತವಾದ ಪ್ರಕರಣಗಳಿರುವುದರಿಂದ ಈ ಯಜುರ್ವೇದಕ್ಕೆ ಶುಕ್ಲ ಯಜುರ್ವೇದವೆಂಬ ಹೆಸರು.

ಇಷ್ಟೆಲ್ಲಾ ವಿವರಣೆಯ ಮಥಿತಾರ್ಥವೇನೆಂದರೆ, ಸ್ವತಃ ಕೃಷ್ಣ ಯಜುರ್ವೇದೀಯ ಬ್ರಾಹ್ಮಣರಾದ ಶ್ರೀ ಶಂಕರಾಚಾರ್ಯರು, ಶ್ರೀಸಾಯಣಾಚಾರ್ಯರು, ಕೃಷ್ಣಯಜುರ್ವೇದ ಅವ್ಯವಸ್ಥಿತವಾಗಿ ಇರುತ್ತದೆಂದು ಮುಕ್ತಕಂಠದಿಂದ ಹೇಳಿದ್ದಾರೆ. ಇದು ಕೃಷ್ಣ ಯಜುರ್ವೇದದ ನಿಂದೆಯೆಂದು ಯಾರೂ ತಿಳಿಯಕೂಡದು.

ನಮ್ಮ ವಿಪ್ರ ಬಾಂಧವರು ಕೆಲವೊಂದು ಸ್ಥಳಗಳಲ್ಲಿ ತಪ್ಪರ್ಥ ಮಾಡಿಕೊಂಡು ಶುಕ್ಲ, ಕೃಷ್ಣ ಯಜುರ್ವೇದಗಳಲ್ಲಿ ತಾವು ಮೇಲು ಕೀಳೆಂಬ ಭಾವನೆಗಳಿಂದ ವರ್ತಿಸುತ್ತಿರುವುದು ಕಾಣಸಿಗುತ್ತಿರುವುದರಿಂದ ಈ ಬಗ್ಗೆ ತಿಳುವಳಿಕೆ ಮೂಡಿಸುವುದು ನಮ್ಮ ಕರ್ತವ್ಯವಾಗಿದೆ.

**"ಹೊಸನೀರು ಬಂದು ಹಳೆನೀರನ್ನು ಕೊಚ್ಚಿಕೊಂಡು ಹೋದಂತೆ"** ಎಂಬ ನಾಣ್ಣುಡಿಯಂತೆ, ಈಗ ಸುಮಾರು ಒಂದರಿಂದ ಎರಡು ಸಾವಿರವರ್ಷಗಳಂದೀಚೆಗೆ ಶ್ರೀಮತ್ ಭಗವತ್ಪಾದ ಶ್ರೀಶಂಕರಾಚಾರ್ಯರು ಶ್ರೀಮನ್‌ಮಧ್ವಾಚಾರ್ಯರು ಮತ್ತು ಶ್ರೀ ರಾಮಾನುಜಾಚಾರ್ಯರು ತಮ್ಮ ತಮ್ಮ ಸಿದ್ಧಾಂತಗಳೊಂದಿಗೆ ಅದ್ವೈತ, ದ್ವೈತ ಹಾಗೂ ವಿಶಿಷ್ಠಾದ್ವೈತವೆಂಬ ಮೂರು ಪಂಗಡಗಳನ್ನು ಸ್ಥಾಪಿಸಿ, ಮೊದಲಿನಿಂದ ಬಂದಂತಹ ವೇದಗಳನ್ನಾಧರಿಸಿದ ಪಂಗಡಗಳನ್ನು ಜನಮರೆತಂತಾಗಿ ಬಿಟ್ಟಿದೆ. ಮೊದಲು ಬ್ರಾಹ್ಮಣರು ತಮ್ಮನ್ನು ವೇದಗಳ ಅಡಿಯಲ್ಲಿ ಗುರ್ತಿಸಿಕೊಳ್ಳುತ್ತಿದ್ದರು ಅಂದರೆ ಋಗ್ವೇದಿಗಳು, ಶುಕ್ಲಯಜುರ್ವೇದಿಗಳು, ಕೃಷ್ಣಯಜುರ್ವೇದಿಗಳು ಸಾಮವೇದಿಗಳು ಹಾಗೂ ಅಥರ್ವಣವೇದಿಗಳು ಎಂದು, ಇಂದಿಗೂ ವೇದಗಳ ಅಡಿಯಲ್ಲಿ ಗುರ್ತಿಸಿಕೊಳ್ಳುವವರೆಂದರೆ ಶುಕ್ಲಯಜುರ್ವೇದಿಗಳು ಮಾತ್ರ. ಈ ಶುಕ್ಲಯಜುರ್ವೇದಿಯರಲ್ಲಿ ಮೂರು ಪಂಗಡದವರೂ ಇದ್ದಾರೆ ಅಂದರೆ ಆಚಾರ ವಿಚಾರಗಳಲ್ಲಿ ಅವರವರ ಭಕ್ತಿಗೆ ಅದ್ವೈತ, ದ್ವೈತ ಹಾಗೂ ವಿಶಿಷ್ಠಾದ್ವೈತವನ್ನು ಆಚರಣೆ ಮಾಡುತ್ತಾರೆ. ಆದರೆ ತಾವು ಮಾತ್ರ ತಮ್ಮ ಮೂಲವಾದ ಶುಕ್ಲಯಜುರ್ವೇದದಿಂದ ಗುರ್ತಿಸಿಕೊಳ್ಳುತ್ತಾರೆ. ಶ್ರೀಯೋಗಿಶ್ವರ ಯಾಜ್ಞವಲ್ಕ್ಯರ ಪರಂಪರಾಗತರಾದ ಶುಕ್ಲ ಯಜುರ್ವೇದಿಗಳು ಅವರ ಶಿಷ್ಯರಾದ ಕಾಣ್ವ (ದಕ್ಷಿಣಭಾರತದಲ್ಲಿ) ಮತ್ತು ಮಾಧ್ಯಂದಿನ (ಉತ್ತರ ಭಾರತದಲ್ಲಿ) ಶಾಖೆಯವರಾಗಿ ಗುರ್ತಿಸಿಕೊಳ್ಳುತ್ತಾರೆ.

ಅದ್ವೈತ ಮತಸ್ಥಾಪಕರಾದ ಭಗವತ್ಪಾದ ಶ್ರೀ ಶಂಕರಾಚಾರ್ಯರು ತಮ್ಮ ದಕ್ಷಿಣಾಮ್ನಾಯ ಪೀಠಕ್ಕೆ ಮೊದಲನೆಯ ಪೀಠಾಧಿಪತಿಗಳನ್ನಾಗಿಸಿದವರು ಶ್ರೀ ಸುರೇಶ್ವರಾಚಾರ್ಯರು ಶುಕ್ಲಯಜುರ್ವೇದಿಗಳು ಕಾಣ್ವಶಾಖೆಯವರು – ದ್ವೈತಮತ ಸ್ಥಾಪಕರಾದ ಶ್ರೀಮಧ್ವಾಚಾರ್ಯರು ಮತ್ತು ವಿಶಿಷ್ಠಾದ್ವೈತ ಮತ ಸ್ಥಾಪಕರಾದ ಶ್ರೀ ಮದ್ರಾಮಾನುಜಾಚಾರ್ಯರು ಪ್ರಥಮ ಶಾಖಾ, ಶುಕ್ಲಯಜುರ್ವೇದಿಗಳು ಆಗಿರುತ್ತಾರೆ. ಈಗ ಪ್ರಚಲಿತವಾಗಿರುವ ತ್ರಿಮತಸ್ಥ (ಸ್ಮಾರ್ತ, ಮಾಧ್ವ ಮತ್ತು ಶ್ರೀ ವೈಷ್ಣವ) ಬಾಂಧವರಲ್ಲಿ ಅವಿನಾಭಾವ ಸಂಬಂಧವಿರುವ ಶುಕ್ಲ ಯಜುರ್ವೇದಿಯ ಬ್ರಾಹ್ಮಣರು ಅಂದರೆ, ಪ್ರಥಮ ಶಾಖೆ–ಕಾಣ್ವಶಾಖೆ (ದಕ್ಷಿಣ ಭಾರತದಲ್ಲಿ) ಮಾಧ್ಯಂದಿನ ಶಾಖೆ (ಉತ್ತರಭಾರತದಲ್ಲಿ) ಜೀವನ ನಡೆಸುತ್ತಿದ್ದಾರೆ.

ಶ್ರೀ ಯೋಗೀಶ್ವರ ಯಾಜ್ಞವಲ್ಕರು ಮಹಾಪುರುಷರು, ಮಹಾ ಮೇಧಾವಿಗಳು, ಶುಕ್ಲಯಜುರ್ವೇದದ ದ್ರಷ್ಟಾರರು, ಶ್ರೇಷ್ಠ ಬ್ರಹ್ಮಾಜ್ಞಾನಿಗಳು ಎನ್ನುವುದರಲ್ಲಿ ಸಂಶಯವೇ ಇಲ್ಲ. ಇಲ್ಲಿ ವಿಶೇಷವಾಗಿ ಗಮನಿಸಬೇಕಾದ ಅಂಶವೇನೆಂದರೆ ಶ್ರೀ ಯಾಜ್ಞವಲ್ಕ್ಯರು ಕೇವಲ ಶುಕ್ಲಯಜುರ್ವೇದಿಗಳಿಗೆ ಮಾತ್ರ ಗುರುಗಳಲ್ಲ ಅವರು ಜಗದ್ಗುರುಗಳು, ವೈದಿಕಸಾಹಿತ್ಯಕ್ಕೆ ಅವರು ಕೊಟ್ಟ ಕೊಡುಗೆ ಸರ್ವರಿಗೂ ಮಾನ್ಯವಾದದು ಹೀಗಾಗಿ ಎಲ್ಲ ವೇದಗಳ ಎಲ್ಲ ಶಾಖೆಯವರಿಗೂ ಗುರುಗಳು.

ನಾಡಿನ ಸಮಸ್ತ ವಿಪ್ರ ಬಾಂಧವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ನಾವು ಬ್ರಾಹ್ಮಣರೆಲ್ಲ ಒಂದೇ, ಯಾರೂ ಹೆಚ್ಚು ಕಡಿಮೆಯಿಲ್ಲ ಇದನ್ನು ತಿಳಿದುಕೊಂಡು ನಾವೆಲ್ಲ ಒಂದಾಗಿ, ಒಗ್ಗಟ್ಟಿನಿಂದ ಬಾಳೋಣ.

"ನಾವೆಲ್ಲಾ ಬ್ರಾಹ್ಮಣರು ಅಥವಾ ವಿಪ್ರರು"


**ಬದರಿನಾಥ ಯಾತ್ರಾ ಸಂಘ, ಬೆಳಗಾವಿ-ಬೆಂಗಳೂರು**
**ಇವರಿಂದ ಪವಿತ್ರ ಮೋಕ್ಷಧಾಮಗಳ ಧಾರ್ಮಿಕ ಯಾತ್ರೆ**
**ಬೆಂಗಳೂರಿನಿಂದ ಬೆಂಗಳೂರುವರೆಗೆ ವಿಶೇಷ ಯಾತ್ರೆ**
**ಕೇವಲ 30 ಜನರಿಗೆ ಮಾತ್ರ**

★ **ಲೇಹ/ಲಡಾಖ ಸಿಂಧುನದಿ ಯಾತ್ರೆ – ಸ್ಥಳಗಳು :** ಸಿಂಧುನದಿ ಪುಣ್ಯಸ್ನಾನ ಮತ್ತು ಶ್ರಾದ್ಧ, ಲೇಹ-ಲಡಾಖ, ಪೆಂಗಾಂಗ್ ಲೇಕ. **ರೂ. 60000 ವಿಮಾನ ಪ್ರವಾಸ, ಯಾತ್ರೆ ದಿ. 24/06 ರಿಂದ 28/06/2023 ವರೆಗೆ (ಬುಕಿಂಗ್‌ಗೆ ಕೊನೆ ದಿ. 15/02/2023)**

**ಸೂಚನೆ :** ಬ್ರಾಹ್ಮಣರಿಂದ ಪ್ರತಿದಿನ ಚಹಾ/ಕಾಫಿ, ಫಲಹಾರ, ಊಟ, 2 X 2 ಡಿಲಕ್ಸ್ ರೂಮ್ ವಸತಿಯ ವ್ಯವಸ್ಥೆಯಿದೆ. ಯಾತ್ರೆಗೆ ಬರುವವರು ಮರಳಿಸಲಾಗದ ಮುಂಗಡ ಹಣ ರೂ. 30000/- ಗಳನ್ನು ತುಂಬಿ ತಮ್ಮ ಸೀಟನ್ನು ಕಾಯ್ದಿರಿಸಿಕೊಳ್ಳಬೇಕಾಗಿ ವಿನಂತಿ.

**ಸಂಪರ್ಕಿಸಿ : ಬೆಳಗಾವಿ – ಫೋನ್ 9448347054**
**ಬೆಂಗಳೂರು – 9103097587**
**(ಅಕ್ಟೋಬರ ಪಕ್ಷಮಾಸದಲ್ಲಿ 12 ದಿನಗಳ ರಾಮೇಶ್ವರ ಯಾತ್ರೆ, ಅಧಿಕ ಮಾಸದಲ್ಲಿ ನೈಮಿಷಾರಣ್ಯದಲ್ಲಿ ಭಾಗವತ ಪುರಾಣ)**

# ಭಿಷಗ್ರತ್ನ ಬಿ.ವಿ. ಪಂಡಿತರು

**ಸುರೇಶ್ ಮೂನ**



ಪ್ರಸಿದ್ಧ ಪುಣ್ಯಕ್ಷೇತ್ರವಾದ ನಂಜನಗೂಡು ಎಂದ ಕೂಡಲೇ ಹಳೆ ಮೈಸೂರು ವಿಭಾಗದ ಹಳಬರಿಗೆಲ್ಲ ಕೂಡಲೇ ನೆನಪಿಗೆ ಬರುತ್ತಿದ್ದುದು ವಿಶಾಲವಾದ ಶ್ರೀಕಂಠೇಶ್ವರ ದೇವಾಲಯ, ನಂಜನಗೂಡು ರಸಬಾಳೆ ಎಂದೇ ಪ್ರಸಿದ್ಧವಾದ ಬಾಳೆಹಣ್ಣು, ಹಾಗೂ ನಂಜನಗೂಡು ಟೂತ್ ಪೌಡರ್. ಈ ದಂತ ಮಂಜನವು ನಮ್ಮನಾಡಿನಲ್ಲಷ್ಟೇ ಅಲ್ಲದೆ ಇತರ ರಾಜ್ಯಗಳಲ್ಲೂ ಮನೆ ಮಾತಾಗಿತ್ತು. ಇದು ನಂಜನಗೂಡು ಸದ್ವೈದ್ಯ ಶಾಲಾ ಆಯುರ್ವೇದ ಸಂಸ್ಥೆಯ ಸಂಸ್ಥಾಪಕರಾದ ಮುಲುಕು ನಾಡು ಸಮುದಾಯಕ್ಕೆ ಸೇರಿದ ಬಿ. ವೆಂಕಟಸುಬ್ರಹ್ಮಣ್ಯ ಪಂಡಿತರ ಮೆದುಳಿನ ಶಿಶು. ಸುಮಾರು ಒಂದು ಶತಮಾನದ ಹಿಂದೆಯೇ ಜನಸಾಮಾನ್ಯರ ಆರೋಗ್ಯದ ಅನುಕೂಲಕ್ಕಾಗಿ ಕೈಗೆಟುಕುವ ಬೆಲೆಯಲ್ಲಿ ಆಯುರ್ವೇದ ಔಷಧಿಗಳನ್ನು ತಯಾರಿಸಿ ನೀಡುತ್ತಿದ್ದ ಬಿ ವಿ ಪಂಡಿತರೆಂದೆ ಪ್ರಸಿದ್ಧರಾದ ಇವರ ಜೀವನ, ಸಾಧನೆ ಇಂದಿಗೂ ಸ್ಫೂರ್ತಿದಾಯಕವಾಗಿದೆ. ಹೀಗಾಗಿ, ಇವರ ಬದುಕಿನ ಒಂದು ಕಿರು ಪರಿಚಯವನ್ನು ಇಲ್ಲಿ ಮಾಡಿಕೊಡಲಾಗುತ್ತಿದೆ. ಇದಕ್ಕಾಗಿ ನಂಜನಗೂಡಿನ ಸದ್ವೈದ್ಯ ಶಾಲಾ ವನ್ನು ಸಂಪರ್ಕಿಸಿದಾಗ ಅಲ್ಲಿನ ಬಿ ವಿ ಪಂಡಿತರ ಮೊಮ್ಮಕ್ಕಳಾದ ಶ್ರೀ ರಾಜೇಶ್ ಶ್ರೀನಿವಾಸನ್,1988 ರಲ್ಲಿ ಹೊರ ತಂದ ಬಿ ವಿ ಪಂಡಿತರ ಶತಮಾನೋತ್ಸವದ ಸಂಸ್ಮರಣ ಸಂಪುಟ ಮತ್ತು ಈ ಮಹನೀಯರ ಉತ್ತಮ ಫೋಟೋವನ್ನು ಕೂಡಲೇ ಕಳುಹಿಸಿಕೊಟ್ಟು ಸಹಕರಿಸಿದ್ದಾರೆ. ಅವರಿಗೆ ಕೃತಜ್ಞತೆಗಳು.

ಬಿವಿ ಪಂಡಿತರು ಹುಟ್ಟಿದ್ದು 1887ರ ಫೆಬ್ರವರಿ 23 ನೇ ತಾರೀಖಿನಂದು ನಂಜನಗೂಡಿನ ಬ್ರಾಹ್ಮಣ ಕುಟುಂಬದಲ್ಲಿ .ಇವರ ಪೂರ್ವಿಕರು ಸ್ವರಾವಧಾನಿಗಳೆಂಬ ಬಿರುದನ್ನು ಗಳಿಸಿದ್ದರು. ಪಂಡಿತರ ಜನನವಾಗಿದ್ದು ತಂದೆ ನಂಜುಂಡಾವಧಾನಿಗಳ ಮರಣದ ನಂತರ. ಹೀಗಾಗಿ ತಾಯಿ ಕೆಂಚಮ್ಮ ಅವರ ವಾತ್ಸಲ್ಯ ಪೂರ್ಣ ಪೋಷಣೆಯಲ್ಲಿ ಬೆಳೆದರು. 16ನೇ ವಯಸ್ಸಿನಲ್ಲಿ ಮೈಸೂರಿನ ಮಿಷನ್ ಹೈಸ್ಕೂಲಿನಲ್ಲಿ ಓದುತ್ತಿದ್ದಾಗಲೇ ಪ್ರಥಮ ವಿವಾಹವಾಗಿ ಕೇವಲ ಆರು ತಿಂಗಳಿನಲ್ಲಿ ಪತ್ನಿ ವಿಯೋಗವನ್ನು ಅನುಭವಿಸಿದರು. ಆದರೆ ಧೃತಿಗೆಡದೆ ವಿದ್ಯಾಭ್ಯಾಸವನ್ನು ಮುಂದುವರೆಸಿ ತಾಯಿಗೆ ಆರ್ಥಿಕವಾಗಿಯೂ ನೆರವು ನೀಡಿದರು.

ಈ ಮಧ್ಯೆ, ಮೈಸೂರಿನಲ್ಲಿ ಪ್ರಸಿದ್ಧವಾಗಿದ್ದ ಪಾಳ್ಯಂ ವೆಂಕಟಾಚಲ ಪಂಡಿತರ ಶ್ರೀ ಸೀತಾ ರಾಘವ ವೈದ್ಯಶಾಲೆಯಲ್ಲಿ ಸಹಾಯಕರಾಗಿ ಕೆಲಸ ಮಾಡುವ ಅವಕಾಶ ದೊರಕಿತು. ಇದರಿಂದಾಗಿ ಔಷಧಿಗಳ ತಯಾರಿಕೆ,ಅವುಗಳನ್ನು ಕಾಗದದ ಪಟ್ಟಣಗಳಲ್ಲಿ ತುಂಬುವುದು, ರವಾನೆ ಮಾಡುವುದು, ಲೆಕ್ಕಪತ್ರ ಬರೆಯುವುದು ಹೀಗೆ ವ್ಯವಹಾರದ ವಿವಿಧ ಆಯಾಮಗಳ ಪರಿಣಿತಿ ದೊರೆಯಿತು. ಇದರ ಜೊತೆಗೆ ಮೆಟ್ರಿಕ್ಯುಲೇಷನ್ ಪರೀಕ್ಷೆ ಮುಗಿಸಿದ ನಂತರ ಮೈಸೂರಿನಲ್ಲಿ ಆಗ ತಾನೆ ಪ್ರಾರಂಭವಾಗಿದ್ದ ಆಯುರ್ವೇದ ಕಾಲೇಜನ್ನು ಸೇರಿ ವಿದ್ಯಾರ್ಥಿ ವೇತನವನ್ನು ಗಳಿಸಿಕೊಂಡರು. ಈ ಸಂಸ್ಥೆಯಿಂದ 'ಆಯುರ್ವೇದ ವಿದ್ವಾನ್' ಪದವಿ ಪಡೆದ ನಂತರ ಸಂದರ್ಭಗಳಿಗೆ ಅನುಗುಣವಾಗಿ ತಮ್ಮ ದ್ವಿತೀಯ ಪತ್ನಿ ಪುತ್ರ ಸೇರಿದಂತೆ ಕುಟುಂಬದೊಡನೆ 1912ರ ವೇಳೆಗೆ ನಂಜನಗೂಡಿಗೆ ಮರಳಿದರು. ಇಲ್ಲಿ ಇವರು ತಾವು ಕಲಿತ ವಿದ್ಯೆಯನ್ನು ಕಾರ್ಯರೂಪಕ್ಕೆ ಇಳಿಸಿದ್ದು ಹಲ್ಲು ಪುಡಿ ಮತ್ತು ಕಸ್ತೂರಿ ಮಾತ್ರೆಗಳ ತಯಾರಿಕೆಯ ಮೂಲಕ. ಈ ಹಲ್ಲುಪುಡಿಯ ತಯಾರಿಕೆಯ ಪರಿಕಲ್ಪನೆ ಇವರಲ್ಲಿ ಮೂಡಲು ಒದಗಿ ಬಂದ ಸಂದರ್ಭ ಬಹಳ ಕುತೂಹಲಕಾರಿಯಾಗಿದೆ ಹಾಗೂ ದೈವ ಸಂಕಲ್ಪ ವೆಂದು ತೋರುತ್ತದೆ.

ಇವರಿನ್ನು ಆಯುರ್ವೇದ ಕಾಲೇಜಿನಲ್ಲಿ ಕೊನೆಯ ವರ್ಷದಲ್ಲಿ ಓದುತ್ತಿದ್ದಾಗಲೇ ಮಾಗಡಿ ನಂಜುಂಡ ಪುರಾಣಿಕರ ಮನೆಯಲ್ಲಿ ನಡೆಯುತ್ತಿದ್ದ ಹೋಮ ಕಾರ್ಯದಲ್ಲಿ ಭಾಗವಹಿಸಿದರು. ಪುರಾಣಿಕರು ಹೋಮಕುಂಡದಿಂದ ತೆಗೆಯುತ್ತಿದ್ದ ಭಸ್ಮ ಬೆಳ್ಳಗಿದ್ದುದನ್ನುನೋಡಿ ಅದು ಭತ್ತದ ಹೊಟ್ಟಿನಿಂದ ಆದದ್ದೆಂದು ತಿಳಿದುಕೊಂಡರು. ಕೂಡಲೇ ಇವರಿಗೆ ಆ ಹೊಟ್ಟನ್ನು ಬಳಸಿ ಹಲ್ಲು ಪುಡಿಯನ್ನು ತಯಾರಿಸಬಹುದೆಂಬ ಯೋಚನೆ ಹೊಳಿಯಿತು. ಮನೆಗೆ ಹಿಂತಿರುಗಿ ಭತ್ತದ ಹೊಟ್ಟಿನಿಂದ ಭಸ್ಮ ತಯಾರಿಸಿ ಅದಕ್ಕೆ ಮೂಲಿಕೆ,ಪರಿಮಳ ದ್ರವ್ಯ ಹಾಗೂ ಬಣ್ಣ ಇವುಗಳನ್ನು ಮಿಶ್ರ ಮಾಡಿ ಹಲ್ಲು ಪುಡಿಯನ್ನು ತಯಾರಿಸಿದರು. ಇದನ್ನು ಬಳಸಿದ ಆಪ್ತರಿಂದ ಬಂದ ಉತ್ತಮ ಪ್ರತಿಕ್ರಿಯೆಯಿಂದಾಗಿ ದೊಡ್ಡ ಪ್ರಮಾಣದಲ್ಲಿ ಜನಸಾಮಾನ್ಯರಿಗೆ ಅನುಕೂಲ ವಾಗುವಂತೆ ತಯಾರಿಸುವ ನಿರ್ಧಾರ ಮಾಡಿದರು .ಸ್ವಲ್ಪ ಸಮಯದಲ್ಲೇ ಇದರ ಖ್ಯಾತಿ ವಿಶಾಲ ವ್ಯಾಪ್ತಿಯನ್ನು ಪಡೆಯಿತು. ನಂಜನಗೂಡಿನಿಂದ ಮೈಸೂರಿಗೆ ಹೋಗುವ ಪ್ಯಾಸೆಂಜರ್ ರೈಲಿನಲ್ಲಿ ಈ ಹಲ್ಲುಪುಡಿಯ ಪಾರ್ಸಲ್ ಅನ್ನು ಕಳುಹಿಸಲಾಗುತ್ತಿತ್ತು. ಇದರಿಂದಾಗಿ ಈ ರೈಲಿಗೆ 'ಟೂತ್ ಪೌಡರ್ ಎಕ್ಸ್‌ಪ್ರೆಸ್' ಎಂಬ ಹೆಸರೇ ಬಂದುಬಿಟ್ಟಿತ್ತು.ಈ ಪಾರ್ಸಲ್ಲಿನ ಭಾರದಿಂದಾಗಿ ರೈಲು ನಿಧಾನವಾಗಿಚಲಿಸುತ್ತಿತ್ತಂತೆ. ಯಾವ ವೈಜ್ಞಾನಿಕ ಉಪಕರಣಗಳ ನೆರವು ಇಲ್ಲದೆ ಸಾಧಾರಣ ವಸ್ತುವಿನಿಂದ ನಮ್ಮ ನಾಡಿಗೆ ಹೆಮ್ಮೆಯನ್ನು ಮತ್ತು ಕೀರ್ತಿಯನ್ನು ತಂದು ಕೊಡುವಂತಹ ಹಾಗೂಜನಸಾಮಾನ್ಯರಿಗೆ ಉಪಯುಕ್ತವಾದ ವಸ್ತುವನ್ನು ತಯಾರಿಸಿದ ಮಹಾನ್ ಸಂಶೋಧಕ ಬಿವಿ ಪಂಡಿತರು.

1918ರ ಸಮಯದಲ್ಲಿ ಇನ್ಫ್ಲುಯೆನ್ಸ ಸಾಂಕ್ರಾಮಿಕ ರೋಗ ನಿವಾರಣೆಯಲ್ಲಿ ಇವರು ತಯಾರಿಸಿದ ಶ್ರೀಕರ ಕಸ್ತೂರಿ ಮಾತ್ರೆ ಅತ್ಯಂತ ಪರಿಣಾಮಕಾರಿಯಾಗಿ ಜನಪ್ರಿಯವಾಯಿತು.

1913 ರಲ್ಲಿ ಇವರು ತಮ್ಮ ಔಷಧಿಯ ತಯಾರಿಕೆ ಸಂಸ್ಥೆಗೆ ಸದ್ವೈದ್ಯ ಶಾಲಾ ಎಂದು ನಾಮಕರಣ ಮಾಡಿದರು. ಈ ಸಂಸ್ಥೆಯ ಮೂಲಕ ಪಂಡಿತರು ಇನ್ನೂ ಹಲವಾರು ವೈವಿಧ್ಯಮಯವಾದ ಆಯುರ್ವೇದದ ಔಷಧಿಗಳನ್ನು ತಯಾರಿಸಿದರು.ಇವೆಲ್ಲವೂ ಜನಪ್ರಿಯವಾಗಿ ಭಾರತದ ಒಂದು ಪ್ರಮುಖ ಆಯುರ್ವೇದ ಔಷಧ ತಯಾರಿಕಾ ಸಂಸ್ಥೆ ನಂಜನಗೂಡು ಸದ್ವೈದ್ಯ ಶಾಲಾ ಎಂಬ ಖ್ಯಾತಿಯನ್ನು ಆಗಲೇ ಪಡೆಯಿತು.

ಪಂಡಿತರು ತಮ್ಮದೇ ಗುಲಾಬಿ ತೋಟವನ್ನು ಬೆಳೆಸಿ ಆ ಹೂವಿನಿಂದ ಗುಲ್ಕನ್ ತಯಾರಿಸುತ್ತಿದ್ದರು. ಒಮ್ಮೆ, ಆಗಿನ ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ಅವರು ಬಂದಿದ್ದಾಗ ತಾವೇ ತಯಾರಿಸಿದ ಗುಲ್ಕನ್ನನ್ನು ಅವರಿಗೆ ನೀಡಿದರು. ಅದನ್ನು ಸವಿದ ದಿವಾನರು ನಾನು ದೇಶವೆಲ್ಲ ಸುತ್ತಿದ್ದೀನಿ, ಆದರೆ ಇಷ್ಟು ಸೊಗಸಾದ ಗುಲ್ಕನ್ನನ್ನು ನೋಡಿರ್ಲಿಲ್ಲ ಎದ್ದರಂತೆ. ಇವರ ಔಷಧಿಗಳ ತಯಾರಿಕಾ ಘಟಕ ದಿವಾನ್ ಸರ್ ಎಂ ವಿಶ್ವೇಶ್ವರಯ್ಯನವರ ಮೆಚ್ಚುಗೆಯನ್ನು ಗಳಿಸಿತ್ತು .

ಪಂಡಿತರು ಉತ್ತಮವಾದ ಕ್ರೀಡಾಪಟುವು ಆಗಿದ್ದರು .ಟೇಬಲ್ ಟೆನ್ನಿಸ್, ಫುಟ್ಬಾಲ್, ಟೆನ್ನಿಸ್ ಆಟಗಳನ್ನು ಅವರು ಬಹಳ ಚೆನ್ನಾಗಿ ಆಡುತ್ತಿದ್ದರು. 1928 ರಿಂದ 1935 ರವರೆಗೆ ನಂಜನಗೂಡಿನಲ್ಲಿ ಅನೇಕ ಟೂರ್ನಮೆಂಟ್ ಗಳ ಅಧ್ಯಕ್ಷರಾಗಿ ಬೆಳ್ಳಿ ಕಪ್ಪುಗಳನ್ನು ಕೊಡುತ್ತಿದ್ದರು. ನಂಜನಗೂಡು ಟೆನ್ನಿಸ್ ಕ್ಲಬ್ ಅನ್ನು ತಮ್ಮ ಸ್ವಂತ ಖರ್ಚಿನಿಂದಲೇ ಸುಮಾರು 25 ವರ್ಷಗಳ ಕಾಲ ಯಶಸ್ವಿಯಾಗಿ ನಡೆಸಿದರು.

ಇವರು ಕೊಡುಗೈ ದಾನಿಯೂ ಹೌದು. ಯಾವ ಯತಿಗಳು ನಂಜನಗೂಡಿಗೆ ಬಂದರು ಮೊದಲು ಪಂಡಿತರ ಮನೆ ಧನ್ವಂತರಿ ನಿವಾಸ ದಲ್ಲಿ ಪಾದಪೂಜೆ ಮತ್ತು ಭಿಕ್ಷೆ ಏರ್ಪಾಟ್ ಆಗುತ್ತಿತ್ತು. ಈ ಊರಿನಲ್ಲಿ ನಡೆಯುತ್ತಿದ್ದ ಎಲ್ಲಾಧಾರ್ಮಿಕ ಕಾರ್ಯಕ್ರಮಗಳಲ್ಲಿ ಬಿ ವಿ ಪಂಡಿತರ ಪ್ರಮುಖ ಪಾತ್ರ ಇರುತ್ತಿತ್ತು. ನಮ್ಮ ರಾಜ್ಯದಲ್ಲಿ ನಡೆಯುತ್ತಿದ್ದ ಆಯುರ್ವೇದ ಸಮ್ಮೇಳನಗಳ ಅಧ್ಯಕ್ಷರಾಗಿ ನಿರ್ವಾಹಕರಾಗಿ ಇವರು ಕಾರ್ಯನಿರ್ವಹಿಸುತ್ತಿದ್ದರು. ಅಗ್ರಹಾರ, ಧರ್ಮಶಾಲಾ, ಶಂಕರ ಮಠ, ಶ್ರೀ ಧನ್ವಂತರಿ ಆರೋಗ್ಯ ಆಶ್ರಮ ಮುಂತಾದವುಗಳೆಲ್ಲ ಇವರ ಕೊಡುಗೆಗಳೆ. ಇವರ ತೇರಾ ಕೋಟಿ ಶ್ರೀ ರಾಮ ನಾಮ ಲೇಖನ ಮಹೋತ್ಸವ, ಧನ್ವಂತರಿ ಜಯಂತಿ ಇವುಗಳ ವೈಭವವನ್ನು ಕೊಂಡಾಡದವರೇ ಇಲ್ಲ.

ಶ್ರೀ ಶೃಂಗೇರಿ ಮಠದ ಜಗದ್ಗುರು ಸಂಸ್ಥಾನದ ' ಭಿಷಗ್ರತ್ನ'ಎಂಬ ಅಪರೂಪದ ಬಿರುದನ್ನು ಪಡೆದ ಹೆಮ್ಮೆ ಪಂಡಿತರದು.

ಹೀಗೆ 89 ವರ್ಷಗಳ ಕಾಲ ತುಂಬು ಜೀವನ ನಡೆಸಿದ ನಮ್ಮ ನಾಡಿನ ಈ ಮಹಾನ್ ಚೇತನ ನಾರಾಯಣ ನಾಮವನ್ನು ಜಪಿಸುತ್ತಾ 1975ರ ಮಹಾನವಮಿಯ ದಿನದಂದುಭಗವಂತನಲ್ಲಿ ಐಕ್ಯವಾಯಿತು.

ಜಾಹಿರಾತು

# ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ

# Sri Srinivasa Nilaya Dharmika Sabha Mandira

ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ
ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085

ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ, ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ, ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.


ಸ್ಥಳದ ಬಾಡಿಗೆ ಇರುವುದಿಲ್ಲ.

ದಕ್ಷಿಣ ಮತ್ತು ಉತ್ತರ ಭಾರತದ
ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು
ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ
ದೂರವಾಣಿ : 2672 2267, 98866 55755

## ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಾಹ್ಮಣರ ಪಾತ್ರ–5

# ಚಾಪೇಕರ್ ಸಹೋದರರು

ಛಾಯಾಪತಿ ಕೆ.ಎನ್.



**"ನಾನು ಅಂತ್ಯಯಾತ್ರೆಗೆ ಸಿದ್ದನಾಗುತ್ತಿದ್ದೇನೆ. ಗೀತಾ ಪ್ರತಿ ತಮ್ಮಲ್ಲಿದ್ದರೆ ನನಗೆ ಕೃಪೆ ಮಾಡಿ ಕೊಡಿ. ಇನ್ನೊಂದು ಬಿನ್ನಹ, ನನ್ನ ಶವ ಸಂಸ್ಕಾರವನ್ನು ಬ್ರಾಹ್ಮಣರಿಂದಲೇ ಮಾಡಿಸಿ".**

ಇದು ಬ್ರಾಹ್ಮಣರಾದ ಚಾಪೇಕರ ಸಹೋದರರಲ್ಲಿ ಹಿರಿಯನಾದ ದಾಮೋದರ ಚಾಪೇಕರ ತಿಲಕರಲ್ಲಿ ಮಾಡಿದ ಮನವಿ. ಭಗವದ್ಗೀತೆಯ ಬಗ್ಗೆ ಇಟ್ಟ ನಂಬಿಕೆ, ಭಕ್ತಿ, ಶ್ರದ್ಧೆ ಹಾಗೂ ಬ್ರಾಹ್ಮಣರಿಂದಲೇ ಶವ ಸಂಸ್ಕಾರದ ಅಪೇಕ್ಷೆ, ಪ್ರಾಣಹೋಗುವ ಸಮಯದಲ್ಲೂ ಇವೆರಡಕ್ಕೂ ನೀಡಿದ ಮಹತ್ವ ಎಂಥಹ ಅನುಕರಣೀಯ ಆದರ್ಶ.

ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಬ್ರಾಹ್ಮಣರ ಬಲಿದಾನ ಬಹು ಸಂಖ್ಯೆಯಲ್ಲಿದೆ. ಅವರಲ್ಲಿ ಯಾರಿವರು ಚಾಪೇಕರ ಸಹೋದರರು? ನಗುನಗುತ್ತ ಗಲ್ಲಿಗೆ ಕುತ್ತಿಗೆಯೊಡ್ಡುತ್ತ ತಾಯಿ ಭಾರತಿಯ ದಾಸ್ಯ ಮುಕ್ತಿಗಾಗಿ ಬಲಿದಾನವಾದ ಯುವಕರೇ ದಾಮೋದರ ಹರಿ ಚಾಪೇಕರ, ಬಾಳಕೃಷ್ಣ ಹರಿ ಚಾಪೇಕರ ಮತ್ತು ವಾಸುದೇವ ಹರಿ ಚಾಪೇಕರ ಸಹೋದರರು.

ಚಾಪೇಕರ ಮನೆತನದ ಮೂಲ ಸ್ಥಳ ಮಹಾರಾಷ್ಟ್ರದ ಪೂನ ಸಮೀಪದಲ್ಲಿರುವ ಚಿಂಚವಡಳ್ಳಿ. ಚಾಪೇಕರ ಸಹೋದರರ ತಂದೆ ಹರಿಬಾವು, ತಾಯಿ ಲಕ್ಷ್ಮೀಭಾಯಿ. ಇವರ ಮೊದಲ ಮಗನೇ ದಾಮೋದರ ಹರಿ ಚಾಪೇಕರ. 1869 ಜೂನ್ 25ರಂದು ಶುಕ್ರವಾರ ಚಿಂಚವಡದಲ್ಲಿ ಹುಟ್ಟಿದನು. 1873ರ ಮೇ12ರಂದು ಬಾಲಕೃಷ್ಣ ಹರಿ ಚಾಪಕರನೂ 1880 ಮೇ 8 ರಂದು ವಾಸುದೇವ ಹರಿ ಚಾಪೇಕರನೂ ಹುಟ್ಟಿದರು. ತಂದೆ ಇಂಗ್ಲಿಷ್ ಶಿಕ್ಷಣ ಪಡೆದಿದ್ದರು. ಜೊತೆಗೆ ಸಂಸ್ಕೃತ ಕಲಿತಿದ್ದರು. ಕೆಲಸಮಯ ಸರ್ಕಾರಿ ಕೆಲಸದಲ್ಲಿದ್ದರು. ಗುಲಾಮಗಿರಿಯ ಕೆಲಸ ಬೇಡವೆಂದು ರಾಜೀನಾಮೆ ಇತ್ತರು. ಕೀರ್ತನಕಾರನಾಗಿ ಅದರಿಂದ ಇಹಪರ ಎರಡರಲ್ಲೂ ಒಳ್ಳೆಯದನ್ನು ಗಳಿಸುತ್ತೇನೆ ಎಂದರವರು. ಸ್ವಾತಂತ್ರ್ಯದಾಹ, ಸ್ವಾಭಿಮಾನ, ಕಿಚ್ಚು, ವಂಶಪಾರಂಪರ್ಯವಾಗಿ ಅವರ ಮಕ್ಕಳಾದ ಚಾಪೇಕರ ಸಹೋದರರಲ್ಲೂ ಇಳಿದು ಬಂದಿತ್ತು. ಕಾಲಕ್ರಮೇಣ ತಂದೆ ತಾಯಿಗಳು ಮಕ್ಕಳೊಡನೆ ಚಿಂಚವಡದಿಂದ ಪೂನಾ ನಗರಕ್ಕೆ ಬಂದು ನೆಲೆಸಿದರು. ತಂದೆ ಕೀರ್ತನಕಾರರು, ಅವರ ಮೂರೂ ಮಕ್ಕಳು ಪಕ್ಕವಾದ್ಯಕಾರರು. ತಂದೆಯ ಜೊತೆಯಲ್ಲಿ ಕೀರ್ತನೆ ನಡೆಸಲು ದಾಮೋದರ ಹೋಗುತ್ತಿದ್ದ. ಹಾರ್ಮೋನಿಯಂ ನುಡಿಸುತ್ತಿದ್ದ ದಾಮೋದರ ಕೀರ್ತನೆ ಮಾಡುವುದನ್ನು ಕಲಿತ. ತಂದೆಯ ಜೊತೆಯಲ್ಲಿ ತಿರುಗುತ್ತಿದ್ದ ಮೂರೂ ಮಕ್ಕಳು ಕೀರ್ತನಕಾರರಾದರು. ಈಶಭಕ್ತಿಯ ಜೊತೆಯಲ್ಲಿ ದೇಶಭಕ್ತಿಯೂ ಬೆಳೆಯಿತು. ಸಂಚಾರದಿಂದಾಗಿ ಸಾಧು–ಸಂತರ ಸಹವಾಸ, ತೀರ್ಥಕ್ಷೇತ್ರಗಳ ದರ್ಶನ, ಪಂಡಿತ ಪ್ರಾಜ್ಞರ ಪರಿಚಯ, ಸ್ವಧರ್ಮ, ಸಂಸ್ಕೃತಿ ಇವೆಲ್ಲವೂ ಮನನವಾದವು.

ಚಾಪೇಕರರಿಗೆ 14–15 ವರ್ಷಗಳಾಗಿವೆ. ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಕಳೆದು 22 ವರ್ಷಗಳ ನಂತರ ವಾಸುದೇವ ಬಲವಂತ ಫಡಕೆ ಬ್ರಿಟಿಷರ ವಿರುದ್ಧ ಹೋರಾಟ ಪ್ರಾರಂಭಿಸಿದ್ದ. ಅವನ ಹೋರಾಟ, ಬಂಧನ, ಬಲಿದಾನದ ಸಮಾಚಾರವನ್ನು ಆಲಿಸುತ್ತಿದ್ದ ದಾಮೋದರನಿಗೆ ನಾನು ಅದೇ ರೀತಿ ಹೋರಾಟ ಮಾಡಬೇಕು, ತಾಯಿ ಭಾರತಿಯನ್ನು ಬಂಧಮುಕ್ತಳಾಗಿ ಮಾಡಬೇಕು ಎಂಬ ತುಡಿತ ಪ್ರಾರಂಭವಾಯಿತು. ಗುಲಾಮಗಿರಿ ಕಿತ್ತೊಗೆಯಬೇಕು, ಆಂಗ್ಲರ ದರ್ಪ, ದಬ್ಬಾಳಿಕೆಯ ವಿರುದ್ಧ ಹೋರಾಡಬೇಕು, ಅದಕ್ಕಾಗಿ ಶರೀರಬಲ ಬೇಕು, ಸಂಘಟನೆ ಬೇಕು ಎಂದು ಚಾಪೇಕರ ಸಹೋದರರು ನಿರ್ಧರಿಸಿದರು. ನಿರಂತರ ವ್ಯಾಯಾಮ, ಸೂರ್ಯನಮಸ್ಕಾರ, ದಂಡ, ಬಸ್ಕಿ, ಕುಸ್ತಿಯಪಟ್ಟುಗಳ ಅಭ್ಯಾಸ ಶುರುಮಾಡಿದರು.ದಾಮೋದರ ಒಮ್ಮೆ ಒಂದೇ ಸಮನೆ 20 ಮೈಲಿಗಳು ಓಡಿದ್ದ .

1882ರಲ್ಲಿ ದಾಮೋದರನಿಗೆ ಮದುವೆಯಾಯಿತು. ನಂತರ ಬಾಲಕೃಷ್ಣನಿಗೂ ಆಯಿತು. 1894ರಲ್ಲಿ ವಾಸುದೇವನಿಗೂ ಮದುವೆಯಾಯಿತು. ಮಕ್ಕಳೂ ಆದವು. ಮನೆಯಲ್ಲಿ ಆನಂದ, ಸಂತಸ ಇದರ ಮಧ್ಯೆ ದಾಸ್ಯತೆಯ ತಳಮಳ, ಬ್ರಿಟಿಷರ ವಿರುದ್ಧ ಹೋರಾಡಲು ಯುದ್ಧ ಕಲೆಯನ್ನು ಕಲಿಯಬೇಕೆಂಬ ಹಂಬಲ. ಬ್ರಿಟಿಷರ ಸೈನ್ಯವನ್ನೇ ಸೇರಿ ಕಲಿಯಲು ಆಸಕ್ತಿ. ಆದರೆ ಅವಕಾಶ ಸಿಗಲಿಲ್ಲ. ಇದರಿಂದ ನಿರಾಶನಾಗಲಿಲ್ಲ. ಸೈನ್ಯಕ್ಕೆ ಸೇರಲು ಸಾಧ್ಯವಾಗಲಿಲ್ಲ ಎಂದು ಸೋತು ಕೂರಲಿಲ್ಲ. ಶಸ್ತ್ರಾಸ್ತ್ರ ಸಂಗ್ರಹಿಸಲು ಪ್ರಾರಂಭಿಸಿದರು. ಸಣ್ಣಪುಟ್ಟ ಆಯುಧಗಳನ್ನು ಕಲೆ ಹಾಕಿದರು. ಪಿಸ್ತೂಲು ಉಪಯೋಗಿಸುವುದನ್ನು ಕೀರ್ತನೆಗಳ ಸಂಚಾರ ಸಮಯದಲ್ಲೇ ಕಲಿತಿದ್ದರು.

ಬ್ರಿಟಿಷರನ್ನು ಇಲ್ಲಿಂದ ಹೊಡೆದೋಡಿಸಿ ಭಾರತಾಂಬೆಯನ್ನು ಸ್ವತಂತ್ರಳನ್ನಾಗಿ ಮಾಡಬೇಕೆಂದು ತೀರ್ಮಾನಿಸಿ ಸೈನ್ಯವನ್ನು ಕಟ್ಟಲು ಕೆಲವು ಗೆಳೆಯರನ್ನು ಕಲೆ ಹಾಕಿದರು. ದೇಶಭಕ್ತರಾದ ವಾಸುದೇವ ಬಲವಂತ ಪಡಕೆ, ರಾಸ್ ಬಿಹಾರಿ ಬೋಸ್, ಅರವಿಂದ ಘೋಷ್

ಮುಂತಾದ ಕ್ರಾಂತಿಕಾರಿಗಳ ಹೋರಾಟಗಾಥೆಯನ್ನು ಅವರಿಗೆ ತಿಳಿಸಿ ಸ್ಫೂರ್ತಿ ತುಂಬಿದರು. ಕಲೆ ಹಾಕಿದ ಗೆಳೆಯರ ಗುಂಪನ್ನು ಬ್ರಿಟಿಷರ ಕಣ್ಣು ತಪ್ಪಿಸಿ ಊರ ಹೊರಗೆ ಬೆಟ್ಟಗುಡ್ಡಗಳ ತಪ್ಪಲಲ್ಲಿ ವ್ಯಾಯಾಮ, ಸೇನೆಯ ರೀತಿಯಲ್ಲಿ ದಾಳಿ, ಪ್ರತಿ ದಾಳಿ ಹೀಗೆ ಅನೇಕ ರೀತಿಯ ಹೋರಾಟದ ಕಲೆಯನ್ನು ಕಲಿಸತೊಡಗಿದರು. ಅವರ ಸಂಘಟನೆಗೆ ಆರಾಧ್ಯ ದೈವ ಭಜರಂಗಬಲಿ ಮಾರುತಿಯನ್ನು ಆರಿಸಿಕೊಂಡರು. ಅವನ ಮೂರ್ತಿಯ ಎದುರಿಗೆ ಹೋರಾಟಗಳ ಅಭ್ಯಾಸವಾಗುತ್ತಿತ್ತು. ಲೋಕಮಾನ್ಯ ತಿಲಕರು ಅವರಿಗೆ ಸ್ಫೂರ್ತಿಯ ಕೇಂದ್ರವಾಗಿದ್ದರು. ಕ್ರಾಂತಿಕಾರಿಯ ಕೆಲಸಕ್ಕಾಗಿ ಪ್ರಾಣಾರ್ಪಣೆ ಮಾಡಲೂ ಸಿದ್ಧರಾದ 10–20 ಗೆಳೆಯರನ್ನು ಆರಿಸಿಕೊಂಡು ಆ ಗುಂಪಿಗೆ "ಚಾಪೇಕರ ಕ್ಲಬ್" ಎಂದು ಹೆಸರಿಟ್ಟರು. ನಂತರ ಅದು "ಆರ್ಯಬಂಧ ಪ್ರತಿಬಂಧ ನಿವಾರಕ ಮಂಡಳಿ" ಎಂಬ ಹೊಸ ಹೆಸರು ಪಡೆಯಿತು. ಅರವಿಂದಘೋಷರ ಭವಾನಿ ಮಂದಿರ ಎಂಬ ಜಾಗದಲ್ಲಿ ಬಾಂಬ್ ತಯಾರಿ ಯೋಜನೆ ಮಾಡಿದರು. ಬಾಂಬ್ ತಯಾರಿಸುವ ಮೊದಲು ಉಪನಿಷತ್ ವಾಚನವಾಗುತ್ತಿತ್ತು. "ಧರ್ಮಾಭಿಮಾನ ಬಿಟ್ಟು ಕ್ರಾಂತಿಯ ಕಲ್ಪನೆಯೇ ಸಫಲವಾಗದು" ಎಂದು ಶಿಷ್ಯರಿಗೆ ಧಾರ್ಮಿಕ ಪುಸ್ತಕ ಓದಲು ಹೇಳುತ್ತಿದ್ದರು. ಹೀಗೆ ಕ್ರಾಂತಿಕಾರಿಗಳಿಗೆ ಮೊದಲು ಧರ್ಮಾಭಿಮಾನ ಹುಟ್ಟಿಸಿ ಅದರ ರಕ್ಷಣೆ, ದೇಶದ ರಕ್ಷಣೆಗಾಗಿ ಹೋರಾಟಕ್ಕೆ ಸಜ್ಜು ಮಾಡುತ್ತಿದ್ದರು. ದಾಮೋದರ ದೇಶಭಕ್ತಿ ಗೀತೆಗಳನ್ನ ಸ್ವತಃ ರಚಿಸಿ ಹೇಳಿಕೊಡುತ್ತಿದ್ದ. ನಮ್ಮ ದೇಶದ ಸ್ವಾತಂತ್ರ್ಯ ಅಪಹರಿಸಿ ನಮ್ಮ ಧರ್ಮವನ್ನು ಹಾಳು ಮಾಡುವುದು, ಅದಕ್ಕಾಗಿ ಮತಾಂತರ ಮಾಡುವುದೇ ಬ್ರಿಟಿಷರ ಉದ್ದೇಶವಾಗಿತ್ತು ಎಂಬುದು ಚಾಪೇಕರ ಸಹೋದರರ ನಂಬಿಕೆಯಾಗಿತ್ತು. ಅದಕ್ಕೋಸ್ಕರ ಏನಾದರೂ ಮಾಡಿ ಸೇಡು ತೀರಿಸಿಕೊಳ್ಳಬೇಕು, ಆಂಗ್ಲರಿಗೆ ಅಪಮಾನ ಮಾಡಬೇಕು ಎಂದು ತೀರ್ಮಾನಿಸಿದರು. ಮುಂಬೈನ ಕೋಟೆ ಪ್ರದೇಶದಲ್ಲಿ ಅಮೃತಶಿಲೆಯಿಂದ ಮಾಡಿದ ವಿಕ್ಟೋರಿಯಾ ರಾಣಿಯ ವಿಗ್ರಹವಿತ್ತು. ಅದನ್ನು ವಿರೂಪಗೊಳಿಸಿ ಬ್ರಿಟಿಷರಿಗೆ ಅಪಮಾನ ಮಾಡಬೇಕೆಂದು ನಿರ್ಧರಿಸಿದರು. ಒಂದು ಚಪ್ಪಲಿ ಹಾರ ಮಾಡಿ, ಸೈಕಲ್ ಟ್ಯೂಬಿನಲ್ಲಿ ಅಂಟು ಬೆರೆಸಿದ ಡಾಂಬರು ತುಂಬಿ ವಿಜಯ ದಶಮಿಯ ಮಧ್ಯರಾತ್ರಿಯಲ್ಲಿ ದಾಮೋದರ ಮತ್ತು ಬಾಲಕೃಷ್ಣರು ರಾಣಿಯ ವಿಗ್ರಹಕ್ಕೆ ಡಾಂಬರಾಭಿಷೇಕ ಮಾಡಿ ಚಪ್ಪಲಿ ಹಾರ ಹಾಕಿ ಸದ್ದಿಲ್ಲದೆ ಮನೆಗೆ ಹೋದರು. ಮರುದಿನ ಡಾಂಬರಾಭಿಷೇಕಗೊಂಡ, ಚಪ್ಪಲಿ ಹರ ಧರಿಸಿದ ಮೂರ್ತಿಯ ದರ್ಶನ ಮಾಡಲು ಜನಜಂಗುಳಿಯೇ ಸೇರಿತ್ತು. ಎಲ್ಲರಿಗೂ ಆಶ್ಚರ್ಯದ ಜೊತಗೆ ಮೆಚ್ಚುಗೆಯ ಮಾತುಗಳು.

1896ರಲ್ಲಿ ಮುಂಬೈ ನಗರವನ್ನು ಪ್ಲೇಗ್ ರೋಗ ಆವರಿಸಿತು. ಸಾವಿನ ಸರಣಿಯೇ ಪ್ರಾರಂಭವಾಯಿತು. ಜನ ವಲಸೆ ಹೊರಟರು. ಅದೇ ವೇಳೆಗೆ ಮೆಟ್ರಿಕ್ ಪಪರೀಕ್ಷೆ.ಜನತೆ ಅದನ್ನು ಮುಂದೂಡಲು ಮನವಿ ಮಾಡಿದರೂ ಸರ್ಕಾರ ಸ್ಪಂದಿಸಲಿಲ್ಲ. ವಿಶಾಲವಾದ ಮೈದಾನದಲ್ಲಿ ಮಂಟಪ ಹಾಕಿ ಅಲ್ಲಿ ಪರೀಕ್ಷೆ ವ್ಯವಸ್ಥೆ ಮಾಡಿತು ಸರ್ಕಾರ. ಸಿಟ್ಟಿಗೆದ್ದ ಚಾಪಕರರು ಹಳೆಯ ಪಂಚೆಗಳನ್ನು ಕಲೆಹಾಕಿ, ಒಂದಕ್ಕೊಂದು ಕಟ್ಟಿ, ಸೀಮೆಎಣ್ಣೆಯಲ್ಲಿ ಅದ್ದಿ, ಮಂಟಪದ ಹತ್ತಿರ ಇಟ್ಟು, ಬೆಂಕಿ ಹಚ್ಚಿದರು. ಮಂಟಪ ಬೂದಿಯಾಯಿತು. "ಯಾರೇ ಈ ಕೆಲಸ ಮಾಡಿರಲಿ ಸರ್ಕಾರಕ್ಕೆ ತಕ್ಕ ಬುದ್ಧಿ ಕಲಿಸಿದರು" ಎಂಬ ಜನರ ಹೊಗಳಿಕೆಯ ಮಾತುಗಳಿಂದ ಚಾಪೇಕರರು ಹಿಗ್ಗಿದರು. ಸರ್ಕಾರ ರೋಗ ಹತ್ತಿಕ್ಕಲು ಪ್ಲೇಗ್ ಕಮೀಷನರ್ ಆಗಿ Ryand ಎಂಬ ಅಧಿಕಾರಿಯನ್ನು ನೇಮಿಸಿತು.

ರೋಗ ದಿನೇ ದಿನೇ ಎಲ್ಲಾ ಕಡೆ ಹಬ್ಬುತ್ತ ಹೋಯಿತು.1892 ಫೆಬ್ರುವರಿ 4ರಂದು "ದಿ ಎಪಿಡಮಿಕ್ ಡಿಸೀಸ್ ಆಕ್ಟ್" ಎಂಬ ಶಾಸನ ತಂದಿತು. ರೋಗ ಹತ್ತಿಕ್ಕುವ ನೆಪದಲ್ಲಿ ಜನಗಳ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸಿ ಬ್ರಿಟಿಷ್ ಸೈನಿಕರು ರೋಗವಿಲ್ಲದಿದ್ದರೂ ಇಲಿಗಳು ಸತ್ತಿವೆ ಎಂಬ ನೆಪದಲ್ಲಿ ಮನೆಗಳಿಗೆ ನುಗ್ಗಿ ದಾಂದಲೆ ಮಾಡಿದರು. ದೊಡ್ಡ ದೊಡ್ಡ ಮನೆಗಳನ್ನು ಸುಡುವುದು, ಅಲ್ಲಿದ್ದ ಬೆಲೆ ಬಾಳುವ ವಸ್ತುಗಳನ್ನು ಕೊಳ್ಳೆ ಹೊಡೆಯುವುದು, ದೇವರ ಮನೆಗೆ ಬೂಟು ಕಾಲಿನಲ್ಲಿ ನುಗ್ಗುವುದು, ವಿಗ್ರಹಗಳನ್ನು ಒದೆಯುವುದು, ಹೆಂಗಸರ ಕೋಣೆಗಳಿಗೆ ನುಗ್ಗುವುದು, ಕೆಲವು ಬಾರಿ ಅವರ ಮೇಲೆ ಅತ್ಯಾಚಾರ ಮಾಡುವುದು, ಅರೆಬರೆ ಜೀವ ಇರುವ ರೋಗಿಗಳನ್ನು ಶವಗಾರಕ್ಕೆ ಹಾಕುವುದು, ಮುಂತಾದ ಕ್ರೂರಕೃತ್ಯಗಳು ಅಧಿಕಾರಿಯ ಸೂಚನೆಯಂತೆ ನಡೆಯಿತು. ಲೋಕಮಾನ್ಯ ತಿಲಕರು ಕಳಿಸಿದ ಮನವಿ ಪತ್ರವನ್ನು ಕಸದ ಬುಟ್ಟಿಗೆ ಹಾಕಿದ ಯಾರ್ಂಡ್. ತಿಲಕರು ತಮ್ಮ ಕೇಸರಿ ಪತ್ರಿಕೆಯಲ್ಲಿ "ಯಾರ್ಂಡ್ ಶಾಹಿ ಕೊನೆಯಾಗಲೇಬೇಕು" ಎಂದು ಬರೆದರು.

ಈ ಉತ್ಕಟ ದೇಶಭಕ್ತ ಹೋರಾಟಗಾರರ ಬಲಿದಾನದ ಅಂತಿಮ ದಿನಗಳ ಯೋಜನೆ ಮತ್ತು ಗಲ್ಲುಗಂಬವೇರಿದಪರಿ ಬಹು ರೋಮಾಂಚಕ.ನೋಡೋಣ ಬನ್ನಿ.

ಇವೆಲ್ಲವನ್ನೂ ನೋಡುತ್ತಿದ್ದ ಚಾಪೇಕರ ಸಹೋದರರಿಗೆ ರಕ್ತ ಕುದ್ದು ಹೋಯಿತು. ತಿಲಕರನ್ನು ಕಂಡು ಏನು ಮಾಡುವುದೆಂದು ಕೇಳಿದರು. ನೀವು ಹೇಡಿಗಳೆಂದು ತಿಲಕರು ಹೀಯಾಳಿಸಿದರು. ರೊಚ್ಚಿಗೆದ್ದ ಚಾಪೇಕರರು ಯಾರ್ಂಡನನ್ನು ಮುಗಿಸಲು ಯೋಜಿಸಿದರು. ಯಾರ್ಂಡನ ಚಲನವಲನ ಗಮನಿಸಲು ಪ್ರಾರಂಭಿಸಿದರು. 1897ಜೂನ್ 22 ಬ್ರಿಟನ್ ಮಹಾರಾಣಿ ಪಟ್ಟಕ್ಕೇರಿದ ದಿನ. ಅದರ ಆಚರಣೆಗೆ ಪೂನಾದಲ್ಲಿ ಭವ್ಯ ವ್ಯವಸ್ಥೆಯಾಯಿತು.

ಅಂದು ಮಂಗಳವಾರ. ಚಾಪೇಕರರು ದಿನಪೂರ್ತಿ ಪೂಜೆ, ಪುನಸ್ಕಾರ ಮಾಡಿ ಉಪವಾಸವಿದ್ದರು. ದೇವರ ಮನೆಯಲ್ಲೇ ಕುಳಿತು ದೇಶದ್ರೋಹಿಯ ಹತ್ಯೆಯ ಸಂಚು ರೂಪಿಸಿ, ಸಂಜೆ ಮನೆಯಿಂದ ಹೊರಟರು. ಕಾರ್ಯಕ್ರಮದ ಸ್ಥಳ ತಲುಪಿದರು. ಅಲ್ಲಲ್ಲಿ ಇದ್ದ ಮರಗಳ ಸಂಧಿಯಲ್ಲಿ ಕಾದು ಕುಳಿತರು. ಮಧ್ಯ ರಾತ್ರಿಗೆ ಕಾರ್ಯಕ್ರಮ ಮುಗಿಯಿತು. ಮದಿರೆಯ ನಿಶೆ ಎಲ್ಲರಿಗೂ ತಲೆಗೇರಿತ್ತು. ಎಲ್ಲರೂ ಹೊರಟರು. ಆಯರ್ಸಟ್ ಎಂಬ ತರುಣ ಅಧಿಕಾರಿ ಹೆಂಡತಿಯೊಂದಿಗೆ ಒಂದು ಕುದುರೆ ಗಾಡಿಯಲ್ಲಿ ಕುಳಿತ. ಆ ಗಾಡಿ ಯಾರ್ಂಡನದೆಂದು ತಿಳಿದು ಹತ್ತಿರ ಬಂದ ಬಾಲಕೃಷ್ಣ ಚಾಪೇಕರ ಗುಂಡು ಹಾರಿಸಿಯೇ ಬಿಟ್ಟ. ಆಯರ್ಷ್ಟ ಅಲ್ಲಿಯೇ ಸತ್ತ. ನಂತರ ಯಾರ್ಂಡ್ ನ ಗಾಡಿ ಬಂತು. "ಗೋಂದ್ಯಾ ಆಲಾರೇ" ಎಂಬ ಸಂಕೇತ ವಾಕ್ಯವನ್ನು ವಾಸುದೇವ ಚಾಪೇಕರ ಕೊಟ್ಟ. ಕೂಡಲೇ ದಾಮೋದರ ಚಾಪೇಕರ ಹಿಂಬದಿಯಿಂದ ಗಾಡಿ ಏರಿ ಯಾರ್ಂಡ್ ನ ಬೆನ್ನಿಗೆ ಗುಂಡು ಹಾರಿಸಿ ಕತ್ತಲಲ್ಲಿ ಕಣ್ಮರೆಯಾದ. ರಕ್ತದ ಮಡುವಿನಲ್ಲಿ ಬಿದ್ದ ಯಾರ್ಂಡ್ 8–10 ದಿನಗಳು ನರಳಿ ಸತ್ತ. ಚಾಪೇಕರರಿಗೆ ಆನಂದವೋ ಆನಂದ. ಸಾರ್ವಜನಿಕರೂ

"ಪೀಡೆ ತೊಲಗಿತು" ಎಂದು ಹರ್ಷಪಟ್ಟರು. ದಿಗ್ಭ್ರಾಂತರಾದ ಬ್ರಿಟಿಷರು ಹತ್ಯೆ ಮಾಡಿದವರ ಹುಡುಕಾಟ ಪ್ರಾರಂಭಿಸಿದರು. ಪೊಲೀಸರು ಕಂಡ ಕಂಡವರನ್ನೆಲ್ಲ ಹಿಡಿದು ಹಿಂಸಿಸಲು ಪ್ರಾರಂಭಿಸಿದರು. ಹರಸಾಹಸ ಪಟ್ಟರೂ ಪತ್ತೆಯಾಗಲಿಲ್ಲ. ಕೊನೆಗೆ ಹಿಡಿದು ಕೊಟ್ಟವರಿಗೆ 20 ಸಹಸ್ರರೂ ಬಹುಮಾನ ಘೋಷಿಸಿದರು. ಆದರೂ ಹಂತಕರು ಸಿಗಲಿಲ್ಲ. ತಿಂಗಳುಗಳೇ ಉರುಳಿದವು.

ನಮ್ಮ ದೇಶದಲ್ಲಿ ಹೀನ ಪರಂಪರೆಯೊಂದು ಹರಿದು ಬಂದಿದೆ. ಅದೇ ಸ್ವಜನರಿಂದ ಸ್ವಜನರಿಗೆ ದ್ರೋಹ. ಚಾಪೇಕರರ ಗುಂಪಿನಲ್ಲಿ ಇದ್ದ ಸ್ನೇಹಿತ ಗಣೇಶ ಶಂಕರ ದ್ರವಿಡ್ ಎಂಬಾತ 20 ಸಹಸ್ರರೂ ಆಸೆಗೆ ಬದಲಿಸದ್ದು  ಸಾವು ನೀಡಿದ. ಕೊನೆಗೂ ದಾಮೋದರನ ಬಂಧನವಾಯಿತು. ಪೂನಾಕ್ಕೆ ಕರೆತಂದರು. ವಿಚಾರಣೆ ಪ್ರಾರಂಭವಾಗಿ ಮರಣದಂಡನೆ ಶಿಕ್ಷೆ ಘೋಷಿಸಲಾಯಿತು."ಇದಕ್ಕಿಂಥ ಹೆಚ್ಚಿನ ಶಿಕ್ಷೆ ಇಲ್ಲವೇ" ಎಂದು ಕಿಕ್ಕಿರಿದು ತುಂಬಿದ್ದ ಕೋರ್ಟಿನಲ್ಲಿ ಕೇಳಿದ ದಾಮೋದರ. ಪುಳುಚಾರು ತಿನ್ನುವ ಈ ಬ್ರಾಹ್ಮಣನದು ಎಂಥಹ ಗಂಡೆದೆಯ ಪ್ರಶ್ನೆ. ಏಪ್ರಿಲ್ 18  1998 ನೇಣಿಗೇರಿಸುವ ದಿನ.

ನಾನುಸಾವಿಗಾಗಿ ಕಾಯುತ್ತಿದ್ದೇನೆ ನಿಮ್ಮ ಕೈಯಲ್ಲಿರುವ ಭಗವದ್ಗೀತೆಯ ಪ್ರತಿಯನ್ನು ಕೊಡಿ" ಎಂದು ತಿಲಕರನ್ನು ಕೇಳಿದ ದಾಮೋದರ. ತಿಲಕರಿಗೆ ಆನಂದ ಪುಸ್ತಕ ನೀಡಿದರು. ಗಲ್ಲಿಗೇರಿಸುವ ಹಿಂದಿನ ದಿನ ಪೂರ್ಣ ಉಪವಾಸ, ದೇವರ ಪ್ರಾರ್ಥನೆ. ಸ್ವಲ್ಪವೂ ಆತಂಕವಿಲ್ಲದೆ ಸುಖನಿದ್ರೆ ಮಾಡಿದ ದಾಮೋದರ. ಮಾರನೇ ದಿನ ಗಲ್ಲು ಹಾಕುವ ಮುಂಚೆ "ನಿನ್ನ ಬಂಧು ಬಳಗದವರಿಗೆ ನಿನ್ನ ಸಂದೇಶವೇನು" ಎಂದು ಕೇಳಿದರು. "ನಗುನಗುತ್ತಾ ಗಲ್ಲುಗಂಬ ಏರಿದೆನೆಂದು ಹೇಳಿ" ಎಂದನು. ಕುತ್ತಿಗೆಗೆ ಹಗ್ಗ

ಬಿದ್ದಾಗಲೂ ನಾರಾಯಣ, ನಾರಾಯಣ, ಜಯಗೋಪಾಲ ಮಂತ್ರ ಹೇಳುತ್ತಲೇ ಇರುವಾಗ ಪ್ರಾಣ ಪಕ್ಷಿ ಹಾರಿಹೋಯಿತು. ಕೈಯಲ್ಲಿದ್ದ ಭಗವದ್ಗೀತೆಯನ್ನು ಕಿತ್ತು ತೆಗೆಯಬೇಕಾಯಿತು. ಮೊಟ್ಟ ಮೊದಲು ಭಗವದ್ಗೀತೆಯನ್ನು ರಾಜಕೀಯದಲ್ಲಿ ಉಪಯೋಗಿಸಿಕೊಂಡವನೇ ದಾಮೋದರ ಚಾಪೇಕರ.

ದಾಮೋದರ, ಬಾಲಕೃಷ್ಣರ ಬಂಧನಕ್ಕೆ ಕಾರಣರಾದ ದೇಶದ್ರೋಹಿಗಳಿಗೆ ತಕ್ಕ ಶಾಸ್ತಿ ಮಾಡಲು ವಾಸುದೇವ ಚಾಪೇಕರ ಮತ್ತು ಸ್ನೇಹಿತ ಸಾಠೆ ನಿಶ್ಚಯಿಸಿದರು. ಒಂದು ರಾತ್ರಿ ದ್ರೋಹಿಗಳ ಮನೆಗೆ ಹೋಗಿ ಪುಸಲಾಯಿಸಿ ಹೊರಗೆ ಕರೆತಂದು ರಸ್ತೆಯಲ್ಲೇ ದ್ರವಿಡ ಬಂಧುಗಳನ್ನು ಗುಂಡು ಹಾರಿಸಿ ಸಾಯಿಸಿದರು. ಇವರ ಬಂಧನವಾಯಿತು ವಿಚಾರಣೆಯಾಯಿತು. ಕೊನೆಗೆ 12 ಮೇ 1899 ರಂದು ಅವರನ್ನು ಗಲ್ಲಿಗೇರಿಸಿದರು.

**ತಾತ್ಯಾ ಟೋಪಿಯ ನಂತರ ಬತ್ತಿ ಹೋಗಿದ್ದ ಕ್ರಾಂತಿಯ ಕಿಡಿಯನ್ನು ಮತ್ತೆ ಹೊತ್ತಿಸಿದ ಚಾಪೇಕರ ಸಹೋದರರ ಪವಿತ್ರ ಆತ್ಮಜ್ಯೋತಿ ತಾಯಿ ಭಾರತಿಯ ಪಾದಪದ್ಮಗಳಲ್ಲಿ ಅರ್ಪಿತವಾಯಿತು.**

**ಭಾರತ್ ಮಾತಾ ಕೀ ಜೈ**


# ವಿಪ್ರನುಡಿಯಲ್ಲಿ ಜಾಹೀರಾತಿಗಾಗಿ ಮನವಿ

**ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.**

| | | | | |
|---|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. | 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. | 20,000/= |
| 3. | ಒಳ ಪುಟ (ವರ್ಣ) | .. | ರೂ. | 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. | 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. | 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. | 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. | 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. | 2,000/= |

# ದೈವ ಮತ್ತು ಪುರುಷ ಪ್ರಯತ್ನ

**ಕೃಪೆ: ಆರ್ಯಸಂಸ್ಕೃತಿ ಮಾಸಪತ್ರಿಕೆ, ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ, ಮೈಸೂರು**

**– ಡಾ। ಕೆ. ಎಲ್ ಶಂಕರನಾರಾಯಣ ಜೋಯ್ಸ್**

ಗ್ರಾಮವೊಂದರಲ್ಲಿ ಒಬ್ಬ ರೈತನಿದ್ದ. ಬೆಳೆದ ಬೆಳೆಯನ್ನು ಪರ ಊರಿಗೆ ಕೊಂಡೊಯ್ದು ಮಾರಾಟ ಮಾಡಬೇಕಾಗಿತ್ತು. ತನ್ನ ಗ್ರಾಮವನ್ನು ದಾಟುವಾಗ ಸುಂಕದ ಕಟ್ಟೆಯಲ್ಲಿ ಪದಾರ್ಥಗಳ ಮೇಲೆ ಸುಂಕ ವಸೂಲು ಮಾಡುವ ರೂಢಿಯಿತ್ತು. ಹೇಗಾದರೂ ಸುಂಕದ ಕಟ್ಟೆಯನ್ನು ತಪ್ಪಿಸಿಕೊಂಡು ಹೋದರೆ ಸುಂಕದ ಹಣ ಉಳಿಸಿ ಲಾಭ ಹೆಚ್ಚಿಗೆ ಗಳಿಸಿದಂತಾಗುತ್ತದೆಂಬ ಆಸೆ. ಪ್ರಧಾನವಾದ ಮಾರ್ಗದಲ್ಲಿ ಪ್ರಯಾಣ ಬೆಳೆಸಿದರೆ ಸುಂಕದ ಕಟ್ಟೆಯ ಮೂಲಕವೇ ಹೋಗಬೇಕಾಗುತ್ತದೆ. ಆದ್ದರಿಂದ ಅದನ್ನು ತಪ್ಪಿಸಿ ಅಡ್ಡಮಾರ್ಗದಲ್ಲಿ ಗಾಡಿ ಓಡಿಸಬೇಕೆಂದು ಯೋಚಿಸಿದ. ಹಗಲು ಪ್ರಯಾಣ ಮಾಡಿದರೆ ಯಾರಾದರೂ ಗುರುತಿಸಿ ಸುಂಕದ ಕಟ್ಟೆಗೆ ದೂರುಕೊಟ್ಟರೆ ದಂಡ ಎರಡರಷ್ಟು! ಅದಕ್ಕಾಗಿ ರಾತ್ರಿ ಪ್ರಯಾಣ ಮಾಡುವ ತೀರ್ಮಾನ ಮಾಡಿದ. ತುಳಿಯದ ಹಾದಿಗಳಲ್ಲಿ ರಾತ್ರಿಯೆಲ್ಲ ಕಷ್ಟಪಟ್ಟು ಗಾಡಿ ಓಡಿಸಿದ. ಮನಸ್ಸಿನಲ್ಲಿ ಅಂತೂ ಉಪಾಯದಿಂದ ಸುಂಕ ತಪ್ಪಿಸಿಕೊಂಡೆ ಎಂಬ ಸಂತೋಷವಿತ್ತು. ಅನೇಕ ಕವಲು ಮಾರ್ಗಗಳನ್ನು ಅನುಸರಿಸಿ ಹೋಗಬೇಕಾಗಿತ್ತು. ಜೊತೆಗೆ ಭಾರಿ ಕತ್ತಲು. ರಾತ್ರಿ ದಾರಿ ತಪ್ಪಿ ಕಷ್ಟಪಟ್ಟುಕೊಂಡು ಅಂತೂ ಪಾರಾದೆ ಎಂದು ಅನ್ನಿಸುವ ವೇಳೆಗೆ ಪ್ರಭಾತವಾಯಿತು. ಆದರೆ ಅವನಿಗೆ ಅರಿವಾಗಿಲ್ಲ. ಬೆಳಗಾಗುವ ವೇಳೆಗೆ ಸರಿಯಾಗಿ ಗಾಡಿ ಸುಂಕದ ಕಟ್ಟೆಯ ಬಾಗಿಲಿಗೆ ಬಂದು ನಿಂತಿದೆ! ರಾತ್ರಿಯೆಲ್ಲ ಕಷ್ಟಪಟ್ಟಿದ್ದು ಮಾತ್ರವಾಯಿತು. ಆದರೆ ಸುಂಕ ತಪ್ಪಲಿಲ್ಲ. ಇದು ಒಬ್ಬ ರೈತನ ಕಥೆ ಮಾತ್ರವಲ್ಲ. ಒಬ್ಬನು ತಾನು ಮಾಡಿದ ಕುಕರ್ಮದ ಫಲವನ್ನು ತಪ್ಪಿಸಿಕೊಳ್ಳಬೇಕೆಂದು ಎಷ್ಟೇ ಯುಕ್ತಿಗಳನ್ನು ಹೂಡಿದರೂ ಆತನಿಗೇ ತಿಳಿಯದಂತೆ ಆ ಕರ್ಮಫಲಕ್ಕೆ ಒಳಗಾಗುತ್ತಾನೆ ಎಂಬ ಒಂದು ಅನುಭವದ ಸಮಾಚಾರವಾಗಿದೆ. ಇದನ್ನು **ಘಟ್ಟಕುಟ್ಟಿ–ಪ್ರಭಾತ**ನ್ಯಾಯವೆಂದು ಕರೆಯುತ್ತಾರೆ.

ಮಾಡಿದ ಕರ್ಮವು ಫಲಿಸಬೇಕು ಎಂಬುದು ಸೃಷ್ಟಿಯ ನಿಯಮ. ಹಸಿದವನು ಊಟ ಮಾಡಿದರೆ ಹೊಟ್ಟೆ ತುಂಬುತ್ತದೆ. ಬಾಯಾರಿದವನು ನೀರು ಕುಡಿದರೆ ಬಾಯಾರಿಕೆ ಇಂಗುತ್ತದೆ. ಜ್ಞಾನದಾಹವಿದ್ದವನು ಸದ್ಗುರುವಿನ ಮುಖೇನ ವಿದ್ಯಾರ್ಜನೆಯನ್ನು ಮಾಡಿದರೆ ತಂಪಾಗುತ್ತದೆ. ಹೀಗೆ ಕರ್ಮಕ್ಕೊಂದು ಫಲದ ವ್ಯವಸ್ಥೆ ಇರುವುದರಿಂದಲೇ ಲೋಕದ ಎಲ್ಲ ವ್ಯವಹಾರಗಳೂ ನಡೆದು ಬರುತ್ತಿವೆ. ಸತ್ಕರ್ಮವನ್ನು ಮಾಡಿದಾಗ ಸತ್ಫಲವಾಗುವಂತೆ ದುಷ್ಕರ್ಮಕ್ಕೆ ದುಷ್ಫಲವೂ ಸಹ ಇದೇ ನಿಯಮದಲ್ಲೇ ಸೇರಿದೆ. ಹಾಗಿರುವುದರಿಂದಲೇ ದುಷ್ಕರ್ಮವೆಸಗಬೇಡವೆಂಬ ಹಿತನುಡಿಯು ಒಂದಿದೆ.

ಆದರೆ ಮನುಷ್ಯನ ಮನಸ್ಸು ಈ ನಿಯತಿಯ ನಿಯಮವನ್ನು ಪೂರ್ಣವಾಗಿ ಒಪ್ಪಿಕೊಳ್ಳದೆ ಅನುಕೂಲವಾದ ಫಲ ಬರುವುದಾದರೆ ಅದು ನನಗೆ ಸೇರಿದ್ದು ಎಂದು ಹಂಬಲಿಸುತ್ತಾನೆ. ಪ್ರತಿಕೂಲವಾದ ಫಲ ಬರುವುದಾದರೆ ತನಗೆ ಖಂಡಿತ ಅದು ಸೇರಬಾರದೆಂದು ಪ್ರತಿಭಟಿಸುತ್ತಾನೆ. ಆ ಅಸತ್ಫಲಕ್ಕೆ ಬೇರೆ ಯಾರನ್ನೋ ಏನನ್ನೋ ಕಾರಣವನ್ನಾಗಿ ತೋರಿಸಲು ಬಯಸುತ್ತಾನೆ. ಇದು ಬುದ್ಧಿಯಲ್ಲಿರುವ ದೋಷ. ಅದನ್ನೇ ಒಂದು ಸರಳ ಭಾಷೆಯಲ್ಲಿ–

**ಪುಣ್ಯಸ್ಯ ಫಲಮಿಚ್ಛನ್ತಿ ಪುಣ್ಯಂ ನೇಚ್ಛನ್ತಿ ಮಾನವಾಃ ।**
**ನೇಚ್ಛನ್ತಿ ಪಾಪಸ್ಯ ಫಲಂ ಪಾಪಂ ಕುರ್ವನ್ತಿ ಸರ್ವದಾ ॥**

ಪುಣ್ಯದ ಫಲವನ್ನು (ಸುಖ) ಬಯಸುತ್ತಾನೆ. ಆದರೆ ಪುಣ್ಯಕಾರ್ಯವನ್ನು ಮಾಡಬಯಸುವುದಿಲ್ಲ. ಪಾಪದ ಫಲವನ್ನು (ದುಃಖ) ಮಾನವ ಪಡೆಯಬಯಸುವುದಿಲ್ಲ. ಆದರೆ ಪಾಪಕಾರ್ಯವನ್ನು ಮಾತ್ರ ಮಾಡುತ್ತಾನೆ ಎಂದು ಹೇಳಿದ್ದಾರೆ.

ಪಾಪದ ಫಲವಾದ ದುಃಖ ಎದುರಾದಾಗ ತಪ್ಪಿಸಿಕೊಳ್ಳುವ ತೀವ್ರ ಪ್ರಯತ್ನ ನಡೆಸುತ್ತಾನೆ. ಆದರೆ ಏನೇ ಬುದ್ಧಿವಂತಿಕೆಯ ಉಪಾಯವನ್ನು ಬಳಸಿದರೂ ಅದು ಫಲಿಸದೇ ಇದ್ದಾಗ ದುಃಖವನ್ನು ಅನುಭವಿಸುತ್ತಾನೆ. ಇದೊಂದು ಸಾಮಾನ್ಯವಾದ ಅನುಭವ. ಈ ನೇರದಲ್ಲಿ ವಿಧಿಯು ಬಲವತ್ತರವಾದುದು ಎಂಬ ಮಾತು ಬಂದಿದೆ. ಹಾಗೆಂದ ಮಾತ್ರಕ್ಕೆ ಪುರುಷಪ್ರಯತ್ನಕ್ಕೆ ಫಲವೆಂಬುದೇ ಇಲ್ಲವೆಂದಿಲ್ಲ. ಮರೆತು ಬೆಂಕಿಯನ್ನು ಮುಟ್ಟಿದರೆ ಸುಡುತ್ತದೆ. ಆದರೆ ಅಪಾಯವು ದೂರದವರೆಗೆ ವ್ಯಾಪಿಸದಂತೆ ತಡೆಯುವ ಉಪಾಯ ತಿಳಿದಿದ್ದರೆ ಆಗ ಮಾಡುವ ಒಂದು ಪ್ರತಿಕ್ರಿಯೆಗೆ ಫಲವಿದ್ದೇ ಇರುತ್ತದೆ. ಮಾಡುವ ಉಪಾಯವು ಯೋಗ್ಯವಾಗಿಲ್ಲದಿದ್ದಾಗ, ಆ ಉಪಾಯವನ್ನು ಸಾಧಿಸಲು ಸಾಧ್ಯವಿಲ್ಲದಿದ್ದಾಗ ಅಪಾಯ ಸಹಜವೇ ಆಗಿದೆ.

ಒಬ್ಬ ಭಾರೀ ಕಳ್ಳತನ ಮಾಡಿ ಸಿಕ್ಕಿಬಿದ್ದ. ಅವನಿಗೆ ನ್ಯಾಯಾಧೀಶರು ಹತ್ತು ವರ್ಷ ಸೆರೆಮನೆಯ ವಾಸವನ್ನು ವಿಧಿಸಿದರು. ಸೆರೆಮನೆ ಸೇರಿದ ಆತ ನಿತ್ಯವೂ ಅಲ್ಲಲ್ಲಿ ಸಂಚು ಹಾಕುತ್ತಿದ್ದ, ಹೇಗಾದರೂ ತಪ್ಪಿಸಿಕೊಂಡು ಹೋಗಬೇಕು ಎಂದು. ಒಂದು ದಿನ ರಾತ್ರಿ ಭಾರಿ ಗೋಡೆಯನ್ನು ಕಷ್ಟಪಟ್ಟು ಹತ್ತಿ ಕೆಳಗೆ ನೆಗೆದು ಓಡಿಹೋದ. ಮರುದಿನ ಅವನನ್ನು ಹುಡುಕಿಸುವ ಭಾರಿ ಪ್ರಯತ್ನ ಆರಂಭವಾಯಿತು. ಎಲ್ಲೇ ಇದ್ದರೂ ವ್ಯವಸ್ಥಿತವಾದ ಸಿಬ್ಬಂದಿಗಳು ಅವನನ್ನು ಮತ್ತೆ ಹಿಡಿದುಕೊಂಡು ಬಂದು ಶಿಕ್ಷೆಗೆ ಒಳಪಡಿಸುವುದು ನೀತಿಯಾಗಿತ್ತು. ಅದೇ ರೀತಿ ಅರಸಿ ಹಿಡಿದುಕೊಂಡು ಬಂದು ಮೊದಲಿಗಿಂತಲೂ ಹೆಚ್ಚಿನ ಶಿಕ್ಷೆ ವಿಧಿಸಿದರಂತೆ!

ಅಪರಾಧ ಮಾಡಿದ ಮೇಲೆ ಶಿಕ್ಷೆಗೆ ಒಳಗಾಗುವುದು ಅನಿವಾರ್ಯ. ಶಿಕ್ಷೆಯೆಂದಾಗ ಒಬ್ಬನನ್ನು ಪರಾಧೀನನನ್ನಾಗಿ ಮಾಡಿ ಹಿಂಸಿಸುವುದು ಎಂದಷ್ಟೇ ನಮ್ಮ ಬುದ್ಧಿಗೆ ಅನ್ನಿಸಬಹುದು. ಆದರೆ ಶಿಕ್ಷೆ ಎಂಬುದು ಪಾಪಬುದ್ಧಿಯನ್ನು ಪರಿಹರಿಸಿ ಸನ್ಮಾರ್ಗಕ್ಕೆ ತರುವ ಒಂದು ಸಾಧನವಾಗಿದೆ. ಸೆರೆಮನೆಗೆ ಸೇರಿದವನು ಗೋಡೆ ಹಾರಿ ಪಾರಾಗುವ ಉಪಾಯ ಮಾಡಿದರೆ ಸನ್ಮಾರ್ಗಕ್ಕೆ ಬಂದಂತಾಗುವುದಿಲ್ಲ.

ಆದ್ದರಿಂದಲೇ ಅವನಿಗೆ ದುಪ್ಪಟ್ಟು ಮರುಶಿಕ್ಷೆ! ಅದಕ್ಕೆ ಬದಲಾಗಿ ತನ್ನ ಅಪರಾಧವನ್ನು ಅರಿತು ಮತ್ತೊಮ್ಮೆ ತನ್ನ ಜೀವನದಲ್ಲಿ

ಅಂತೆ ವರ್ತಿಸುವುದಿಲ್ಲವೆಂಬ ನಿಲುವು ಏರ್ಪಡುವುದಾದರೆ ಶಿಕ್ಷೆ ಅರ್ಥವತ್ತಾಗುತ್ತದೆ. ತನ್ನಲ್ಲಿ ಅಂತಹ ಒಂದು ನೈಜವಾದ ಪರಿವರ್ತನೆಯೇ ಆಗಿದ್ದರೆ ಅದನ್ನು ಅಧಿಕಾರಿಗೆ ಮನವರಿಕೆ ಮಾಡಿ ಅಧಿಕೃತವಾದ ಮಾರ್ಗದಲ್ಲಿ ಸೆರೆಮನೆಯಿಂದ ಹೊರಬರುವುದಾದರೆ ಇದೂ ಒಂದು ಪುರುಷಪ್ರಯತ್ನವೇ. ಈ ಪ್ರಯತ್ನ ಸಮಂಜಸವಾದ ಪ್ರಯತ್ನವಾದ್ದರಿಂದ ಅದರ ಸತ್ಫಲವೂ ಪಕ್ಕದಲ್ಲೇ ಇರುತ್ತದೆ. ಹೀಗೆ ಸಮಂಜಸವಾದ ಒಂದು ಉಪಾಯವು ನಮ್ಮಲ್ಲಿ ಇಲ್ಲದಿದ್ದಾಗ ಕರ್ಮದ ಫಲ ಹೆಜ್ಜೆಯಿಡಿಸಿದಂತೆ ಹೋಗುವುದು ಅನಿವಾರ್ಯವಾಗುತ್ತದೆ.

ಸಮುದ್ರದಲ್ಲಿ ಸಾಗುವವನಿಗೆ ಕೆಲವು ವಿಶೇಷ ಪರಿಣತಿ ಅಗತ್ಯ. ಅವನಿಗೆ ಯಾವ ಹೊತ್ತಿಗೆ ಯಾವ ದಿಕ್ಕಿನಿಂದ ಬಿರುಗಾಳಿ ಬೀಸಬಹುದೋ! ಎಂಬ ಆತಂಕವಿರುತ್ತದೆ. ಬಿರುಗಾಳಿಯ ಅಬ್ಬರವನ್ನು ನೋಡಿದೊಡನೆ ಈ ಬಿರುಗಾಳಿಗೆ ನಮ್ಮ ದೋಣಿ ಸಿಕ್ಕಿದರೆ ಈ ದಿಕ್ಕಿನಲ್ಲಿ ಇಷ್ಟುದೂರ ಕೊಚ್ಚಿ ಹೋಗಬಹುದು ಎಂದು ಒಂದು ಲೆಕ್ಕಾಚಾರ ಹಾಕುತ್ತಾನೆ. ಏನೂ ವಿಶೇಷ ಪ್ರಯತ್ನವಿಲ್ಲದಿದ್ದರೆ ಹಾಗೆ ದೋಣಿ ಕೊಚ್ಚಿ ಹೋಗುವುದರಲ್ಲಿ ಆಶ್ಚರ್ಯವೇನಿಲ್ಲ. ಆದರೆ ಅಂತಹ ಗಾಳಿಯಲ್ಲೂ ಕೊಚ್ಚಿಹೋಗದಂತೆ ದೋಣಿಯನ್ನು ನಡೆಸುವ ವ್ಯವಸ್ಥೆ ಇದ್ದರೆ ದೋಣಿಯು ನಾವಿಕನ ಇಚ್ಛೆಯಂತೆಯೇ ಸಾಗಲೂ ಬಹುದು. ಅಥವಾ ಅಲ್ಪ ಸ್ವಲ್ಪ ವ್ಯತ್ಯಾಸಗಳಾದರೂ ಭಾರೀ ಆಪತ್ತು ಸಂಭವಿಸುವುದಿಲ್ಲ. ಹಿಂದೊಂದು ಕಾಲದಲ್ಲಿ ದೋಣಿಗಳು ಸಮುದ್ರದಲ್ಲಿ ಮುಳುಗಿ ಹೋಗುತ್ತಿದ್ದಂತೆ ಇಂದಿನ ಆಧುನಿಕ ಉಪಕರಣಗಳಿಂದ ಕೂಡಿದ ಭಾರಿ ಹಡಗು ಎಂಥಹ ಏರಿಳಿತಗಳಲ್ಲೂ ಮುಳುಗದೇ ಮುಂದೆ ಸಾಗುವುದನ್ನು ನೋಡುತ್ತೇವೆ. ಕರ್ಮದ ಫಲವನ್ನು ಬದಲಿಸುವುದರ ಮಟ್ಟಿನ ಸಮಂಜಸವಾದ ಪುರುಷಪ್ರಯತ್ನವಿದ್ದಾಗ ಆ ಪುರುಷಪ್ರಯತ್ನಕ್ಕೆ ಗೆಲುವಿದೆ ಎಂಬುದು ಸಿದ್ಧವಾಗುತ್ತದೆ.

ಆದರೆ ಹಿಂದೆ ಮಾಡಿದ ಕರ್ಮವೆಂಬುದು ನಮ್ಮ ಮನೋಮಯವಾದ ಕೋಶದಲ್ಲಿ ಗುಪ್ತವಾಗಿ ಅಡಗಿದ್ದಾಗ ಅದರ ಪರಿವೆಯೇ ಇಲ್ಲದಿರುವಾಗ ಅದನ್ನು ಎದುರಿಸುವ ಪ್ರಯತ್ನ ಹೇಗೆ ಸಾಧ್ಯ? ನಮ್ಮ ಗೃಹದೊಳಗೇ ಯಾವಾಗಲೋ ಕಳ್ಳ ಬಂದು ಸೇರಿಬಿಟ್ಟಿದ್ದಾನೆ. ಅವನಿರುವುದೇ ನಮಗೆ ಗೊತ್ತಿಲ್ಲ. ನಾವು ನಿರಾತಂಕವಾಗಿ ನಿದ್ರಿಸಿದ್ದೇವೆ ಎಂಬಂತಾದರೆ ಕಳ್ಳ ತನ್ನ ಕಾರ್ಯವನ್ನು ಅನಾಯಾಸವಾಗಿ ಸಾಧಿಸಿಕೊಂಡು ಹೋಗುತ್ತಾನೆ. ಅಲ್ಲಿ ಕಳ್ಳನಿಗೇ ಬಲ ಜಾಸ್ತಿಯಾಗಿರುತ್ತದೆ. ಅದೇ ರೀತಿ ನಮ್ಮ ಬೆನ್ನ ಹಿಂದೆ ಮರೆಯಲ್ಲಿ ನಿಂತು ಹೊಂಚುಹಾಕುವ ಕರ್ಮವು ಒಂದು ರೀತಿಯಲ್ಲಿ ತಮ್ಮ ಪುರುಷಪ್ರಯತ್ನಕ್ಕೂ ಮೀರಿದ್ದಾಗಿದೆಯೆಂದು ಭಾವಿಸುವುದು ಅರ್ಥವತ್ತಾಗಿದೆ.

ಒಂದು ರೋಗ ಆರಂಭವಾಗಿ ಎಷ್ಟೋ ವರ್ಷಗಳ ತರುವಾಯ ಒಬ್ಬನ ಅರಿವಿಗೆ ಬರುವುದುಂಟು. ಅವನ ಅರಿವಿಗೆ ಬರುವ ಮುನ್ನವೇ ರೋಗವು ಧಾತುಗತವಾಗಿ ರೂಢಮೂಲವಾಗಿ ಬಿಟ್ಟಿರುತ್ತದೆ. ಅಯ್ಯೋ! ಹೀಗಾಯಿತಲ್ಲ! ಎಂದು ಖೇದಪಟ್ಟು ಚಿಕಿತ್ಸೆಗೆ ಒಳಗಾಗುವಷ್ಟರಲ್ಲೇ ರೋಗ ಅಸಾಧ್ಯಲಕ್ಷಣವನ್ನು ತಲುಪಿರುತ್ತದೆ. ಹೀಗೊಂದು ಆಕ್ರಮಣವು ನಡೆದಾಗ ಯಾರಾದರೂ ಸೋಲಬೇಕಾಗುತ್ತದೆ! ಅಂತೆಯೇ ಒಂದು ಕರ್ಮವು ತಾನು ಗೂಢವಾಗಿ ತನ್ನ ವ್ಯಾಪಾರವನ್ನು ಆರಂಭಮಾಡಿ, ಬಿಟ್ಟ ಬಾಣದಂತೆ ಇನ್ನೇನು ಈ ಕ್ಷಣಕ್ಕೋ ಮುಂದಿನ ಕ್ಷಣಕ್ಕೋ ಕಬಳಿಸುವುದೆಂಬ ಸಂದರ್ಭವಿದ್ದಾಗ ಅರಿವಿಗೆ ಬಂದರೂ ಅದರಿಂದ ಪಾರಾಗುವುದು ದುಸ್ತರವಾಗುತ್ತದೆ. ಆಗ ವಿಧಿಯೇ ಬಲಿಷ್ಠವಾದದ್ದು ಎಂಬ ಮಾತು ಸಾರ್ಥಕವಾಗುತ್ತದೆ.

ಕೆಲವೊಮ್ಮೆ ರಾಜದ್ರೋಹವೆಸಗಿ ರಾಜನ ಆಗ್ರಹಕ್ಕೆ ತುತ್ತಾಗುವುದುಂಟು. ಅವನ ಜೊತೆಗೆ ಒಂಟಿಯಾಗಿ ಸೆಣೆಸಲುಹೊರಟರೆ ಅದು ಅಸಾಧ್ಯವಾಗಬಹುದು. ರಾಜನ ಅಪಾರವಾದ ಸೇನಾಬಲ, ಸಿದ್ಧತೆ ಮೊದಲಾದವುಗಳ ಮುಂದೆ ಒಂಟಿಯಾದ ಒಬ್ಬ ವ್ಯಕ್ತಿ ಬಿರುಗಾಳಿಗೆ ಸಿಕ್ಕಿದ ತರಗೆಲೆಯಂತೆ ತತ್ತರಿಸಬಹುದು. ಅದೇ ರೀತಿ ಯಾವುದೋ ಒಂದು ಭೀಕರವಾದ ಕರ್ಮಫಲವು ಎದುರಾಗಿ ನಿಂತಾಗ ಅದರ ಮುಂದೆ ಯಾವ ಪುರುಷಪ್ರಯತ್ನವೂ ಫಲಿಸುವುದಿಲ್ಲವೆಂಬ ಸತ್ಯವೂ ಉಂಟು. ಹೀಗೆ ಕರ್ಮದ ಸ್ವರೂಪ, ಪ್ರಮಾಣ, ಸ್ಥಿತಿಗತಿಗಳ ಮೇಲೆ ವಿಮರ್ಶೆಯನ್ನು ತಮ್ಮ ವಿವೇಕ ವಿಜ್ಞಾನಗಳ ಹಿನ್ನೆಲೆಯಲ್ಲಿ ನಡೆಸಿದಾಗ ಹಲವು ತರಹದ ಭಾಷೆಗಳು ಹೊರ ಬಂದಿವೆ.

ಹಿಂದಿನ ಜನ್ಮದಿಂದ ಬಂದ ಕರ್ಮವು ಎಷ್ಟು ಪ್ರಬಲವಾಗಿದೆ? ಅದನ್ನು ಪರಿಹರಿಸಿಕೊಳ್ಳಲು ನಮಗೆ ಸಾಮರ್ಥ್ಯವೆಷ್ಟಿದೆ? ಅವಶ್ಯಕತೆಯೇನು? ಸೌಲಭ್ಯಗಳು ಏನಿವೆ? ಉಪಾಯಗಳೆಷ್ಟು ತಿಳಿದಿವೆ? ಎಂಬುದರ ಹಿನ್ನೆಲೆಯಲ್ಲಿ ಕರ್ಮದ ಪರಿಣಾಮಗಳನ್ನು ತಪ್ಪಿಸಿಕೊಳ್ಳಬಹುದೇ ಅಥವಾ ಅದರ ಸೆಳೆತಕ್ಕೆ ಒಳಗಾಗಿ ಅದನ್ನು ಅನುಭವಿಸಲೇಬೇಕೇ ಎಂಬುದು ನಿರ್ಣಯವಾಗುತ್ತದೆ.

ಒಬ್ಬ ಮನುಷ್ಯನು ಅನಾಯಾಸವಾಗಿ ಜೀರ್ಣಿಸಿಕೊಳ್ಳುವ ಆಹಾರವಸ್ತುಗಳೇ ಇನ್ನೊಬ್ಬನಿಗೆ ಅಜೀರ್ಣವಾಗಿಬಿಡುತ್ತವೆ. ಯೌವನದಲ್ಲಿ ಸುಲಭವಾಗಿ ಜೀರ್ಣವಾಗುವ ವಸ್ತುಗಳೇ ವೃದ್ಧಾಪ್ಯದಲ್ಲಿ ಅಜೀರ್ಣಕ್ಕೆ ಕಾರಣವಾಗುತ್ತವೆ. ಒಂದು ದೇಶದಲ್ಲಿ ಸುಲಭ ಜೀರ್ಣವಾದ ವಸ್ತು ಮತ್ತೊಂದು ದೇಶದಲ್ಲಿ ಅಜೀರ್ಣಕಾರಣವಾಗುತ್ತದೆ. ಹೀಗೆ ದೇಹಪ್ರಕೃತಿ, ಕಾಲ, ದೇಶ ಮೊದಲಾಗಿ ಅನೇಕ ಅಂಶಗಳನ್ನು ಅವಲಂಬಿಸಿ ಕರ್ಮಗಳೂ ಸಹ ಶುಭಾಶುಭಫಲಗಳನ್ನು ವಿಭಿನ್ನವಾದ ಪ್ರಮಾಣದಲ್ಲಿ ನೀಡಲಿವೆ. ಆದ್ದರಿಂದ ಒಂದೇ ವಿಧವಾದ ಕರ್ಮವು ಎಲ್ಲರಿಗೂ ಏಕರೂಪವಾದ ಫಲವನ್ನು ನೀಡಬೇಕೆಂದಿಲ್ಲ. ಹೀಗಿರುವುದರಿಂದಲೇ ಕರ್ಮದ ಪರಿಣಾಮವು ವಿಭಿನ್ನ ರೂಪದಲ್ಲಿ ಗೋಚರಿಸುವುದು, ಅಲ್ಲದೇ ಅವುಗಳಿಗೆ ಪರಿಹಾರವೂ ಸಹ ವಿಭಿನ್ನ ರೂಪದಲ್ಲಿರುವುವು. ಇದರ ಸೂಕ್ಷ್ಮವಾದ ನಡೆಯನ್ನು ಬಲ್ಲವರು 'ಕರ್ಮಸ್ಯಸೂಕ್ಷ್ಮಾ ಗತಿಃ' ಕರ್ಮದ ಗತಿಯು ಸೂಕ್ಷ್ಮವಾದದ್ದು ಎಂದು ಹೇಳಿದ್ದಾರೆ.

ಯಾವ ಕರ್ಮವು ಫಲಕೊಡಲು ಸಿದ್ಧವಾಗಿ, ಫಲವನ್ನು ನೀಡಲು ಅನುಕೂಲವಾದ ಸನ್ನಿವೇಶದಲ್ಲಿ ಜನ್ಮವನ್ನು ಪಡೆಯುವಂತೆ ಮಾಡುತ್ತದೆಯೋ ಅದನ್ನು ಪ್ರಾರಬ್ಧ ಕರ್ಮವೆಂದು ಕರೆದರು. ಪ್ರಾರಬ್ಧವೆಂದರೆ ಫಲ ನೀಡಲು ಆರಂಭವಾಗಿರುವ ಕರ್ಮವೆಂದರ್ಥ. ಅಂತಹ ಪ್ರಾರಬ್ಧಕರ್ಮವನ್ನು ಅನುಭವಿಸಿಯೇ ತೀರಬೇಕು– 'ಪ್ರಾರಬ್ಧಸ್ಯಭೋಗಾದೇವ ಕ್ಷಯಃ'ಎಂದು ಹೇಳಿರುವುದುಂಟು. ಅದಕ್ಕೆ ಕಾರಣ, ಫಲ ಕೊಡುವ ಕರ್ಮವು ದೇಹಮನೋಬುದ್ಧೀಂದ್ರಿಯಗಳಲ್ಲಿ ತನಗೆ ಅನುಕೂಲವಾದ ವ್ಯವಸ್ಥೆಯನ್ನಿಟ್ಟುಕೊಂಡೇ ಆರಂಭವಾಗಿರುತ್ತದೆ. ಒಂದು ಗುಲಾಬಿಯ ಹೂವು ತಾನು ಗಿಡವಾಗಿ ಬೆಳೆಯುವಾಗಲೇ ಬೇಕಾದ ವರ್ಣ, ಸುಗಂಧ, ಆಕಾರ ಮೊದಲಾಗಿ ಬೇಕಾದ ಎಲ್ಲಾ ವಿಷಯಗಳಿಗೆ ಅನುಕೂಲವಾದ ವ್ಯವಸ್ಥೆಯನ್ನು ಇಟ್ಟುಕೊಂಡು

ಹೊರಡುತ್ತೆ. ಅತ್ಯಂತ ಸಣ್ಣದಾದ ಮೊದಲಿನ ಮೊಳಕೆಯಲ್ಲೇ ಅದರ ಗುರಿಯ ಕಡೆಗೆ ಸಾಗಲು ಬೇಕಾದ ಸಕಲ ಅಂಶಗಳೂ ಸೂಕ್ಷ್ಮವಾಗಿರುತ್ತವೆ. ಹುಟ್ಟಿದ ಅನಂತರ 'ಅಯ್ಯೋ! ಒಂದಂಶಮರೆತೆ' ಎಂದುಮತ್ತೆಸಂಪಾದನೆಗೆಹೊರಡುವವಿಷಯವಿಲ್ಲ. ಅದರಂತೆಯೇ ಯಾವ ಕರ್ಮಗಳು ಈ ಜನ್ಮಕ್ಕೆ ಕಾರಣವಾಗಿವೆಯೋ ಅವುಗಳು ತಮ್ಮ ತಮ್ಮಪೀಠಿಕೆಯನ್ನುವ್ಯವಸ್ಥಿತವಾಗಿ ಯೋಜಿಸಿಕೊಂಡೇ ಹುಟ್ಟನ್ನು ಏರ್ಪಡಿಸಿವೆ. ಹುಟ್ಟಿನಲ್ಲಿ ಧಾತುಗತವಾಗಿ ಸೇರಿರುವುದರಿಂದಲೇ ಅವು ಬಲಿಷ್ಠವಾಗಿವೆಯೆಂದು ಕರೆಯಲ್ಪಟ್ಟಿವೆ. ಅವುಗಳ ಸೂಕ್ಷ್ಮವಾದ ನಡೆಯನ್ನು ಅರಿಯುವುದು ದುಸ್ತರ. ಕಾರಣ ಯಾವ ಮನಸ್ಸು-ಬುದ್ಧಿಗಳನ್ನು ಬಳಸಿಕೊಂಡು ಅದನ್ನಳೆಯಬೇಕೋ ಆ ಮನಸ್ಸು-ಬುದ್ಧಿಗಳೇ ಆ ಕರ್ಮಗಳ ಪ್ರಭಾವಕ್ಕೆ ಒಳಗಾಗಿರುತ್ತವೆ! ಒಬ್ಬ ವಸ್ತುವಿನ ಬಣ್ಣವನ್ನು ನಿರ್ಣಯಮಾಡಲು ಹೊರಟ. ಆದರೆ ತಾನೇ ಒಂದು ಬಣ್ಣದ ಕನ್ನಡಕವನ್ನು ಧರಿಸಿದ್ದಾನೆ. ಆಗ ಏನಾಗಬಹುದು? ಅವನು ಧರಿಸಿರುವ ಬಣ್ಣದ ಕನ್ನಡಕವೇ ಅವನಿಗೆ ವಸ್ತುವಿನ ಯಥಾರ್ಥವಾದ ಬಣ್ಣವನ್ನು ಗುರುತಿಸಲು ಬಿಟ್ಟುಕೊಡುವುದಿಲ್ಲ. ಅದೇ ರೀತಿ ಕರ್ಮದ ಪ್ರಭಾವಕ್ಕೆ ಒಳಗಾದ ಮನಸ್ಸು ಕರ್ಮದ ಬಗ್ಗೆ ಯಥಾರ್ಥವಾದ ಚಿತ್ರವನ್ನು ಕೊಡಲಾರದು. ಈ ಕ್ಲಿಷ್ಟತೆಯಿರುವುದರಿಂದ ಪ್ರಾರಬ್ಧಕರ್ಮವನ್ನು ಗೆಲ್ಲಲು ಸಾಧ್ಯವಾಗದು ಎಂದು ಹೇಳಿರುವುದುಂಟು.

ಆದ್ದರಿಂದ ಹುಟ್ಟುವಾಗ ಒಬ್ಬ ಮನುಷ್ಯನಿಗೆ ಅನುಭವಿಸಬೇಕಾದ ಕರ್ಮಗಳಿಗನುಗುಣವಾಗಿ ಆಯುಷ್ಯದ ಬಗ್ಗೆ ಒಂದು ನಿರ್ಣಯವಿರುತ್ತದೆ. ಈ ನಿರ್ಣಯವು ಸೃಷ್ಟಿಯ ನಡೆಯಾಗಿ ಬಂದಿರುವುದರಿಂದ ಬದಲಾಯಿಸುವುದು ಕಷ್ಟ ಸಾಧ್ಯವೆಂಬುದು ಸಾಮಾನ್ಯವಾದ ಮಾತಾದರೂ ಬದಲಾಗುವುದೇ ಇಲ್ಲವೆಂಬ ನಿಯಮವಲ್ಲ. ಆಯುಷ್ಯದ ಅವಧಿಯ ಬಗ್ಗೆ ಪರಿಶೀಲನೆ ಮಾಡಿ ಒಂದು ನಿರ್ಣಯವನ್ನು ಮಾಡಲಿರುವ ಜ್ಯೋತಿಶ್ಶಾಸ್ತ್ರವೇ –

**ಯೇ ಧರ್ಮಕರ್ಮನಿರತಾ ದ್ವಿಜದೇವಭಕ್ತಾಃ**
**ಯೇ ಪಥ್ಯಭೋಜನಜುಷಃ ವಿಜಿತೇನ್ದ್ರಿಯಾ ಯೇ ।**
**ಲೋಕೇ ನರಾ ದಧತಿ ಯೇ ಕುಲಶೀಲಲೀಲಾಂ**
**ತೇಷಾಮಿದಂ ಕಥಿತಮಾಯುರುದಾರಧೀಭಿಃ ॥**

'ಯಾರು ತಮ್ಮ ತಮ್ಮಹುಟ್ಟಿಗೆ ತಕ್ಕ ಧರ್ಮವನ್ನು ಉಳಿಸಿಕೊಂಡು ಅದಕ್ಕನುಗುಣವಾದ ಕರ್ಮದಲ್ಲಿ ನಿರತರಾಗಿರುತ್ತಾರೋ, ಸಹಜವಾಗಿ ದ್ವಿಜ ಮತ್ತು ದೇವರಲ್ಲಿ ಭಕ್ತಿಯನ್ನು ಹೊಂದಿರುತ್ತಾರೆಯೋ, ಅವರವರ ದೇಹಪ್ರಕೃತಿ ಸ್ಥಿತಿಗತಿಗಳಿಗೆ ತಕ್ಕ ಆಹಾರವನ್ನು ಸ್ವೀಕರಿಸುತ್ತಾರೋ, ಇಂದ್ರಿಯ ನಿಗ್ರಹವುಳ್ಳವರೋ, ಅವರವರ ಕುಲಕ್ಕೆ ತಕ್ಕ ಶೀಲವನ್ನು ಹೊಂದಿರುತ್ತಾರೋ ಅಂತಹವರಿಗೆ ಪ್ರಾರಬ್ಧಕರ್ಮದ ಕಾರಣದಿಂದ ನಿರ್ಣಯವಾಗುವ ಆಯುಷ್ಯವೆಷ್ಟೆಂದು ಉದಾರಬುದ್ಧಿಯ ಶಾಸ್ತ್ರಜ್ಞರು ನಿರ್ಣಯಿಸಿದ್ದಾರೆ' ಎಂದುಹೇಳುತ್ತಿದೆ. ಒಬ್ಬವೈದ್ಯ ಒಂದು ಔಷಧವನ್ನು ಇಷ್ಟುಕಾಲಬಳಸಿದರೆ ರೋಗವು ಹೋಗಬಹುದೆಂದು ಅನುಭವದಮೇಲೆ ಕಾರ್ಯಕಾರಣ.

(ಮುಂದುವರೆಯುವುದು)

Hiranya's
TAPOVANA

**Where the quality of your life is our passion**

*Hiranya's Tapovana is a Blissful Senior Living Home for Brahmins. It is located on the foot hills of Savandurga Hills in Magadi Taluk amongst beautiful nature for a happier, healthier and longer Vanaprasta Life.*

Friendly Atmosphere
Clean Spacious Rooms
Qualified Medical Attention
Good Quality Organic Vegetarian Food
Spiritual and Engaging Lifestyle

Ph: Akhil S Hiranya – 7892662025 |
Manikya Sridhar - 9886120267 | B H Sridhar - 9886151371

Website: www.hiranyas.com E-mail: info@hiranyas.com

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)**
**ವಧು-ವರ ಮಾಹಿತಿ ಕೇಂದ್ರ, ಬೆಂಗಳೂರು**
**ಸ್ಥಳ : ಗಾಯತ್ರಿ ಭವನ**
ನಂ.3070, 14ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ,
ಬನಶಂಕರಿ 2ನೆ ಹಂತ, ಬೆಂಗಳೂರು-70.
ದೂರವಾಣಿ : 080-26770066/26771695
ಸಮಯ : ಸಂಜೆ 5.00 ರಿಂದ 7.00 ರವರೆಗೆ
ಮಂಗಳವಾರ ಮತ್ತು ಶನಿವಾರ

**ನಿಯಮಗಳು :**
1. ವರ/ವಧು ಅಥವಾ ತಾಯಿ ತಂದೆ ಯಾರಾದರು ಒಬ್ಬರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯರಾಗಿರಬೇಕು.
2. ವಧು/ವರರ ಪೋಸ್ಟ್ ಕಾರ್ಡ್ ಫೋಟೋ ಮತ್ತು ವಿವರ ತರಬೇಕು.
3. ಶುಲ್ಕ ರೂ. 500/=

**ಸಂಚಾಲಕರು** : ಶ್ರೀಮತಿ ಜಯಲತಾ ಸತ್ಯನಾರಾಯಣ್
ಮೊ. : 9916325902
**ಸದಸ್ಯರು**
ಶ್ರೀಮತಿ ನಳಿನಿ ನಟರಾಜ್, ಮೊ. : 9481788495
ಶ್ರೀಮತಿ ಗಾಯತ್ರಿ ರಾವ್, ಮೊ>9980481245

# ಇತ್ತೀಚಿನ ಸುದ್ದಿಗಳು



## 'ವಿಪ್ರವೈದ್ಯ ವೇದಿಕೆ' ಸಹಯೋಗ

ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರ ನೇತೃತ್ವದಲ್ಲಿ ವೈದ್ಯಕೀಯ ವಿಭಾಗಗಳ ಸೇವೆಗಳನ್ನು ಸಮಾಜದ ಬಾಂಧವರಿಗೆ ತಲುಪಿಸುವಲ್ಲಿ ಇರುವ ಸವಾಲುಗಳು ಮತ್ತು ಈ ಸವಾಲುಗಳಿಗೆ ಕಂಡುಕೊಳ್ಳಬೇಕಾದ ಉಪಾಯಗಳ ಬಗ್ಗೆ ಬೆಂಗಳೂರಿನ ಹೆಸರಾಂತ ವೈದ್ಯರುಗಳಿರುವ "ವಿಪ್ರ ವೈದ್ಯ ವೇದಿಕೆಯ" ವೈದ್ಯರೊಡನೆ ವಿಪ್ರರಿಗೆ ವೈದ್ಯಕೀಯ ನೆರವು ನೀಡುವ ಕುರಿತು ಸುಧೀರ್ಘ ಚರ್ಚೆ ನಡೆಯಿತು.

## ಡಾ|| ದೇವೀಶೆಟ್ಟಿಯವರಿಗೆ ಗೌರವ ಸಮರ್ಪಣೆ

ಬ್ರಾಹ್ಮಣ ಸಮುದಾಯದವರಿಗೆ ವೈದ್ಯಕೀಯ ಸಹಾಯ ನೀಡುವ ವಿಷಯದ ಬಗ್ಗೆ ನಾರಾಯಣ ಹೃದಯಾಲಯದ ಅಧ್ಯಕ್ಷರಾದ ಶ್ರೀ ದೇವಿಶೆಟ್ಟಿಯವರಿಗೆ ಅವರ ಜೊತೆ ಸಮಾಲೋಚನೆ ನೆಡಸಲಾಗಯಿತು. ವೈದ್ಯಕೀಯ ಸಹಾಯದ ಜೊತೆಗೆ ಇನ್ಸೂರೆನ್ಸ್ ಬಗ್ಗೆ ಸಹ ಚರ್ಚಿಸಲಾಯಿತು. ಎಲ್ಲ ರೀತಿಯ ಸಹಕಾರ ನೀಡುವುದಾಗಿ ಶ್ರೀ ದೇವಿ ಶೆಟ್ಟರು ತಿಳಿಸಿದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಪರವಾಗಿ ಶ್ರೀ ದೇವಿ ಶೆಟ್ಟಿ ಅವರನ್ನು ಗೌರವಿಸಲಾಯಿತು.





## ಕಂದಾಯ ಸಚಿವ ಆರ್. ಅಶೋಕ್ ಭೇಟಿ

ಮಾನ್ಯ ಕಂದಾಯ ಸಚಿವರಾದ ಆರ್ ಅಶೋಕ್ ಅವರನ್ನು ಭೇಟಿ ಮಾಡಿ ಮಹಾಸಭಾಗೆ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡುವ ಬಗ್ಗೆ ಮನವಿ ಪತ್ರವನ್ನು ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಹಾಗೂ ಉಪಾಧ್ಯಕ್ಷರಾದ ರಾಜೇಂದ್ರ ಪ್ರಸಾದ್, ಸಂಘಟನಾ ಕಾರ್ಯದರ್ಶಿಗಳಾದ ರಾಘವೇಂದ್ರ ಭಟ್, ಖಜಾಂಚಿಗಳಾದ ವೆಂಕಟೇಶ್ ನಾಯಕ್, ಜಂಟಿ ಕಾರ್ಯದರ್ಶಿಗಳಾದ ಪುರುಷೋತ್ತಮ್ ಹಾಗೂ ರವಿಕುಮಾರ್ ಮತ್ತು ಹಿರಿಯರ ಪರಿಷತ್ತಿನವರಾದ ಹಿರಿಯಣ್ಣಸ್ವಾಮಿ ಮುಂತಾದ ಹಿರಿಯರು ಉಪಸ್ಥಿತರಿದ್ದರು.

## ಬಿ.ಎನ್.ವಿ. ಪ್ರತಿಮೆ ಅನಾವರಣ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ ನಡೆಸುತ್ತಿರುವ ವಿಪ್ರ ವಾಸಿನಿ ಮಹಿಳಾ ವಸತಿ ಗೃಹದಲ್ಲಿ ಹಿಂದಿನ ಅಧ್ಯಕ್ಷರು ಮತ್ತು ಮಹಿಳಾ ವಸತಿ ಗೃಹದ ಸ್ಥಾಪನೆಗೆ ಕಾರಣಕರ್ತರಾದ ಶ್ರೀ BNV ಸುಬ್ರಹ್ಮಣ್ಯಂ ಅವರ ಪುತ್ಥಳಿಯ ಅನಾವರಣೆ ಮಾಡಲಾಯಿತು. ಈ ಸಂಧರ್ಬದಲ್ಲಿ ಶ್ರಿಮತಿ ಸೀತಾ ಸುಬ್ರಮಣ್ಯ ಅವರು ಹಾಗೂ ಶ್ರೀ ಹಿರಿಯಣಸ್ವಾಮಿ, ಶ್ರಿ ರಾಮಮೂರ್ತಿ, ಶ್ರೀ ಹೆಚ್.ಆರ್. ಸುರೇಶ್, ಶ್ರೀ ಭಾನುಪ್ರಕಾಶ್ ಶರ್ಮಾ, ಶ್ರೀ ಬೆಳ್ಳೂರು ಶಿವರಾಂ, ಶ್ರೀ ಲಕ್ಷ್ಮೀನಾರಾಯಣ ಭಟ್ಟ, ಶ್ರೀ ಹೊನ್ನಪ್ಪ, ಶ್ರೀ ರಾಘವೇಂದ್ರ ಭಟ್, ಶ್ರೀ ರಾಜೇಂದ್ರ ಪ್ರಸಾದ್ ಮತ್ತು ಎಲ್ಲ ವಿಪ್ರ ಪ್ರಮುಖರು ಉಪಸ್ಥಿತರಿದ್ದರು.









ದಿನಾಂಕ ೧೧-೦೨-೨೦೨೩ರಂದು ಬೆಂಗಳೂರಿನ ಗಾಯಿತ್ರಿ ಭವನದಲ್ಲಿ ನೆಡದ ಮಹಾಸಭಾ ೩ನೇ ಕಾರ್ಯಕಾರಿಣಿ ಸಭೆ.

PERIODICAL RATE

VIPRANUDI KANNADA MONTHLY

RNI No. KARKAN/2009/29931. Posted at BG PSO, Mysore Road, Bangalore-560 026,
Permitted to Post on 25-02-2023 Date of Publishing 22-02-2023

ಶುಭಾಶಯಗಳು

ಡಾ|| ಉದಯ್ ಬಿ. ಗರುಡಾಚಾರ್

ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ



Dr. Uday B. Garudachar

MLA, Chickpet Assembly Constituency

/BGUdayBJP www.udaygarudachar.in

If undelivered please return to :

**VIPRANUDI**

Akhila Karnataka Brahmana Mahasabha (R.)
"Gayathri Bhavana", No. 3070, 9th Main Road
Gayathri Bhavana Road, (14th Cross) BSK 2nd Stage
BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R)
"Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070.
And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar